ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 22 ಗುರುವಾರ 2025

₹4

ಸಂಪುಟ: 46 | ಸಂಚಿಕೆ: 36 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಹಾಸನ ಮಿತ್ರ

ರುದ್ರಪಟ್ಟಣ ಸಂಗೀತೋತ್ಸವದಲ್ಲಿ ಯುವ ಪ್ರತಿಭೆಗಳ ಝೇಂಕಾರ



ಕೊಣನೂರು (ಹಾಸನ)ಮೇ21– 'ಸಂಗೀತದ ಹಬ್ಬ'ವೆಂದೇ ಪ್ರಖ್ಯಾತವಾಗಿರುವ ಇಲ್ಲಿನ ರುದ್ರಪಟ್ಟಣದ 5 ದಿನಗಳ ಸಂಗೀತೋತ್ಸವಕ್ಕೆ ಬುಧವಾರ ಅದ್ಧೂರಿ ಚಾಲನೆ ದೊರಕಿತು. 22ನೇ ವರ್ಷದ ಸಂಗೀತೋತ್ಸವದಲ್ಲಿ ಮೊದಲ ದಿನವೇ ಯುವ ಪ್ರತಿಭೆಗಳು ತಮ್ಮ ಹಾಡುಗಾರಿಕೆ, ನೃತ್ಯಗಳಿಂದ ಜನರ ಮನಸೂರೆಗೊಂಡರು.

ಗಾಯಕಿ ಮಧುರಾ ಪ್ರಶಾಂತ್ ನಡೆಸಿಕೊಟ್ಟ ಕಛೇರಿಯಲ್ಲಿ 'ಮಹಾಗಣಪತಿ' ಕೃತಿಯನ್ನು ಅಠಾಣ ರಾಗದಲ್ಲಿ, ತ್ಯಾಗರಾಜರ 'ಶ್ರೀರಾಮ ಪಾದಮ' ಕೃತಿಯನ್ನು ಅಮೃತವಾಹಿನಿ ರಾಗದಲ್ಲಿ, 'ಬ್ರೋವ ಭಾರಮಾ' ಕೃತಿಯನ್ನು ಬಹುದಾರಿ ರಾಗದಲ್ಲಿ ಮತ್ತು ವಾದಿರಾಜರ ಕೃತಿ 'ನಾರಾಯಣ ಎನ್ನಿರೋ' ಅನ್ನು ಹಂಸಧ್ವನಿ ರಾಗದಲ್ಲಿ ಪ್ರಸ್ತುತಪಡಿಸಿದರು. ಉತ್ಸವವನ್ನು ಉದ್ಘಾಟಿಸಿ ಮಾತನಾಡಿದ ಆಯೋಜಕ ವಿದ್ವಾನ್ ಆರ್.ಕೆ.ಪದ್ಮನಾಭ್, ರುದ್ರಪಟ್ಟಣದಲ್ಲಿ ಜರುಗುವ ಸಂಗೀತೋತ್ಸವದಲ್ಲಿ ದೇಶದ ವಿವಿಧ ಭಾಗಗಳ ಸಂಗೀತ ಕಲಾವಿದರು ಸ್ವಯಂ ಆಸಕ್ತಿಯಿಂದ ಕಾರ್ಯಕ್ರಮ ನೀಡುವ ರೀತಿಯು ಇಲ್ಲಿನ ಸಂಗೀತ ಪರಂಪರೆಗೆ ದೊರಕುತ್ತಿರುವ ದೊಡ್ಡ ಗೌರವ ಎಂದರು.

22 ವರ್ಷಗಳಿಂದ ಜರುಗುತ್ತಿರುವ ಸಂಗೀತೋತ್ಸವದಲ್ಲಿ, ವರ್ಷದಿಂದ ವರ್ಷಕ್ಕೆ ಕಲಾವಿದರು ಮತ್ತು ಶ್ರೋತೃಗಳ ಸಂಖ್ಯೆ ಹೆಚ್ಚಾಗುತ್ತಿದೆ. 5 ದಿನಗಳ ಸಂಗೀತದ ಹಬ್ಬ ಆಚರಣೆ ಮಾಡುತ್ತಿರುವುದು ಅವಿಸ್ಮರಣೀಯ. ರುದ್ರಪಟ್ಟಣದ ಸಂಗೀತೋತ್ಸವಕ್ಕೆ ಬೇಡಿಕೆ ಹೆಚ್ಚುತ್ತಿದೆ ಎಂದರು.

ಕಸಾಯಿಖಾನೆಗೆ ಸಾಗಿಸುತ್ತಿದ್ದ ಜಾನುವಾರು ರಕ್ಷಣೆ

ಬೇಲೂರು, ಮೇ 21–ಅಕ್ರಮವಾಗಿ ಕಸಾಯಿಖಾನೆಗೆ ಸಾಗಿಸುತ್ತಿದ್ದ ಜಾನುವಾರುಗಳನ್ನು ಪೊಲೀಸರು ರಕ್ಷಿಸಿ, ವಾಹನ ಚಾಲಕ ಹಾಸನದ ಖಲೀಲ್ ಪಾಷಾ(30)ನನ್ನು ಬಂಧಿಸಿದರು. ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರ ಮಾಹಿತಿ ಅನ್ವಯ ಪೊಲೀಸರು ದಾಳಿ ನಡೆಸಿದಾಗ ಆರೋಪಿ ಹಾಸನದ ಕಡೆಯಿಂದ ಚಿಕ್ಕಮಗಳೂರು ಕಡೆಗೆ ಸರಕು ಸಾಗಾಣಿಕೆ ವಾಹನದಲ್ಲಿ ಸಾಗಿಸುತ್ತಿರುವುದು ಖಚಿತವಾಯಿತು. ಕೂಡಲೆ ಪಿಎಸ್ಐ ಶಿವನಗೌಡ ಪಾಟೀಲ್ ನೇತೃತ್ವದಲ್ಲಿ ಪಟ್ಟಣದ ರಾಯಪುರ ಗ್ರಾಮದ ಬಳಿ ಅತಿ ವೇಗವಾಗಿ ಚಲಿಸುತ್ತಿದ್ದ ವಾಹನ ಅಡ್ಡಗಟ್ಟಿ ಪರಿಶೀಲಿಸಿದರು. ಅಲ್ಲಿ ಜಾನುವಾರು ಕಂಡುಬಂದವು. ಬೇಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ, ಜಾನುವಾರುಗಳನ್ನು ಗೋ ಶಾಲೆಗೆ ಕಳುಹಿಸಿಕೊಡಲಾಯಿತು.

ವಿಶ್ವ ಹಿಂದೂ ಪರಿಷತ್ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿ ನಾಗೇಶ್ ಮಾತನಾಡಿ, ಪೊಲೀಸ್, ಪುರಸಭೆ ಹಾಗೂ ಕಂದಾಯ ಇಲಾಖೆ ತಿಂಗಳಿಗೊಮ್ಮೆ ಗೋ ಮಾಂಸ ಅಡ್ಡೆಗಳ ಮೇಲೆ ದಾಳಿ ನಡೆಸುತ್ತಿವೆ. ಆದರೂ, ಪಟ್ಟಣದಲ್ಲಿ ಕದ್ದುಮುಚ್ಚಿ ಮಾರಾಟ ಮಾಡಲಾಗುತ್ತಿದೆ ಎಂದರು. ದಾಳಿಯಲ್ಲಿ ಪೊಲೀಸ್ ಇಲಾಖೆಯ ದೇವರಾಜು, ದೇವೇಂದ್ರ, ಅಣ್ಣಪ್ಪ, ಅರುಣ್, ಭರತ್ ಪಾಲ್ಗೊಂಡಿದ್ದರು.

ನಾಳೆ ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ಡೇ ಕೇರ್ ಕಿಮೊಥೆರಪಿ ಕೇಂದ್ರ ಉದ್ಘಾಟನೆ

ಮೈಸೂರು,ಮೇ 21(ಪಿಎಂ)– ಕ್ಯಾನ್ಸರ್ ಕಾಯಿಲೆ ಚಿಕಿತ್ಸೆಯಲ್ಲಿ ಕಿಮೊಥೆರಪಿ ಸಹ ಪರಿಣಾಮಕಾರಿ ಪಾತ್ರ ವಹಿಸುತ್ತದೆ. ಹಾಗಾಗಿ ರಾಜ್ಯದ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ 20 ಹಾಸಿಗೆಗಳ ಡೇ ಕೇರ್ ಕಿಮೊಥೆರಪಿ ಕೇಂದ್ರಗಳನ್ನು ಆರಂಭಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಅಂತೆಯೇ ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ಸಹ ಡೇ ಕೇರ್ ಕಿಮೊಥೆರಪಿ ಕೇಂದ್ರವು ಮೇ 23ರಂದು ಉದ್ಘಾಟನೆಗೊಳ್ಳಲಿದೆ.

ಮೈಸೂರಿನ ಮೇಟಗಳ್ಳಿಯ ಕೆಆರ್ಎಸ್ ರಸ್ತೆಯಲ್ಲಿರುವ ಜಿಲ್ಲಾಸ್ಪತ್ರೆಯಲ್ಲಿ ಈಗಾಗಲೇ ಡೇ ಕೇರ್ ಕಿಮೊಥೆರಪಿ ಕೇಂದ್ರವನ್ನು ಸಜ್ಜುಗೊಳಿಸಲಾಗಿದೆ. ಮೈಸೂರು ಮತ್ತು ನೆರೆ ಜಿಲ್ಲೆಗಳಿಂದ ಬಡ ರೋಗಿಗಳು ಕಿಮೊಥೆರಪಿ ಚಿಕಿತ್ಸೆಗಾಗಿ ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಗೆ ಹೋಗಬೇಕಾದ ಸನ್ನಿವೇಶವಿದೆ. ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ಈ ಕೇಂದ್ರ ಆರಂಭಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕಿಮೊಥೆರಪಿಗಾಗಿ ಜಿಲ್ಲೆಯ ಬಡ ರೋಗಿಗಳು ಕಿದ್ವಾಯಿ ಆಸ್ಪತ್ರೆಗೆ ಹೋಗಬೇಕಾದ ಅನಿವಾರ್ಯತೆ ತಪ್ಪಲಿದೆ.



ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ಉದ್ಘಾಟನೆಗೆ ಸಜ್ಜುಗೊಂಡಿರುವ ಡೇ ಕೇರ್ ಕಿಮೊಥೆರಪಿ ಕೇಂದ್ರ

ಜೊತೆಗೆ ಬಡ ರೋಗಿಗಳಿಗೆ ಪ್ರಯಾಣದ ವೆಚ್ಚ ಸಹ ತಪ್ಪಲಿದೆ. ಇದೇ ದೃಷ್ಟಿಕೋನದಲ್ಲಿ ರಾಜ್ಯದ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ಡೇ ಕೇರ್ ಕಿಮೊಥೆರಪಿ ಕೇಂದ್ರಗಳ ಆರಂಭಕ್ಕೆ ರಾಜ್ಯ ಸರ್ಕಾರ ಮುಂದಾಗಿದೆ. ಆಯಾಯ ಜಿಲ್ಲೆಯ ಬಡ ರೋಗಿಗಳು ತವರು ಜಿಲ್ಲೆಯಲ್ಲೇ ಕಿಮೊಥೆರಪಿ ಚಿಕಿತ್ಸೆ ಪಡೆಯಲು ಅನುಕೂಲವಾಗಲೆಂಬ ಉದ್ದೇಶದೊಂದಿಗೆ ಸರ್ಕಾರ ಈ ಕೇಂದ್ರಗಳ ಆರಂಭಿಸುವತ್ತ ಹೆಜ್ಜೆನ್ನಿಟ್ಟಿದೆ.

ಅಂತೆಯೇ ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ಈ ಕೇಂದ್ರಕ್ಕೆ ಚಾಲನೆ ನೀಡುವ ಮೂಲಕ ರಾಜ್ಯದ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ಹಂತ ಹಂತವಾಗಿ ಡೇ ಕೇರ್ ಕಿಮೊಥೆರಪಿ ಕೇಂದ್ರಗಳ ಪ್ರಾರಂಭಿಸಲು ಸರ್ಕಾರ ಮುಂದಾಗಿದೆ. ಪುರುಷರು ಮತ್ತು ಮಹಿಳೆಯರಿಗೆ ತಲಾ 10 ಹಾಸಿಗೆಗಳು ಸೇರಿದಂತೆ ಒಟ್ಟು 20 ಹಾಸಿಗೆಗಳೊಂದಿಗೆ ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ಈ ಕೇಂದ್ರ ಕಾರ್ಯಾರಂಭ ಮಾಡುತ್ತಿದೆ.

ಮುಖ್ಯಮಂತ್ರಿಗಳಿಂದ ಉದ್ಘಾಟನೆ...

ಮೈಸೂರು ಜಿಲ್ಲಾಸ್ಪತ್ರೆಯ ಡೇ ಕೇರ್ ಕಿಮೊಥೆರಪಿ ಕೇಂದ್ರವನ್ನು ಮೇ 23ರಂದು ಸಂಜೆ 5 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಇದೇ ವೇಳೆ ವರ್ಚ್ಯುಯಲ್ ಮೂಲಕ 16 ಜಿಲ್ಲೆಗಳಲ್ಲಿ ಡೇ ಕೇರ್ ಕಿಮೊಥೆರಪಿ ಕೇಂದ್ರಗಳ ಕಾರ್ಯಾರಂಭಕ್ಕೂ ಮುಖ್ಯಮಂತ್ರಿಗಳು ಚಾಲನೆ ನೀಡಲಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಜಿಲ್ಲಾಸ್ಪತ್ರೆಯ ಡೇ ಕೇರ್ ಕಿಮೊಥೆರಪಿ ಕೇಂದ್ರದ ನೋಡಲ್ ಅಧಿಕಾರಿಯೂ ಆದ ಆರೋಗ್ಯ ಇಲಾಖೆಯ ಜಿಲ್ಲಾ ಸರ್ವೇಕ್ಷಣಾ ಘಟಕದ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಡಿ.ಜಿ.ನಾಗರಾಜ್, ವಿಶೇಷವಾಗಿ ಬಡ ರೋಗಿಗಳಿಗೆ ಅನುಕೂಲ ಕಲ್ಪಿಸುವ ಹಿನ್ನೆಲೆಯಲ್ಲಿ ಈ ಕೇಂದ್ರ ಆರಂಭಿಸಲಾಗುತ್ತಿದೆ. ಇಲ್ಲಿ ಕಿಮೊಥೆರಪಿ ಚಿಕಿತ್ಸೆ ಸಂಪೂರ್ಣ ಉಚಿತ. ಆರೋಗ್ಯ ಇಲಾಖೆಯ ಜಿಲ್ಲಾ ಸರ್ವೇಕ್ಷಣಾ ಘಟಕ ನೋಡಲ್ ಏಜೆನ್ಸಿಯಾಗಿ ಕಾರ್ಯ ನಿರ್ವಹಿಸಲಿದೆ. ಬೆಂಗಳೂರಿನ ಕಿದ್ವಾಯಿ ಆಂಕೊಲಾಜಿ ಸಂಸ್ಥೆ, ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಆರೋಗ್ಯ ಇಲಾಖೆಯ ಸಮನ್ವಯದಲ್ಲಿ ಈ ಕೇಂದ್ರ ಕಾರ್ಯ ನಿರ್ವಹಿಸಲಿದೆ ಎಂದು ತಿಳಿಸಿದರು.

ಈ ಕೇಂದ್ರದಲ್ಲಿ ಕೆಆರ್ ಆಸ್ಪತ್ರೆಯಲ್ಲಿರುವ ಮೆಡಿಕಲ್ ಆಂಕೊಲಾಜಿಸ್ಟ್ ಡಾ.ವಿಕಾಸ್ ಅವರು ರೋಗಿಗಳಿಗೆ ಕಿಮೊಥೆರಪಿ ಚಿಕಿತ್ಸೆ ನೀಡಲಿದ್ದಾರೆ. ಆರೋಗ್ಯ ಇಲಾಖೆಯಲ್ಲಿ ತರಬೇತಿ ಪಡೆದ ಸ್ಟಾಫ್ ನರ್ಸ್‌ಗಳು ಇದ್ದು, ಅವರನ್ನು ಈ ಕೇಂದ್ರಕ್ಕೆ ನಿಯೋಜಿಸಲಾಗುತ್ತಿದೆ. ಕಿದ್ವಾಯಿ ಆಸ್ಪತ್ರೆಯಿಂದ ಅಗತ್ಯವಾದ ಔಷಧ ಒದಗಿಸಲಾಗುತ್ತದೆ. ಮೈಸೂರು ಹಾಗೂ ನೆರೆ ಜಿಲ್ಲೆಗಳ ಕ್ಯಾನ್ಸರ್ ರೋಗಿಗಳಿಗೆ ಈ ಕೇಂದ್ರದಿಂದ ಅನುಕೂಲವಾಗಲಿದೆ ಎಂದು ಹೇಳಿದರು.

ಜೂನ್ 7ಕ್ಕೆ ಬಕ್ರೀದ್

ಮಿಲೇನಿಯಂ ಸರ್ಕಲ್ ಕುರಿ ಸಂತೆಯಲ್ಲಿ ಭರ್ಜರಿ ವ್ಯಾಪಾರ

ಮೈಸೂರು, ಮೇ 21(ಎಂಕೆ)– ಮುಸ್ಲಿಮರ ಪವಿತ್ರ ಹಬ್ಬಗಳಲ್ಲಿ ಒಂದಾದ ಬಕ್ರೀದ್(ಜೂ.7) ಹಿನ್ನಲೆಯಲ್ಲಿ ಮೈಸೂರಿನಲ್ಲಿ ಕುರಿ ವ್ಯಾಪಾರ ಭರ್ಜರಿಯಾಗಿ ನಡೆಯುತ್ತಿದೆ. ಸಂಜೆಯಾಗುತ್ತಿದ್ದಂತೆ ನಗರದ ಎಲ್ಐಸಿ ವೃತ್ತ(ಮಿಲೇನಿಯಂ ಸರ್ಕಲ್)ದ ಸುತ್ತ ಗುಂಪುಗೂಡುತ್ತಿರುವ ಕುರಿ ವ್ಯಾಪಾರಿಗಳು, ವಿವಿಧ ತಳಿಯ ಕುರಿಗಳ ಮಾರಾಟದಲ್ಲಿ ತಲ್ಲೀನರಾಗಿದ್ದಾರೆ.

ಮಂಡ್ಯ ಜಿಲ್ಲೆಯ ನಾಗಮಂಗಲ, ನಂಜನಗೂಡು, ಶ್ರೀರಂಗಪಟ್ಟಣ, ಬನ್ನೂರು, ಪಾಂಡವಪುರ, ಚಾಮರಾಜನಗರ, ಹುಣಸೂರು, ಮದ್ದೂರು ಭಾಗದಿಂದ ವ್ಯಾಪಾರಿಗಳು ಕುರಿಗಳನ್ನು ತಂದು ಮಾರಾಟ ಮಾಡಲಾಗುತ್ತಿದೆ.

ಕುರಿಗಳನ್ನು ಗೂಡ್ಸ್ ಗಾಡಿಯಲ್ಲಿ ತುಂಬಿಕೊಂಡು ಬರುವ ವ್ಯಾಪಾರಿಗಳು ಎಲ್ಐಸಿ ವೃತ್ತದ ಸುತ್ತಲಿನ ಮರದ ನೆರಳಿನಲ್ಲಿ ಅವನ್ನು ಕಟ್ಟಿಹಾಕಿ ನಂತರ ವೃತ್ತ ಮಧ್ಯದಲ್ಲಿರುವ ಜಾಗದಲ್ಲಿ ಮಾರಾಟ ಮಾಡುತ್ತಿದ್ದಾರೆ. ಬಂಡೂರು, ಬನ್ನೂರು, ಸಿಂಧೂರ, ಅಮೀನಗಢ, ಯಲಗಾ, ನಾಟಿ ಸೇರಿದಂತೆ ವಿವಿಧ ತಳಿಯ ಕುರಿಗಳು



ಮೈಸೂರಿನ ಮಿಲೇನಿಯಂ ಸರ್ಕಲ್‌ನಲ್ಲಿ ಕುರಿಗಳ ವ್ಯಾಪಾರ ನಡೆಯುತ್ತಿರುವುದು

ಬಂದಿದ್ದು, ರಾತ್ರಿ 11 ಗಂಟೆಯವರೆಗೂ ವ್ಯಾಪಾರ–ವಹಿವಾಟು ನಡೆಸಲಾಗುತ್ತಿದೆ.

ತೂಕ ಮತ್ತು ತಳಿಗೆ ಅನುಗುಣವಾಗಿ ಕುರಿಗಳಿಗೆ ರೇಟ್ ಫಿಕ್ಸ್ ಮಾಡಲಾಗಿದ್ದು, ಲಕ್ಷಕ್ಕೂ ಅಧಿಕ ಹಣಕ್ಕೆ ವ್ಯಾಪಾರವಾಗುವ ಕುರಿಗಳು ಬಂದಿವೆ. ಅದರಲ್ಲೂ ಫೈಟರ್ ಕುರಿಗಳು ಎಲ್ಲರ ಆಕರ್ಷಣೆಯಾಗಿದ್ದು, ಕೊಂಡುಕೊಳ್ಳದಿದ್ದರೂ ನೋಡುವುದಕ್ಕಾಗಿಯೇ ನೂರಾರು ಜನರು ಸೇರುತ್ತಿದ್ದಾರೆ.

ಈಗಷ್ಟೇ ವ್ಯಾಪಾರ ಜೋರಾಗಿದೆ: ಬಕ್ರೀದ್ ಹಬ್ಬ ಮುಂದಿನ ತಿಂಗಳಿದ್ದು, ದಿನೇ ದಿನೆ ವ್ಯಾಪಾರಿಗಳ ಮತ್ತು ಗ್ರಾಹಕರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಈಗಷ್ಟೇ ವ್ಯಾಪಾರ ಜೋರಾಗಿದ್ದು, ಹಲವರು ಖರೀದಿಗಾಗಿ ಕೇಳುತ್ತಿದ್ದಾರೆ. ನಾಟಿ ಕುರಿ 18 ಸಾವಿರ ರೂ. ಇದ್ದು ಕೇಳಿಕೊಂಡು ಹೋಗುತ್ತಿದ್ದಾರೆ ಎಂದು ಹುಣಸೂರಿನ ಕುರಿ ವ್ಯಾಪಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಫೈಟರ್ ಕುರಿ 50 ಸಾವಿರ: ನಂಜನಗೂಡಿನ ಕುರಿ ವ್ಯಾಪಾರಿಗಳಾದ ಅಸ್ಲಾಂ, ಜಾಬಿರ್, ಫಯಾಜ್ ತಂದಿರುವ ಹತ್ತಾರು ಫೈಟರ್ ಕುರಿಗಳು ನೋಡಿಗರ ಆಕರ್ಷಣೆಯಾಗಿದ್ದು, ಒಂದೊಂದು ಕುರಿಗೆ 50 ಸಾವಿರ ರೂ.ನಂತೆ ಮಾರಾಟ ಮಾಡುತ್ತಿದ್ದಾರೆ.

15 ಖರೀದಿಸಿದ್ದೇನೆ ಇನ್ನೂ ಬೇಕು!: ಈಗಾಗಲೇ ಬಂಡೂರು ಕುರಿ ಸೇರಿ ವಿವಿಧ ತಳಿಯ 15 ಕುರಿಗಳನ್ನು ಖರೀದಿಸಿದ್ದೇನೆ. ನಮಗೆ ಇನ್ನೂ ಒಂದಷ್ಟು ಕುರಿಗಳು ಬೇಕಾಗುತ್ತದೆ. ಆಗಾಗಿ ನೋಡುತ್ತಿದ್ದೇನೆ ಎಂದು ದಾವಣಗೆರೆಯಿಂದ ಬಂದಿದ್ದ ಗ್ರಾಹರೊಬ್ಬರು ಕುರಿ ಖರೀದಿಯಲ್ಲಿ ಉತ್ಸಾಹ ತೋರುತ್ತಿರುವುದು ಕಂಡು ಬಂತು.

ಜಾತ್ರೆಯ ವಾತಾವರಣ: ಬಕ್ರೀದ್ ಹಬ್ಬ ಸಮೀಪಿಸುತ್ತಿದ್ದಂತೆ ಎಲ್ಐಸಿ ವೃತ್ತ (ಮಿಲೇನಿಯಂ ಸರ್ಕಲ್)ದಲ್ಲಿ ಜಾತ್ರೆಯ ವಾತಾವರಣ ಸೃಷ್ಟಿಯಾಗಲಿದೆ. ವೃತ್ತದ ಸುತ್ತಲೂ ಸಾವಿರಾರು ಕುರಿಗಳ ವ್ಯಾಪಾರ ನಡೆಯಲಿದ್ದು, ನೂರಾರು ಗೂಡ್ಸ್ ವಾಹನಗಳನ್ನು ಪಾರ್ಕಿಂಗ್ ಮಾಡಲಾಗಿರುತ್ತದೆ. ಜನಜಂಗುಳಿಯೇ ನೆರೆದಿರಲಿದ್ದು, ವಾಹನ ಸಂಚಾರಕ್ಕೂ ತೊಂದರೆಯಾಗುತ್ತಿದೆ.

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಸೋನಿಯಾ, ರಾಹುಲ್ ಮೇಲಿನ ಆರೋಪ ಸಾಬೀತು: ಕೋರ್ಟ್‌ಗೆ ಇಡಿ ಹೇಳಿಕೆ

ನವದೆಹಲಿ, ಮೇ 21– ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಮತ್ತು ಇತರರ ವಿರುದ್ಧ 'ಪ್ರಾಥಮಿಕವಾಗಿ ಹಣ ವರ್ಗಾವಣೆ ಪ್ರಕರಣ' ದಾಖಲಾಗಿದೆ ಎಂದು ಜಾರಿ ನಿರ್ದೇಶನಾಲಯ ಬುಧವಾರ ದೆಹಲಿ ನ್ಯಾಯಾಲಯಕ್ಕೆ ತಿಳಿಸಿದೆ.

ಈ ವಿಷಯವನ್ನು ಪರಿಗಣಿಸಬೇಕೆ ಬೇಡವೇ ಎಂಬ ಬಗ್ಗೆ ಆರಂಭಿಕ ಸಲ್ಲಿಕೆಗಳ ಸಂದರ್ಭದಲ್ಲಿ ವಿಶೇಷ ನ್ಯಾಯಾಧೀಶ ವಿಶಾಲ್ ಗೋಗ್ನೆ ಅವರ ಮುಂದೆ ಇಡಿ ಹೇಳಿಕೆ ನೀಡಿತು.

ಈ ಪ್ರಕರಣದಲ್ಲಿ ತನ್ನ ಆರೋಪಪಟ್ಟಿಯ ಪ್ರತಿಯನ್ನು ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಅವರಿಗೆ ಒದಗಿಸುವಂತೆ ನ್ಯಾಯಾಧೀಶರು ಇಡಿಗೆ ಸೂಚಿಸಿದ್ದು, ಅವರ ಖಾಸಗಿ ದೂರಿನ ಆಧಾರದ ಮೇಲೆ ಇಡಿ ಪ್ರಸ್ತುತ ಪ್ರಕರಣವನ್ನು ದಾಖಲಿಸಿದೆ.

2014ರ ಜೂನ್ 26ರಂದು ಸುಬ್ರಮಣಿ ಸ್ವಾಮಿಯವರು ಸಲ್ಲಿಸಿದ ಖಾಸಗಿ ದೂರನ್ನು ಮ್ಯಾಜಿಸ್ಟ್ರೇಟ್ ಕೋರ್ಟ್ ಪರಿಗಣನೆಗೆ ತೆಗೆದುಕೊಂಡ ನಂತರ ಇತ್ತೀಚೆಗೆ ಆರೋಪಪಟ್ಟಿ ಸಲ್ಲಿಸಿದ ಇಡಿ 2021ರಲ್ಲಿ ತನಿಖೆ ಆರುಭಿಸಿತ್ತು

ದಸರಾ ವಸ್ತುಪ್ರದರ್ಶನ ಆವರಣದಲ್ಲಿ ರಾತ್ರೋರಾತ್ರಿ ಬೋರ್‌ವೆಲ್ ಕೊರೆತ

ಗುತ್ತಿಗೆದಾರನಿಗೆ ನೋಟಿಸ್



ಮೈಸೂರು, ಮೇ 21(ಎಂಕೆ)– ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ರಾತ್ರೋರಾತ್ರಿ ಬೋರ್‌ವೆಲ್ ಕೊರೆಸಿರುವ ಗುತ್ತಿಗೆದಾರರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ

ವಸ್ತುಪ್ರದರ್ಶನ ಆವರಣದಲ್ಲಿ ಫನ್‌ಫೇರ್ ಬೇಸಿಗೆ ಮೇಳ ನಡೆಯುತ್ತಿದ್ದು, ಪ್ರವಾಸಿಗರ ಆಕರ್ಷಣೆಗಾಗಿ ನಿರ್ಮಿಸಿರುವ ನಯಾಗಾರ ಮಾದರಿ ವಾಟರ್ ಫಾಲ್ಸ್‌ಗೆ ನೀರು ಹರಿಸಲು ಪ್ರಾಧಿಕಾರದ ಅನುಮತಿ ಪಡೆಯದೇ ಏಕಾಏಕಿ ರಾತ್ರಿ ವೇಳೆ ಬೋರ್‌ವೆಲ್ ಕೊರೆಸಲಾಗಿದೆ. ಅನುಮತಿ ಇಲ್ಲದೆ ಗುತ್ತಿಗೆದಾರರು ಬೋರ್‌ವೆಲ್ ಕೊರೆಸಲು ಪ್ರಾಧಿಕಾರದ ಕೆಲ ಸಿಬ್ಬಂದಿ ಕರ್ತವ್ಯ ಲೋಪವೂ ಕಾರಣವಾಗಿದೆ ಎಂಬ ಮಾತುಗಳು ಕೇಳಿಬಂದಿವೆ.

ಮೇ 9 ರಿಂದ 17ರವರೆಗೆ ನಡೆಯುವ ಬೇಸಿಗೆ ಮೇಳಕ್ಕೆ ಅನುಕೂಲ ಮಾಡಿಕೊಡಲು ಪ್ರಾಧಿಕಾರದ ಆವರಣದಲ್ಲಿ ಯಾವುದೇ ಅನುಮತಿ ಪಡೆಯದೆ ಬೋರ್‌ವೆಲ್ ತೆಗೆಸಿರುವುದಕ್ಕೆ ಸಮಜಾಯಿಷಿ ನೀಡುವಂತೆ ಗುತ್ತಿಗೆದಾರರಿಗೆ ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ಕೆ.ರುದ್ರೇಶ್ ನೋಟಿಸ್ ನೀಡಿದ್ದಾರೆ.

ಫನ್‌ಫೇರ್‌ಗೆ ಗುತ್ತಿಗೆ ಆಧಾರದಲ್ಲಿ ಬೇಸಿಗೆ ಮೇಳ ನಡೆಸಲು ಅವಕಾಶ ನೀಡಲಾಗಿದೆ. ಜನರ ಆಕರ್ಷಣೆಗೆ ನಿರ್ಮಿಸಿರುವ ನಯಾಗಾರ ಫಾಲ್ಸ್‌ಗೆ ನೀರು ಸಾಕಾಗುತ್ತಿಲ್ಲವೆಂದು ಗುತ್ತಿಗೆದಾರರು ಯಾರಿಗೂ ಹೇಳದೆ, ಅನುಮತಿ ಪಡೆಯದೇ ಬೋರ್‌ವೆಲ್ ಕೊರೆಸಿದ್ದಾರೆ. ಈ ಸಂಬಂಧ ನೋಟಿಸ್ ನೀಡಲಾಗಿದ್ದು, ಅವರಿಂದ ಉತ್ತರ ಬಂದ ನಂತರ ಕಾನೂನು ರೀತಿಯಲ್ಲಿ ಕ್ರಮ ಜರುಗಿಸಲಾಗುವುದು. ಅಲ್ಲದೆ ಬೋರ್‌ವೆಲ್ ತೆಗೆಸಲು ಪ್ರಾಧಿಕಾರದಿಂದ ಹಣ ನೀಡಿಲ್ಲ. ವಿದ್ಯುತ್ ಸಂಪರ್ಕವನ್ನು ಒದಗಿಸಿಲ್ಲ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಸಂಘದ ನೋಂದಣಿ



24 ಮನೆ ತೆಲುಗು ಶೆಟ್ಟಿ, ಸಾಧುಶೆಟ್ಟಿ ಸಂಘದ ನೋಂದಣಿ ಕಾರ್ಯಕ್ರಮ ಇತ್ತೀಚೆಗೆ ಮೈಸೂರಿನ ಅಗ್ರಹಾರದಲ್ಲಿರುವ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಡೆಯಿತು. ಈ ವೇಳೆ ಸಂಘದ ಅಧ್ಯಕ್ಷ ಲಕ್ಷ್ಮಿನಾರಾಯಣ, ಉಪಾಧ್ಯಕ್ಷ ಮೋಹನ್, ಪ್ರಧಾನ ಕಾರ್ಯದರ್ಶಿ ಶ್ರೀಮತಿ ಸುಮಿತ್ರಾ, ಸಹ ಕಾರ್ಯದರ್ಶಿ ಸೋಮಶೇಖರ್, ಖಜಾಂಚಿ ರೋಶನ್, ಸದಸ್ಯರಾದ ರಮೇಶ್, ಶಂಕರ್, ನಾಗರಾಜು, ಯೋಗೇಶ್, ಮುತ್ತುಲಕ್ಷ್ಮಿ ಇನ್ನಿತರರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 21–ಮೈಸೂರಿನ ಗಾಂಧಿನಗರದ ದಿ ಮೈಸೂರು ಸಿಟಿ ಗಾಂಧಿನಗರ ಆದಿಕರ್ನಾಟಕ ಅಭಿವೃದ್ಧಿ ಸಂಘದ ವತಿಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಸಂಬಂಧ ಪ್ರಸಕ್ತ ಸಾಲಿನ ಎಸ್ಎಸ್ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.60ಕ್ಕೂ ಹೆಚ್ಚು ಅಂಕ ಪಡೆದ ಸಮುದಾಯದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಜೂ.14ರೊಳಗೆ ಅಂಕಪಟ್ಟಿ, ಜಾತಿ ದೃಢೀಕರಣ ಪತ್ರ, ಆಧಾರ್ ಕಾರ್ಡ್ ಹಾಗೂ ಭಾವಚಿತ್ರದೊಂದಿಗೆ ಅರ್ಜಿ ಸಲ್ಲಿಸುವುದು. ಮಾಹಿತಿಗೆ ಮೊ. 7019612341, 8105082555 ಸಂಪರ್ಕಿಸಿ.

ನಿಧನ



ಶ್ರೀಮತಿ ಮಂಜುಳ

ನಂಜನಗೂಡು, ಮೇ 21– ತಾಲೂಕಿನ ನಗರ್ಲೆ ಗ್ರಾಮದ ನಿವಾಸಿ ಶ್ರೀಮತಿ ಮಂಜುಳ (40) ಅವರು ನೆನ್ನೆ (ಮಂಗಳವಾರ) ರಸ್ತೆ ಅಪಘಾತದಲ್ಲಿ ನಿಧನರಾದರು. ಮೃತರು ಪತಿ ಟಿವಿಎಸ್ ಕುಮಾರ್ (ಆರ್ಕೆಸ್ಟ್ರಾ), ಮಕ್ಕಳಾದ ನಿಶಾಂತ್‌ಕುಮಾರ್, ಸುಮಂತ್ ಕುಮಾರ್ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಬುಧವಾರ ಸಂಜೆ ನಗರ್ಲೆ ಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರ್ಕಾರಿ ಶಾಲೆಗಳ ಉಳಿವಿಗಾಗಿ ಸಹಿ ಸಂಗ್ರಹ ಅಭಿಯಾನ

ಮೈಸೂರು, ಮೇ21(ಜಿಎ)–ರಾಜ್ಯದಲ್ಲಿ ಸರ್ಕಾರಿ ಶಾಲೆಗಳನ್ನು ಉಳಿಸಲು ಎಐಡಿಎಸ್ಓ ವತಿಯಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು.

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಸಂಶೋಧಕ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಹಿ ಮಾಡಿ ಅಭಿಯಾನಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಈ ವೇಳೆ ಮೈಸೂರು ವಿಶ್ವವಿದ್ಯಾನಿಲಯದ ಎಐಡಿಎಸ್ಓ ಘಟಕದ ಸಂಚಾಲಕಿ ಸ್ವಾತಿ ಮಾತನಾಡಿ, ರಾಜ್ಯದಲ್ಲಿ 46,755 ಸರ್ಕಾರಿ ಶಾಲೆಗಳಿದ್ದು, ಅವುಗಳಲ್ಲಿ 21,255 ಶಾಲಾ ಕಟ್ಟಡಗಳು ಶಿಥಿಲಗೊಂಡು ಅಪಾಯದಲ್ಲಿವೆ. ಇದರಲ್ಲಿ ಮೈಸೂರಿನ 1,716 ಶಾಲೆಗಳು ಕೂಡ ಒಳಗೊಂಡಿದೆ ಎಂದರು.

ಹಲವು ವರ್ಷಗಳಿಂದ ದುರಸ್ತಿ ಕಾಣದ ಶಾಲೆಗಳ ಚಾವಣಿ ಕುಸಿದು ಮಕ್ಕಳು ಗಾಯಗೊಂಡಿರುವುದು, ಪ್ರಾಣ ಕಳೆದುಕೊಂಡಿರುವ ಅನೇಕ ಘಟನೆಗಳು ಸಂಭವಿಸಿದ್ದು, ಬಳ್ಳಾರಿ ತಾಲೂಕಿನ ಶಂಕರ ಬಂಡೆ ಗ್ರಾಮದ ಓರ್ವ ಎಂಟನೇ ತರಗತಿ ವಿದ್ಯಾರ್ಥಿನಿಯೂ ಶಾಲೆಯ ಚಾವಣಿ ಕುಸಿದು ಗಾಯಗೊಂಡು



ರಾಜ್ಯದ ಸರ್ಕಾರಿ ಶಾಲೆಗಳನ್ನು ಉಳಿಸಲು ಎಐಡಿಎಸ್ಓ ವತಿಯಿಂದ ಮೈಸೂರು ವಿವಿಯಲ್ಲಿ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು.

ನಂತರ ಸಾವಿಗೀಡಾಗಿದ್ದು ರಾಜ್ಯದಲ್ಲಿನ ಶಾಲೆಗಳ ಶೋಚನೀಯ ಪರಿಸ್ಥಿತಿಗೆ ಕನ್ನಡಿ ಹಿಡಿದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.


ಸರ್ಕಾರಿ ಶಾಲೆಗಳು ಬಡಮಕ್ಕಳ ಶಿಕ್ಷಣದ ಆಶಾಕಿರಣ, ವಿದ್ಯಾರ್ಥಿಗಳ ಭವಿಷ್ಯದ ಅಡಿಪಾಯವಾಗಿದೆ. ಬಹುತೇಕ ಬಡವರು, ರೈತ–ಕಾರ್ಮಿಕರ ಮಕ್ಕಳು ಸರ್ಕಾರಿ ಶಾಲೆಗಳಿಗೆ ಶಿಕ್ಷಣದ ಕನಸು ಹೊತ್ತು ಬರುತ್ತಾರೆ. ಆದರೆ, ಸರ್ಕಾರಿ ಶಾಲೆಗಳ ಇಂದಿನ ಪರಿಸ್ಥಿತಿ ಬಹಳ ಶೋಚನೀಯ ಹಾಗೂ ಚಿಂತಾಜನಕವಾಗಿದೆ. ಸರ್ಕಾರಗಳು ಮೂಲಸೌಕರ್ಯಗಳನ್ನು ಒದಗಿಸದೆ, ಕಟ್ಟಡಗಳನ್ನು ದುರಸ್ತಿ ಮಾಡದೆ, ಶಿಕ್ಷಕರ ನೇಮಕಾತಿ ಮಾಡದೆ ಮಕ್ಕಳು ಶಾಲೆಗೆ ಬರುತ್ತಿಲ್ಲ ಎಂಬ ನೆಪವೊಡ್ಡಿ 6,000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದು ಖಂಡನೀಯ ಎಂದರು.

ಈ ಎಲ್ಲಾ ಸಮಸ್ಯೆಗಳನ್ನು ಇಟ್ಟುಕೊಂಡು ರಾಜ್ಯ ಸರ್ಕಾರ ಹಾಗೂ ಶಿಕ್ಷಣ ಸಚಿವರು ಪೋಷಕರು ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುತ್ತಿಲ್ಲ ಎಂಬ ಮಾತನ್ನು ಹೇಳಿ, ಖಾಸಗಿ ಶಾಲೆಗಳಿಗೆ ಪರವಾನಗಿ ಕೊಟ್ಟು, ಸರ್ಕಾರಿ ಶಾಲೆಗಳ ಅಭಿವೃದ್ಧಿ ಮಾಡುವ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದನ್ನು ಎಐಡಿಎಸ್ಓ ವಿದ್ಯಾರ್ಥಿ ಸಂಘಟನೆ ತೀವ್ರವಾಗಿ ಖಂಡಿಸುತ್ತದೆ ಎಂದು ತಿಳಿಸಿದರು.

ಮೇ 29ರಂದು ಶಾಲೆ ಶುರುವಾಗಲಿದ್ದು, ಈ ಬಾರಿ ಹೆಚ್ಚು ಮಳೆ ಆಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಹಾಗೂ ಶಿಕ್ಷಣ ಸಚಿವರು ಈ ಕೂಡಲೇ ಕಾರ್ಯಪ್ರವೃತ್ತರಾಗಿ ಶಿಥಿಲಗೊಂಡಿರುವ ಸರ್ಕಾರಿ ಶಾಲೆಗಳ ಕಟ್ಟಡಗಳನ್ನು ತ್ವರಿತವಾಗಿ ದುರಸ್ತಿ ಮಾಡಿಸಬೇಕು ಮತ್ತು ಅಗತ್ಯ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷೆ ಚಂದ್ರಕಲಾ, ಕಾರ್ಯದರ್ಶಿ ನಿತಿನ್, ಉಪಾಧ್ಯಕ್ಷೆ ಸ್ವಾತಿ, ಪದಾಧಿಕಾರಿಗಳಾದ ಚಂದನ, ಚಂದ್ರಿಕಾ, ಹೇಮಾ, ದಿಶಾ, ಅಂಜಲಿ, ಕಾರ್ಯಕರ್ತರಾದ ಅಭಿಷೇಕ್, ಯಶವಂತ್, ರಚನ, ಲೋಚನ ಮತ್ತು ಉಲ್ಲಾಸ್, ವಿಕಾಸ್ ಮತ್ತಿತರರು ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.05.2025 ಗುರುವಾರ, ಮಳೆ ನಕ್ಷತ್ರ: ಕೃತ್ತಿಕ 11.05.2025 ರಿಂದ 24.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಪೂಭಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ :** ಶಾಲಾಕ್ಯ ತಂತ್ರ ಸ್ನಾತಕೋತ್ತರ ವಿಭಾಗದಿಂದ ಕಣ್ಣಿನ ದೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಮೂತ್ರ ಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಸಂಧಿವಾತ ವ್ಯಾಧಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಬಳಿ, ಕೆಬಿಎಲ್ ಲೇಔಟ್, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ, ಬೌಲ್ ಔಟ್ ಕ್ರಿಕೆಟ್ ಅಕಾಡೆಮಿ :** ಮಹಿಳಾ ಕ್ರಿಕೆಟ್ ಟೂರ್ನಮೆಂಟ್, ಸ್ಥಳ: ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರಿಕೆಟ್ ಸ್ಟೇಡಿಯಂ.

■ **ಮದರ್‌ವುಡ್ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ :** ಮಹಾರಾಣಿ ಸೂಟ್ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಮಹಾರಾಣಿ ಶ್ರೀಮತಿ ತ್ರಿಶಿಕಾ ಕುಮಾರಿ ಒಡೆಯರ್, ಉಪಸ್ಥಿತರು : ಮದರ್‌ವುಡ್ ಹಾಸ್ಪಿಟಲ್ಸ್ ಸಿಇಓ ವಿಜಯರತ್ನ ವೆಂಕಟರಾಮನ್, ಸ್ಥಳ: ಮದರ್‌ವುಡ್ ಆಸ್ಪತ್ರೆ, ಯಾದವಗಿರಿ, ಬೆಳಗ್ಗೆ 10.45ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಚಳುವಳಿಗಾರರ ಸಂಘ :** ಸುವರ್ಣ ಕರ್ನಾಟಕ ಸಂಭ್ರಮ 50, ಕನ್ನಡ ಸೇವಾರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಪ್ರಶಸ್ತಿ ಪ್ರದಾನ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಾಧಕರಿಗೆ ಸನ್ಮಾನ : ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್, ನೆನಪಿನ ಕಾಣಿಕೆ : ಶಾಸಕ ಎ.ಆರ್. ಕೃಷ್ಣಮೂರ್ತಿ, ಪುಷ್ಪಾರ್ಚನೆ : ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಪೌರಕಾರ್ಮಿಕ ಮಹಿಳೆಯರಿಗೆ ಸೀರೆ ವಿತರಣೆ : ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಉಪಸ್ಥಿತರು : ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಸಚಿವ ಕೋಟೆ ಶಿವಣ್ಣ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಸುಯೋಗ್ ಆಸ್ಪತ್ರೆ ಮುಖ್ಯಸ್ಥ ಡಾ. ಎಸ್.ಪಿ. ಯೋಗಣ್ಣ, ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಡಾ. ಸುಶ್ರುತ್‌ಗೌಡ, ನಾಗೇಶ್ ಎಲ್. ಕಾಡಯ್ಯ, ಮುಖ್ಯ ಭಾಷಣಕಾರರು : ಸಾಹಿತಿ ಸಿ. ನಾಗಣ್ಣ, ಪ್ರಾಸ್ತಾವಿಕ ಭಾಷಣ : ಸಂಘದ ಅಧ್ಯಕ್ಷ ಬಿ.ಎ. ಶಿವಶಂಕರ, ಸ್ಥಳ: ಸುಯೋಗ್ ಆಸ್ಪತ್ರೆ ಆವರಣ, ರಾಮಕೃಷ್ಣನಗರ, ಸಂಜೆ 6ಕ್ಕೆ

ದೊಡ್ಡಮಾರಗೌಡನಹಳ್ಳಿಯಲ್ಲಿಂದು, ಮೈಸೂರು ತಾ.

■ **ಶ್ರೀ ಅರುಣೋದಯ ಸೇವಾ ಟ್ರಸ್ಟ್, ಶ್ರೀ ಶನೇಶ್ವರಸ್ವಾಮಿ ದೇವಸ್ಥಾನ :** ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದ ಉದ್ಘಾಟನೆ, ವಿಗ್ರಹ ಹಾಗೂ ರಾಜಗೋಪುರದ ಕಳಸ ಪ್ರತಿಷ್ಠಾಪನಾ ಮಹೋತ್ಸವ, ಗಣಪತಿ ಪೂಜೆ, ಪುಣ್ಯಾಹ ಕಳಸ ಸ್ಥಾಪನೆ ಬಿಂಬ ಶುದ್ಧಿ ವಾಸ್ತು ರಾಕ್ಷೋಘ್ನ ಹವನ ಅಧಿವಾಸ ಹೋಮ, ಪರ್ಯಗ್ನಿ ಕರಣ ಬಲಿಹರಣ, ಸ್ಥಳ: ಶ್ರೀ ಕ್ಷೇತ್ರ, ಶನೇಶ್ವರಸ್ವಾಮಿ ದೇವಸ್ಥಾನ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ. ಸಿ.ನಾಗಣ್ಣ, ನಿರ್ಮಾಣ–ಜಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಸದಾಶಿವ ಪಾಟೀಲ್, ವ್ಯಾಖ್ಯಾನ : ಡಾ. ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು– ಕೆ.ಸಿ. ಶಿವಪ್ಪ ರಚನೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಸುಧಾರಘುನಾಥ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ – ವಂದನ .ವಿ., 12.45 ಚಿತ್ರಗೀತೆಗಳು, 1.00 ಪ್ರಗತಿಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು– ಅಪರ್ಣಾ ಎನ್., 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ, 6.50 ಕೃಷಿರಂಗ–ಕಿಸಾನ್‌ವಾಣಿ – ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ರೈತ ಉತ್ಪಾದಕ ಕಂಪನಿ ನಿರ್ವಹಣೆ ಕುರಿತು ಸಂವಾದ. ಭಾಗವಹಿಸುತ್ತಾರೆ– ಕೊಳ್ಳೇಗಾಲ ತಾಲೂಕು ಕಾಮನಗೆರೆಯಲ್ಲಿರುವ ಕೊಳ್ಳೇಗಾಲ ರೈತ ಉತ್ಪಾದಕ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎನ್. ಲಲಿತಾ ಹಾಗೂ ಅಧ್ಯಕ್ಷರಾದ ಪಿ. ಮಹದೇವಪ್ಪ. ಪ್ರಸ್ತುತಿ: ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ– ಯುವಪ್ರತಿಭೆ–ಕಂಪನಿ ಸೆಕ್ರೆಟರಿ ಕೋರ್ಸ್ ಪ್ರವೇಶ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಖಚಿಟಿಇ ಗಳಿಸಿದ ಮಂಡ್ಯ ಜಿಲ್ಲೆ ಹಾಲಹಳ್ಳಿಯ ಮೊನಿಷ. ಕೆ ಮತ್ತು ಮೈಸೂರಿನ ಚಂದನ್ ಕುಮಾರ್ ಎಸ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ –ದಿಗ್ವಿಜಯ್ ಬಿ., 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ. ಎಸ್. ಸುಬ್ಬಲಕ್ಷ್ಮಿ –ಹಾಡುಗಾರಿಕೆ, 10.00 ನಾಟಕ– ಶಿವಜಲಂಧರ–ರಂಗನಾಟಕದ ಬಾನುಲಿ ರೂಪ, ಪ್ರಸ್ತುತಪಡಿಸುತ್ತಾರೆ ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ರಂಗ ತಂಡದ ಕಲಾವಿದರು, ಮೈಸೂರು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 22 ಗುರುವಾರ 2025

ಸಂಪುಟ: 46 | ಸಂಚಿಕೆ: 36 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕನ್ನಡದ ಸಾಹಿತಿ ಬಾನು ಮುಷ್ತಾಕ್‌ರ 'ಹಾರ್ಟ್ ಲ್ಯಾಂಪ್' ಕೃತಿಗೆ ಪ್ರತಿಷ್ಠಿತ ಬೂಕರ್ ಪ್ರಶಸ್ತಿ


ಲಂಡನ್, ಮೇ 21– ಕನ್ನಡದ ಪ್ರಸಿದ್ಧ ಸಾಹಿತಿ ಬಾನು ಮುಷ್ತಾಕ್ ಅವರು ಪ್ರತಿಷ್ಠಿತ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಬಾನು ಮುಷ್ತಾಕ್‌ರ 'ಹಸೀನಾ ಮತ್ತು ಇತರ ಕತೆಗಳು' ಕೃತಿಯ ಇಂಗ್ಲಿಷ್ ಅನುವಾದಿತ 'ಹಾರ್ಟ್ ಲ್ಯಾಂಪ್'ಗೆ ಪ್ರಶಸ್ತಿ ಸಿಕ್ಕಿದೆ. ಈ ಮೂಲಕ ಇದೇ ಮೊದಲ ಬಾರಿಗೆ ಕನ್ನಡದ ಕೃತಿಗೆ ಈ ಪ್ರತಿಷ್ಠಿತ ಪ್ರಶಸ್ತಿ ಲಭಿಸಿರುವುದು ವಿಶೇಷ. ಬೂಕರ್ ಪ್ರಶಸ್ತಿ 50 ಸಾವಿರ ಪೌಂಡ್ (ಅಂದಾಜು 57.28 ಲಕ್ಷ ರೂ.) ಒಳಗೊಂಡಿದೆ. ಇದೇ ಅನುವಾದಿತ ಕೃತಿಗೆ 'ಪೆನ್ ಟ್ರಾನ್ಸ್‌ಲೇಟ್ಸ್' ಪ್ರಶಸ್ತಿಯೂ ಸಿಕ್ಕಿತ್ತು.

1990 ಮತ್ತು 2023ರ ನಡುವೆ ಪ್ರಕಟಗೊಂಡ 12 ಕತೆಗಳನ್ನೊಳಗೊಂಡ ಈ ಸಂಕಲನವನ್ನು ದೀಪಾ ಭಸ್ತಿ ಅವರು ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದಿಸಿದ್ದರು. ಮುಸ್ಲಿಂ ಸಮುದಾಯದ ಬಾಲಕಿಯರು ಹಾಗೂ ▶ 5ನೇ ಪುಟಕ್ಕೆ



ಖ್ಯಾತ ಲೇಖಕಿ ಬಾನು ಮುಷ್ತಾಕ್



ಬಾನು ಮುಷ್ತಾಕ್‌ರ 'ಹಸೀನಾ ಮತ್ತು ಇತರ ಕತೆಗಳು' ಕೃತಿಯ ಇಂಗ್ಲಿಷ್ ಅನುವಾದಿತ 'ಹಾರ್ಟ್ ಲ್ಯಾಂಪ್' ಪುಸ್ತಕ.

ಇದು ವೈವಿಧ್ಯತೆಗೆ ದೊರೆತ ಜಯ. ಯಾವ ಕಥೆಯೂ ಸಣ್ಣದಲ್ಲ, ಅನುಭವದ ವಸ್ತ್ರದಲ್ಲಿನ ಪ್ರತಿ ಎಳೆಯೂ ಇಡೀ ಕಥೆಯ ತೂಕವನ್ನು ಹೊಂದಿರುತ್ತದೆ ಎಂಬ ನಂಬಿಕೆಯಿಂದಲೇ ಈ ಪುಸ್ತಕ ರೂಪುಗೊಂಡಿತು.
–ಬಾನು ಮುಷ್ತಾಕ್, ಸಾಹಿತಿ

ನನ್ನ ಸುಂದರವಾದ ಭಾಷೆಗೆ ದೊರೆತ ಎಂತಹ ಸೊಗಸಾದ ಜಯವಿದು. –ದೀಪಾ ಭಸ್ತಿ, ಅನುವಾದಕಿ

ಬಾನು ಮುಷ್ತಾಕ್‌ರ ಕೃತಿಯನ್ನ ಕನ್ನಡದಿಂದ ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದು ಕೊಡಗಿನ ಪ್ರತಿಭೆ ದೀಪಾ ಭಸ್ತಿ


ಅನುವಾದಕಿ ದೀಪಾ ಭಸ್ತಿ

ಮಡಿಕೇರಿ,ಮೇ 21–'ಬೂಕರ್ ಪ್ರಶಸ್ತಿ'ಗೆ ಭಾಜನವಾದ ಲೇಖಕಿ ಬಾನು ಮುಷ್ತಾಕ್ ಬರೆದಿರುವ 'ಹಾರ್ಟ್ ಲ್ಯಾಂಪ್' ಕೃತಿಯನ್ನು ಕನ್ನಡದಿಂದ ಇಂಗ್ಲಿಷ್ ಭಾಷೆಗೆ ಅನುವಾದಿಸಿದವರು ಕೊಡಗಿನ ಬೆಡಗಿ ದೀಪಾ ಭಸ್ತಿ. ಬಾನು ಮುಷ್ತಾಕ್ ಅವರೊಂದಿಗೆ ದೀಪಾ ಭಸ್ತಿ ಈ ಪ್ರಶಸ್ತಿಯನ್ನು ಹಂಚಿಕೊಂಡಿದ್ದಾರೆ. ಪ್ರಶಸ್ತಿಯ ಮೊತ್ತವನ್ನು ಲೇಖಕರು ಮತ್ತು ಅನುವಾದಕರಿಗೆ ಸಮನಾಗಿ ಹಂಚಿಕೆ ಮಾಡಲಾಗುತ್ತದೆ.

ಭಸ್ತಿ ಅವರು, ಮಡಿಕೇರಿಯ ರೈಫಲ್ ರೇಂಜ್ ನಿವಾಸಿಗಳಾದ ಬಿ.ಎನ್.ಪ್ರಕಾಶ್, ಸುಧಾ ದಂಪತಿ ಪುತ್ರಿ, ಕೊಡಗಿನ ಖ್ಯಾತ ವೈದ್ಯರಾಗಿದ್ದ ಡಾ.ನಂಜುಂಡೇಶ್ವರ ಅವರ ಮೊಮ್ಮಗಳು ಹಾಗೂ ಚೆಟ್ಟಿರ ಸುಜನ್ ನಾಣಯ್ಯರ ಪತ್ನಿ. ▶ 5ನೇ ಪುಟಕ್ಕೆ

ಇಂಗ್ಲೀಷ್‌ನಲ್ಲೇ ವ್ಯಾಸಂಗ ಮಾಡಿದ್ದ ದೀಪಾ ಭಸ್ತಿ ಅವರು, ಬಾನು ಮುಷ್ತಾಕ್ ಅವರ ಕಥಾ ಸಂಗ್ರಹವನ್ನು ಇಂಗ್ಲೀಷ್‌ಗೆ ಅನುವಾದಿಸುವ ಸಂದರ್ಭಗಳಲ್ಲಿ ಮುಂಬೈನಲ್ಲಿ ನೆಲೆಸಿರುವ ಕನ್ನಡದ ಹಿರಿಯ ವಿದ್ವಾಂಸರಾದ ಡಾ.ತಾಳ್ತಜೆ ವಸಂತಕುಮಾರ್ ಅವರ ಮಾರ್ಗದರ್ಶನ ಪಡೆದುಕೊಳ್ಳುತ್ತಿದ್ದಳು. ಕನ್ನಡಕ್ಕೆ ಸರಿಸಮಾನವಾದ ಇಂಗ್ಲಿಷ್ ಪದಗಳ ಹುಡುಕಾಟ–ತಡಕಾಟಗಳ ಬಗ್ಗೆ ತಡರಾತ್ರಿ ಎರಡು ಮೂರು ಗಂಟೆಗಳ ವರೆಗೂ ಅನುವಾದದಲ್ಲಿ ಮುಳುಗಿ ಹೋಗುತ್ತಿದ್ದಳು. –ಬಿ.ಎನ್.ಪ್ರಕಾಶ್, ದೀಪಾ ಭಸ್ತಿ ಅವರ ತಂದೆ

ರಾಹುಲ್ ಗಾಂಧಿ ಸಹವಾಸದಿಂದ ಖರ್ಗೆ ಕೂಡ 'ಪಪ್ಪು' ಥರ ಆಡ್ತಾರೆ!

- ಮಾಜಿ ಸಂಸದ ಪ್ರತಾಪ್ ಸಿಂಹ ಲೇವಡಿ
- ಚೀನಾ ಕ್ಷಿಪಣಿಗಳ ಬೆಲೆ ಶೇಕಡ 10ರಷ್ಟು ಇಳಿಕೆ
- ಭಾರತದ ಬ್ರಹ್ಮೋಸ್‌ಗೆ ವಿಶ್ವದಲ್ಲಿ ಭಾರಿ ಬೇಡಿಕೆ
- ಮುಂಬೈ ದಾಳಿ ನಂತರ ಚುಟ್ ಪುಟ್ ದಾಳಿ ಮಾಡಲಿಲ್ಲ
- ಮೋದಿ ಮತ್ಸರಕ್ಕೆ ಭಾರತ ಸೇನೆ ಬಗ್ಗೆ ಕಾಂಗ್ರೆಸ್ ಟೀಕೆ


ಪ್ರತಾಪ್ ಸಿಂಹ

ಮೈಸೂರು, ಮೇ21(ಬಿಎಲ್‌ಯು)– ರಾಹುಲ್ ಗಾಂಧಿ ಸಹವಾಸದಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ 'ಪಪ್ಪು' ರೀತಿ ಮಾತನಾಡುತ್ತಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಲೇವಡಿ ಮಾಡಿದ್ದಾರೆ.

ಮೈಸೂರಿನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಭಾರತ, ಪಾಕಿಸ್ತಾನದ ಮೇಲೆ ನಡೆಸಿದ ದಾಳಿಯನ್ನು ಚುಟ್–ಪುಟ್ (ಸಣ್ಣಪುಟ್ಟ ಯುದ್ಧ) ಯುದ್ಧವೆಂದು ಗೇಲಿ ಮಾಡಿದ ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೆ ಪ್ರತಾಪ್ ಸಿಂಹ ತಿರುಗೇಟು ನೀಡಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಅವರಂತಹ ಹಿರಿಯ ರಾಜಕಾರಣಿ ಆಪರೇಷನ್ ಸಿಂಧೂರ ಬಗ್ಗೆ ಬಹಳ ಹಗುರವಾಗಿ ಮಾತನಾಡಿರುವುದು ಆಶ್ಚರ್ಯ ಮೂಡಿಸಿದೆ. ಇತ್ತೀಚೆಗೆ ಮಲ್ಲಿಕಾರ್ಜುನ ಖರ್ಗೆ ಅವರು ಕೂಡ ತಮ್ಮ ಮಗ ಪ್ರಿಯಾಂಕ್ ಖರ್ಗೆಯಂತೆ ಅಸಂಬದ್ಧವಾಗಿ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು.

ರಾಹುಲ್ ಗಾಂಧಿ ಚೈನೀಸ್ ಇಲ್ಲ ಪಾಕ್ ಏಜೆಂಟಾ...!

"ಭಾರತ, ಪಾಕಿಸ್ತಾನದ ಮೇಲೆ ದಾಳಿ ಮಾಡಿದ ವೇಳೆ ಬಳಕೆಯಾದ ಯುದ್ಧ ವಿಮಾನಗಳ ಲೆಕ್ಕ ಕೇಳಿದ ರಾಹುಲ್ ಗಾಂಧಿ ಹೇಳಿಕೆಗೆ ಪ್ರತಾಪ್ ಸಿಂಹ ತಿರುಗೇಟು ನೀಡಿದ್ದಾರೆ. ಭಾರತದ ಸೇನೆಯ ಕ್ಷಮತೆ, ದಕ್ಷತೆಯನ್ನು ರಾಹುಲ್ ಗಾಂಧಿ ಮೆಚ್ಚುವ ಬದಲು ಹೀಗೆ ಲೆಕ್ಕ ಕೇಳಿದರೆ ಇವರನ್ನು ಚೈನಿಸ್ ಎನ್ನಬೇಕೊ ಇಲ್ಲ ಪಾಕಿಸ್ತಾನದ ಏಜೆಂಟ್ ಎನ್ನಬೇಕೋ ಎಂದು ಪ್ರತಾಪ್ ಸಿಂಹ ಪ್ರಶ್ನಿಸಿದರು.

ಭಾರತ, ಪಾಕಿಸ್ತಾನದ ಮೇಲೆ ನಡೆಸಿದ ದಾಳಿಯ ನಂತರ ಚೀನಾದ ಕ್ಷಿಪಣಿಗಳ ಮಾರುಕಟ್ಟೆ ಬೆಲೆ ಶೇಕಡ 10ರಷ್ಟು ಕಡಿಮೆಯಾಗಿದೆ. ಭಾರತ, ಪಾಕಿಸ್ತಾನದ ಮೇಲೆ ನಡೆಸಿದ ದಾಳಿ ವೇಳೆ ಚೀನಾ ಆಯುಧಗಳು ಶಕ್ತಿಹೀನ ಎಂಬ ಸತ್ಯ ಇಡೀ ವಿಶ್ವಕ್ಕೆ ಅರಿವಾಯಿತು. ಇದರಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚೀನಾ ಆಯುಧಗಳನ್ನು ಖರೀದಿ ಮಾಡಲು ಯಾರೂ ಮುಂದೆ ಬರುತ್ತಿಲ್ಲ ಎಂದರು.

ಆದರೆ ಭಾರತ ತಯಾರಿಸಿದ ಬ್ರಹ್ಮೋಸ್ ಕ್ಷಿಪಣಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರಿ ಬೇಡಿಕೆ ಬಂದಿದೆ. ಇದು ಭಾರತದ ಮಿಲಿಟರಿ ತಂತ್ರಜ್ಞಾನಕ್ಕಿರುವ ಶಕ್ತಿ ಎಂದು ಪ್ರತಾಪ್ ಸಿಂಹ ಅರ್ಥೈಸಿದರು. ಭಾರತ ಕದನ ವಿರಾಮ ಘೋಷಣೆ ಮಾಡಿತು ಎಂದು ಟೀಕೆ ಮಾಡುತ್ತಾರೆ. ಆದರೆ ವಾಸ್ತವವಾಗಿ ಪಾಕಿಸ್ತಾನದ ಡಿಜಿಎಂಓ ಭಾರತದ ಡಿಜಿಎಂಓಗೆ ಕರೆ ಮಾಡಿ ಕದನ ವಿರಾಮಕ್ಕೆ ▶ 5ನೇ ಪುಟಕ್ಕೆ

ಗೃಹ ಸಚಿವ ಡಾ.ಪರಮೇಶ್ವರ್ ಒಡೆತನದ ಸಿದ್ಧಾರ್ಥ ಶಿಕ್ಷಣ ಸಮೂಹ ಸಂಸ್ಥೆಗಳ ಮೇಲೆ ಇಡಿ ದಾಳಿ



ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಎರಡು ವರ್ಷ ಪೂರೈಸಿದ ಮಾರನೇ ದಿನವೇ ಅವರ ಸಂಪುಟ ಸದಸ್ಯರ ಸಂಸ್ಥೆಗಳ ಮೇಲಿನ ಈ ದಾಳಿ ಭಾರಿ ಚರ್ಚೆಗೆ ಗ್ರಾಸ

ಬೆಂಗಳೂರು, ಮೇ 21(ಕೆಎಂಶಿ)– ವೈದ್ಯಕೀಯ, ಸ್ನಾತಕೋತ್ತರ ವೈದ್ಯಕೀಯ ಸೀಟ್ ಬ್ಲಾಕಿಂಗ್ ಹಾಗೂ ಕಪ್ಪುಹಣ ಚಲಾವಣೆಗೆ ಸಂಬಂಧಿಸಿದಂತೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ಸಿದ್ಧಾರ್ಥ ಶಿಕ್ಷಣ ಸಮೂಹ ಸಂಸ್ಥೆಗಳ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ.) ಇಂದು ದಾಳಿ ನಡೆಸಿ, ಪರಿಶೀಲಿಸಿದೆ.


ಡಾ.ಜಿ.ಪರಮೇಶ್ವರ್

ತುಮಕೂರು, ನೆಲಮಂಗಲದ ವೈದ್ಯಕೀಯ ಶಿಕ್ಷಣ ಕಾಲೇಜು ಮತ್ತು ಆಸ್ಪತ್ರೆ ಅಲ್ಲದೆ, ತುಮಕೂರಿನ ವಿವಿಧೆಡೆ ಇರುವ ಶಿಕ್ಷಣ ಸಂಸ್ಥೆಗಳ ಮೇಲೂ ಬುಧವಾರ ಬೆಳ್ಳಂಬೆಳಗ್ಗೆ ದೆಹಲಿ ಮತ್ತು ಚೆನ್ನೈನಿಂದ ಬಂದ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಎರಡು ವರ್ಷ ಪೂರೈಸಿದ ಬೆನ್ನಲ್ಲೇ ಸಂಪುಟದ ಪ್ರಭಾವೀ ಸಚಿವರೊಬ್ಬರ ಒಡೆತನದ ಸಂಸ್ಥೆಗಳ ಮೇಲೆ ಹಠಾತ್ ದಾಳಿ ನಡೆದಿರುವುದು ಮುಂದಿನ ರಾಜಕೀಯ ಸಂಚಲನಕ್ಕೆ ಮುನ್ನುಡಿ ಎನ್ನಲಾಗುತ್ತಿದೆ.

ಸಿದ್ಧಾರ್ಥ ವೈದ್ಯಕೀಯ ಕಾಲೇಜು ಪ್ರವೇಶಕ್ಕೆ ಸಂಬಂಧಿಸಿದಂತೆ ಭಾರಿ ಪ್ರಮಾಣದಲ್ಲಿ ಹಣ ಕೈ ಬದಲಾವಣೆ ಆಗಿದೆಯೆಂಬ ಆರೋಪದ ಹಿನ್ನೆಲೆಯಲ್ಲಿ ಕೇಂದ್ರ ಆದಾಯ ತೆರಿಗೆ ಇಲಾಖೆ ಕಳೆದ 7 ವರ್ಷಗಳ ಹಿಂದೆ ದಾಳಿ ನಡೆಸಿ ದಾಖಲೆಗಳನ್ನು ವಶಪಡಿಸಿಕೊಂಡಿತ್ತು. ತದನಂತರವೂ ಎರಡು–ಮೂರು ಬಾರಿ ಸಿದ್ಧಾರ್ಥ ಶಿಕ್ಷಣ ಸಂಸ್ಥೆಗಳ ಮೇಲೆ ದಾಳಿ ನಡೆಸಿದ್ದಲ್ಲದೆ, ಸಮೂಹ ಸಂಸ್ಥೆಗಳ ಅಧ್ಯಕ್ಷರೂ ಆಗಿರುವ ಡಾ.ಪರಮೇಶ್ವರ್ ಅವರನ್ನು ವಿಚಾರಣೆಗೂ ಒಳಪಡಿಸಿತ್ತು. ಪ್ರತೀ ವರ್ಷ ವೈದ್ಯಕೀಯ ಸೀಟುಗಳ ಪ್ರವೇಶ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಸಿದ್ಧಾರ್ಥ ಸಂಸ್ಥೆ 50ರಿಂದ 60 ಕೋಟಿ ರೂ. ದಾನದ ರೂಪದಲ್ಲಿ ನೀಡುತ್ತಿತ್ತು. ಒಟ್ಟಾರೆ 500 ಕೋಟಿ ರೂ.ಗಳನ್ನು ಸಿದ್ಧಾರ್ಥ ಶಿಕ್ಷಣ ಸಂಸ್ಥೆ ವಿವಿಧ ಸಂಘಗಳಿಗೆ ನೀಡಿದೆ. ಈ ವಹಿವಾಟಿಗೆ ತಕರಾರು ಎತ್ತಿದ ಆದಾಯ ತೆರಿಗೆ ಇಲಾಖೆ ತನಿಖೆ ನಡೆಸಿ ಪ್ರಕರಣವನ್ನು ಜಾರಿ ನಿರ್ದೇಶನಾಲಯಕ್ಕೆ ಹಸ್ತಾಂತರಿಸಿತ್ತು.



ಇ.ಡಿ. ಸಹ ತನಿಖೆ ನಡೆಸಿ, ಕೋಟಿ ಕೋಟಿ ರೂ. ವರ್ಗಾವಣೆ ಆಗಿರುವ ಬಗ್ಗೆ ದಾಖಲೆ ಸಂಗ್ರಹಿಸಿದೆ. ಇದೀಗ ಹಣದ ಮೂಲ ಹುಡುಕುತ್ತಿರುವ ಇ.ಡಿ. ಪ್ರತೀ ವರ್ಷ ವೈದ್ಯಕೀಯ ಸೀಟುಗಳ ಪ್ರವೇಶದಿಂದ ಎಷ್ಟು ಹಣ ಸಂಗ್ರಹಿಸಲಾಗಿದೆ ಎಂಬ ಮಾಹಿತಿಯ ತಪಾಸಣೆ ನಡೆಸಿದೆ. ಕಳೆದ 2019ರಲ್ಲಿ ಆದಾಯ ತೆರಿಗೆ (ಐ.ಟಿ.) ದಾಳಿ ಸಂದರ್ಭದಲ್ಲಿ ಡಾ.ಪರಮೇಶ್ವರ್ ಆಪ್ತ ಸಹಾಯಕರ ಕಚೇರಿ, ಮನೆಗಳ ಮೇಲೂ ದಾಳಿ ನಡೆಸಿ ವಿಚಾರಣೆ ಮಾಡಿತ್ತು. ಐ.ಟಿ. ತನಿಖೆಗೆ ಹೆದರಿ ಡಾ.ಪರಮೇಶ್ವರ್ ಆಪ್ತ ಸಹಾಯಕ ರಮೇಶ್ ತಮ್ಮ ನಿವಾಸಕ್ಕೆ ಹತ್ತಿರದಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ▶ 5ನೇ ಪುಟಕ್ಕೆ

"ಡಾ.ಜಿ.ಪರಮೇಶ್ವರ್ ದಲಿತ ನಾಯಕರು. ರಾಜ್ಯ ಗೃಹ ಸಚಿವರು. ಅವರನ್ನು ಉದ್ದೇಶಪೂರ್ವಕವಾಗಿ ಟಾರ್ಗೆಟ್ ಮಾಡಲಾಗಿದೆ. ದಲಿತ, ಹಿಂದುಳಿದ, ಕಾಂಗ್ರೆಸ್ ಮೇಲೆ ದಾಳಿ ಆಗುತ್ತಿದೆ. ಯಡಿಯೂರಪ್ಪ, ಬಿ.ವೈ.ವಿಜಯೇಂದ್ರ, ಹೆಚ್.ಡಿ.ಕುಮಾರಸ್ವಾಮಿ ಏನು ಸಾಚಾನಾ ಅವರ ಮೇಲೆ ಯಾಕೆ ದಾಳಿ ಮಾಡಿಲ್ಲ. ಈ ಸಂಸ್ಥೆಯನ್ನು ಪರಮೇಶ್ವರ್ ತಂದೆ ಗಂಗಯ್ಯ ಅವರು ಕಟ್ಟಿದ್ದು, ದಲಿತ ನಾಯಕರ ಟಾರ್ಗೆಟ್ ಮಾಡಿದ್ದಾರೆ ಅನ್ನಿಸುತ್ತೆ. ಮೊದಲು ಐಟಿಯವರು ಮಾಡಿದ್ದರು, ಈಗ ಇಡಿ ಮಾಡಿದ್ದಾರೆ. –ಮುಖ್ಯಮಂತ್ರಿ ಸಿದ್ದರಾಮಯ್ಯ.

ರನ್ಯಾ ರಾವ್ ಲಿಂಕ್?


ರನ್ಯಾ ರಾವ್

ಬೆಂಗಳೂರು: ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮಾಲೀಕತ್ವದ ಶಿಕ್ಷಣ ಸಂಸ್ಥೆಗಳ ಮೇಲೆ ಜಾರಿ ನಿರ್ದೇಶನಾಲಯದ ದಾಳಿ ಹಿಂದೆ ರನ್ಯಾ ರಾವ್ ಕೇಸ್ ಲಿಂಕ್ ಇದೆಯೇ ಎಂಬ ಗಂಭೀರ ಪ್ರಶ್ನೆ ಎದ್ದಿದೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಈ ಬಗ್ಗೆ ಗಂಭೀರ ಆರೋಪ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಶೋಕ್, ರನ್ಯಾರಾವ್ ವಿದೇಶದಿಂದ ಚಿನ್ನ ತಂದು ಹಲವು ಪ್ರಮುಖರಿಗೆ ನೀಡಿರುವ ಮಾಹಿತಿಯಿದೆ. ಈ ಹಣ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯಲ್ಲಿ ಹೂಡಿಕೆ ಮಾಡುತ್ತಿದ್ದ ಬಗ್ಗೆ ಇಡಿ ಮಾಹಿತಿ ಸಂಗ್ರಹಿಸಿರಬಹುದು ಎಂದರು.


ತನಿಖೆ ನಡೆದ ಬಳಿಕ ಮತ್ತಷ್ಟು ವಿಷಯಗಳು ಹೊರಬರಬಹುದು. ಈ ಪ್ರಕರಣ ಸರ್ಕಾರಕ್ಕೆ ಮುಜುಗರ ತಂದಿದೆ. ಆದರೆ ದಾಳಿಯಿಂದ ಇವರು ಹೆದರುತ್ತಾರೆ ಎಂದು ಅನ್ನಿಸುವುದಿಲ್ಲ. ಯಾಕೆಂದರೆ ಇವರು ಲೂಟಿ ಮಾಡಲೆಂದೇ ಬಂದಿದ್ದಾರೆ ಎಂದರು. ಮೊದಲು ಇಡಿ ದಾಳಿ ಮುಗಿದು ತನಿಖೆ ನಡೆಯಲಿದೆ. ತನಿಖೆ ಪೂರ್ತಿ ಆದ ಮೇಲೆ ನಾವು ಪರಮೇಶ್ವರ್ ವಿರುದ್ಧ ಕ್ರಮಕ್ಕೆ ಆಗ್ರಹಿಸುತ್ತೇವೆ. ಮುಂದಿನ ಹೋರಾಟದ ಬಗ್ಗೆ ಚರ್ಚೆ ಮಾಡುತ್ತೇವೆ ಎಂದರು. ಚಿನ್ನ ಕಳ್ಳಸಾಗಾಣಿಕೆ ಮಾಡಿ ಸಿಕ್ಕಿಬಿದ್ದಿರುವ ರನ್ಯಾ ನಿವಾಸದ ಮೇಲೆ ಇಡಿ ದಾಳಿ ನಡೆಸಿತ್ತು. ಇಡಿ ದಾಳಿಯ ವೇಳೆ ಹಲವು ಮಹತ್ವದ ದಾಖಲೆಗಳು ಲಭ್ಯವಾಗಿದ್ದವು. ಈ ದಾಖಲೆಗಳ ಆಧಾರದ ಮೇಲೆ ಪರಮೇಶ್ವರ್ ಶಿಕ್ಷಣ ಸಂಸ್ಥೆಗಳ ಮೇಲೆ ದಾಳಿ ನಡೆದಿದೆ ಎನ್ನಲಾಗುತ್ತಿದೆ.

ಎಂ.ಎ.ಸಲೀಂ ರಾಜ್ಯದ ಪ್ರಭಾರ ಡಿಜಿ–ಐಜಿಪಿ



ಬೆಂಗಳೂರು: ರಾಜ್ಯದ ಪ್ರಭಾರ ಪೊಲೀಸ್ ಮಹಾ ನಿರ್ದೇಶಕರಾಗಿ ಹಿರಿಯ ಐಪಿಎಸ್ ಅಧಿಕಾರಿ ಎಂ.ಎ. ಸಲೀಂ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ ಅವರು ಕಳೆದ ಏಪ್ರಿಲ್ 30ರಂದು ನಿವೃತ್ತಿಯಾಗಿದ್ದು, ಅವರ ಸೇವಾವಧಿಯನ್ನು ಮೇ 21ರವರೆಗೆ ವಿಸ್ತರಿಸಲಾಗಿತ್ತು. ಇಂದು ಅಲೋಕ್ ಮೋಹನ್ ಅವರಿಂದ ▶ 5ನೇ ಪುಟಕ್ಕೆ

ರಾಜ್ಯದಿಂದ ಆಂಧ್ರಕ್ಕೆ ನಾಲ್ಕು ಕುಮ್ಕಿ ಆನೆಗಳ ಹಸ್ತಾಂತರ



ಬೆಂಗಳೂರು: ನೆರೆಯ ರಾಜ್ಯ ಆಂಧ್ರ ಪ್ರದೇಶಕ್ಕೆ ರಾಜ್ಯದಿಂದ ನಾಲ್ಕು ಕುಮ್ಕಿ ಆನೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಹಸ್ತಾಂತರಿಸಿದ್ದಾರೆ.

ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ಮೇಲೆ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಆಂಧ್ರಪ್ರದೇಶದ ಉಪಮುಖ್ಯಮಂತ್ರಿ, ಅರಣ್ಯ ಸಚಿವ ▶ 5ನೇ ಪುಟಕ್ಕೆ

ಕಾಂಕ್ರೀಟ್, ಡಾಂಬರ್, ಟೈಲ್ಸ್ ತೆರವು; ಮೈಸೂರಲ್ಲಿ ಮರಗಳಿಗೆ ಮುಕ್ತಿ

- ಮೈಸೂರು ಮಹಾನಗರಪಾಲಿಕೆಯಿಂದ ಮರಗಳ ಸಂರಕ್ಷಣಾ ಕಾರ್ಯ ಆರಂಭ
- 'ಮೈಸೂರು ಮಿತ್ರ' ವರದಿ ಫಲಶ್ರುತಿ

ಮೈಸೂರು, ಮೇ 21(ಎಂಟಿವೈ)–ಮೈಸೂರಿನ ರಸ್ತೆ ಬದಿ ಮರಗಳ ಬುಡಕ್ಕೆ ಕಾಂಕ್ರೀಟ್, ಡಾಂಬರ್, ಟೈಲ್ಸ್ ಹಾಕಿ ಅವುಗಳ ಸರ್ವನಾಶ ಮಾಡಲಾಗುತ್ತಿರುವುದರ ಬಗ್ಗೆ ಕೊನೆಗೂ ಎಚ್ಚೆತ್ತ ಅರಣ್ಯ ಇಲಾಖೆ, ಇದರ ಬಗ್ಗೆ ತುರ್ತು ಕ್ರಮ ಕೈಗೊಳ್ಳುವಂತೆ ಪತ್ರ ಬರೆದು ತಾಕೀತು ಮಾಡಿದ ಹಿನ್ನೆಲೆಯಲ್ಲಿ ಮೈಸೂರು ನಗರಪಾಲಿಕೆಯು ವಿವಿಧ ರಸ್ತೆ ಬದಿಯಲ್ಲಿನ ಮರಗಳ ಬುಡಕ್ಕೆ ಹಾಕಿದ ಕಾಂಕ್ರೀಟ್, ಡಾಂಬರ್, ಟೈಲ್ಸ್‌ಗಳನ್ನು ತೆರವುಗೊಳಿಸಿ, ಮಳೆ ನೀರು ಇಂಗಲು ಪಾತಿ ಕಟ್ಟುವ ಕಾರ್ಯ ಆರಂಭಿಸಿದೆ.

ರಸ್ತೆ ಅಭಿವೃದ್ಧಿ ವೇಳೆ ಹಿಂದೆ–ಮುಂದೆ ನೋಡದೆ ಮರಗಳ ಬುಡಕ್ಕೆ ಕಾಂಕ್ರೀಟ್, ಡಾಂಬರ್ ಸುರಿಯಲಾಗಿದೆ. ಅಲ್ಲದೇ ಪಾದಚಾರಿ ಮಾರ್ಗಕ್ಕೆ ಟೈಲ್ಸ್ ಹಾಗೂ ಇಂಟರ್‌ಲಾಕ್ ಅಳವಡಿಸಿರುವುದರಿಂದ ಮಳೆ ನೀರು ಇಂಗಲು ಅವಕಾಶವಾಗಿಲ್ಲ. ಅಲ್ಲದೆ ಮರಗಳ ಬೇರು ಭೂಮಿಯಲ್ಲಿ ಆಳವಾಗಿ ಬೇರೂರಲು ಸಾಧ್ಯವಾಗಿಲ್ಲ. ಹಾಗಾಗಿ ಸಣ್ಣ ಪ್ರಮಾಣದ ಮಳೆ–ಗಾಳಿಗೂ ಉರುಳಿ ಬೀಳುತ್ತಿವೆ ಎಂಬ ತಜ್ಞರ ಅಭಿಪ್ರಾಯ ಆಧರಿಸಿ ಪಾಲಿಕೆಗೆ ಅರಣ್ಯ ಇಲಾಖೆ ಪತ್ರ ಬರೆದಿತ್ತು.

ಹೀಗಾಗಿ ಮೈಸೂರು ಮಹಾನಗರಪಾಲಿಕೆಯು ರಸ್ತೆ ಬದಿಯ ಮರಗಳ ಬುಡದ ಸುತ್ತ ಹಾಕಿದ್ದ ಡಾಂಬರ್, ಕಾಂಕ್ರೀಟ್, ಟೈಲ್ಸ್, ಇಂಟರ್‌ಲಾಕ್ ತೆರವು ಮಾಡಿ ಪಾತಿ ಮಾಡುವ ಮೂಲಕ ಮರದ ಬುಡದಲ್ಲಿ ಮಳೆ ನೀರು ಇಂಗುವಂತೆ ಮಾಡುವ ಕಾರ್ಯ ಆರಂಭಿಸಿದೆ.




ಮೈಸೂರು ಮಹಾ ನಗರಪಾಲಿಕೆ ವತಿಯಿಂದ ಮೈಸೂರಿನ ವಿವಿಧ ರಸ್ತೆಬದಿಯ ಮರಗಳ ಬುಡಗಳಲ್ಲಿ ಹಾಕಲಾಗಿದ್ದ ಕಾಂಕ್ರಿಟ್, ಡಾಂಬರ್, ಟೈಲ್ಸ್, ಇಂಟರ್‌ಲಾಕ್ ತೆರವುಗೊಳಿಸುವ ಕಾರ್ಯವನ್ನು ಪಾಲಿಕೆ ಸಿಬ್ಬಂದಿ ಆರಂಭಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಮರಗಳ ಬುಡಕ್ಕೆ ನೀರು ಇಂಗಲು ಸಾಧ್ಯವಾಗದಂತೆ ಹಾಕಿರುವ ಡಾಂಬರ್, ಕಾಂಕ್ರೀಟ್, ಟೈಲ್ಸ್, ಇಂಟರ್‌ಲಾಕ್ ತೆರವುಗೊಳಿಸಲು ಈಗಾಗಲೇ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಗಿದೆ. ಅರಣ್ಯ ಇಲಾಖೆಯ ಪತ್ರ ತಲುಪುವ ಮುನ್ನವೇ ಪಾಲಿಕೆ ವತಿಯಿಂದ ಕಾರ್ಯಾಚರಣೆ ಆರಂಭವಾಗಿದೆ ಎಂದರು.

ರಸ್ತೆ, ಚರಂಡಿ, ಪಾದಚಾರಿ ಮಾರ್ಗ ನಿರ್ಮಾಣ, ಡಾಂಬರೀಕರಣ ಕಾಮಗಾರಿಯ ಟೆಂಡರ್ ಪಡೆಯುವ ಗುತ್ತಿಗೆದಾರರು ಮರಗಳ ಬುಡದ ಸುತ್ತಲೂ ಮಳೆ ನೀರು ಸಂಗ್ರಹವಾಗಿ ಇಂಗುವಂತೆ ಗಮನಹರಿಸಬೇಕು. ಒಂದು ವೇಳೆ ಹಾಗೆ ಮಾಡದಿದ್ದರೆ ಕಾಮಗಾರಿಯ ಬಿಲ್ ತಡೆ ಹಿಡಿಯಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಕೆಲವು ಬಡಾವಣೆಗಳಲ್ಲಿ ಮನೆ ಹಾಗೂ ಮಳಿಗೆಗಳ ಮುಂದೆ ಅದರ ಮಾಲೀಕರೇ ಮರಗಳ ಬುಡಕ್ಕೆ ಕಾಂಕ್ರೀಟ್ ಹಾಕಿ ಟೈಲ್ಸ್ ಅಳವಡಿಸಿರುವುದು ಕಂಡುಬಂದಿದೆ. ಅಂತಹವರಿಗೂ ಕಟ್ಟುನಿಟ್ಟಿನ ಸೂಚನೆ ನೀಡಲಾಗುವುದು. ಮರಗಳ ಬುಡಕ್ಕೆ ಹಾಕಿರುವ ಕಾಂಕ್ರೀಟ್, ಟೈಲ್ಸ್ ತೆರವು ಮಾಡದಿರುವ ಖಾಸಗಿ ವ್ಯಕ್ತಿಗಳಿಗೆ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಿದರು.



ಮೈಸೂರು ನಗರದೆಲ್ಲೆಡೆ ತಮ್ಮ ತಮ್ಮ ವಾಣಿಜ್ಯ ಮಳಿಗೆಗಳ ಮುಂದಿರುವ ಮರಗಳನ್ನು ನಾಶಪಡಿಸುವ ಕಾರ್ಯವನ್ನು ವ್ಯವಸ್ಥಿತವಾಗಿ ಮಾಡುತ್ತಾ ಬರಲಾಗುತ್ತಿದೆ. ಅರಣ್ಯ ಇಲಾಖೆ ಇಂತಹ ವಿಷಯದಲ್ಲಿ ಕಠಿಣ ಕ್ರಮ ಕೈಗೊಳ್ಳದೇ ಹೋದರೆ ಮೈಸೂರಿನ ಕೆಲ ರಸ್ತೆಗಳು ಹೇಗೆ ಮರಗಳಿಂದ ಮುಕ್ತವಾಗಿ ಬಿಕೋ ಎನ್ನುತ್ತಿರುವಂತೆ ಮೈಸೂರಿನ ಎಲ್ಲಾ ರಸ್ತೆಗಳು ಬರೀ ಕಾಂಕ್ರಿಟ್ ಕಾಡಾಗಲಿವೆ.
–ಕೆ.ವಿ.ಶ್ರೀಧರ್, ಮಾಜಿ ಕಾರ್ಪೊರೇಟರ್

ನಕ್ಕರೆ ಅದೇ ಸ್ವರ್ಗ

ಹೆಂಡತಿ ಬೆಳಗ್ಗೆ ಎದ್ದ ಕೂಡಲೇ ಅಲಂಕಾರ ಮಾಡಿಕೊಳ್ಳಲು ಶುರು ಮಾಡಿದಳು

ಗಂಡ : ನಿನಗೆ ಹುಚ್ಚು ಹಿಡಿದಿದಿಯಾ... ಇಷ್ಟು ಬೇಗ ಯಾಕೆ ಅಲಂಕಾರ ಮಾಡ್ಕೊತಿದ್ಯ

ಹೆಂಡತಿ : ಬಾಯಿ ಮುಚ್ಚಿ ಸಾಕು. ನನ್ನ ಫೋನ್ ಲಾಕ್ ಓಪನ್ ಮಾಡಬೇಕು. ಅದು ನನ್ನ ಮುಖ ಗುರುತು ಹಿಡಿತಿಲ್ಲ!!

ಮೈಸೂರು ಮಿತ್ರ

ಗುರುವಾರ, 22 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಯೋಚಿಸಿ ನೋಡಿದರೆ ಎಲ್ಲ ನಮ್ಮವರೇ...
ಆದರೆ, ಚಿಂತಿಸಿ ನೋಡಿದರೆ ಯಾರೂ ನಮ್ಮವರಲ್ಲ!

ವೇದ ಸುಳ್ಳಾದರೂ / ಗಾದೆ ಸುಳ್ಳಾಗದು { ಕಣ್ಣಾರೆ ಕಂಡರೂ / ಪ್ರಮಾಣಿಸಿ ನೋಡು

ನಿಮ್ಮ ಪತ್ರಗಳು

■ ಕಗ್ಗತ್ತಲಿನಲ್ಲಿ ಸಾರ್ವಜನಿಕ ಬಸ್ ನಿಲ್ದಾಣಗಳು

ಮಾನ್ಯರೆ,



ಮೈಸೂರು ನಗರದಲ್ಲಿರುವ ಬಸ್ ಪ್ರಯಾಣಿಕರ ತಂಗುದಾಣಗಳು ಕಳೆದ ಒಂದು ವಾರದಿಂದ ಕತ್ತಲೆಯಲ್ಲಿ ಮುಳುಗಿವೆ. ಇದಕ್ಕೆ ಮುಖ್ಯ ಕಾರಣ ಮೈಸೂರಿನ ಬಹಳಷ್ಟು ಸಾರ್ವಜನಿಕ ಬಸ್ ಪ್ರಯಾಣಿಕರ ತಂಗುದಾಣಗಳ ವಿದ್ಯುತ್ ಬಿಲ್ ಅನ್ನು ಕಳೆದ 10 ತಿಂಗಳಿನಿಂದಲೂ ಕೆಎಸ್‌ಆರ್‌ಟಿಸಿಯವರು ಕಟ್ಟದೇ ಇರುವುದರಿಂದ ಚೆಸ್ಕಾಂನವರು ಮೈಸೂರಿನ ಹತ್ತಾರು ಬಸ್ ತಂಗುದಾಣಗಳ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದ್ದಾರೆ.

ಈ ಬಗ್ಗೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ದೂರು ಹೇಳಿದರೆ ಇವತ್ತು ಕಟ್ಟುತ್ತೇವೆ... ನಾಳೆ ಕಟ್ಟುತ್ತೇವೆ... ಎಂದು ಹಾರಿಕೆಯ ಉತ್ತರ ನೀಡುತ್ತಾರೆ. ಸಾರ್ವಜನಿಕರಿಗೆ ಉಪಯೋಗವಾಗಲಿ ಎಂದು ನಮ್ಮ ತಂದೆಯ ಹೆಸರಿನಲ್ಲಿ (ಹೋರಿ ಸುಬ್ಬೇಗೌಡ, ಬೂಕನಕೆರೆ ಸ್ಮರಣಾರ್ಥ ಕುವೆಂಪುನಗರದಲ್ಲಿ) ಸುಮಾರು 15 ವರ್ಷಗಳ ಹಿಂದೆ ಹತ್ತು ಲಕ್ಷ ಹಣ ಖರ್ಚು ಮಾಡಿ ಸಾರ್ವಜನಿಕರ ಉಪಯೋಗಕ್ಕೆ ಬಸ್ ಪ್ರಯಾಣಿಕರ ತಂಗುದಾಣ ನಿರ್ಮಿಸಿದ್ದೆವು. ಇದನ್ನು ನಿತ್ಯ ಸ್ವಚ್ಛ ಮಾಡಿ, ನಿರ್ವಹಣೆಯನ್ನೂ ಮಾಡುತ್ತಿದ್ದೇವೆ. ಆದರೆ ಇವುಗಳ ವಿದ್ಯುತ್ ಬಿಲ್ ಕಟ್ಟುವಷ್ಟು ಕೆಎಸ್‌ಆರ್‌ಟಿಸಿಯಲ್ಲಿ ಹಣವಿಲ್ಲವೇ?

ರಾತ್ರಿ ವೇಳೆ ಬಸ್ ತಂಗುದಾಣಗಳಲ್ಲಿ ವಿದ್ಯುತ್ ದೀಪ ಇಲ್ಲದಿದ್ದರೆ ಅಲ್ಲಿ ಕುಡುಕರ ಹಾವಳಿ ವ್ಯಾಪಕವಾಗಿ ಬಾಟಲ್‌ಗಳನ್ನು ಅಲ್ಲಿಯೇ ಬಿಸಾಡಿ ಹೋಗುತ್ತಾರೆ. ರಾತ್ರಿ ವೇಳೆ ಸಾರ್ವಜನಿಕರು ಇಲ್ಲಿ ನಿಲ್ಲುವುದು; ಕೂರುವುದೇ ಕಷ್ಟಕರವಾಗಿದೆ. ಇಲ್ಲಿ ಕಳ್ಳತನಗಳಾದರೇ ಅದಕ್ಕೆ ಕೆಎಸ್‌ಆರ್‌ಟಿಸಿಯವರನ್ನೇ ಹೊಣೆಗಾರರನ್ನಾಗಿ ಮಾಡಬೇಕಿದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಸ್ವಾಗತಾರ್ಹ ತೀರ್ಪು

ಮಾನ್ಯರೆ,

ದೇಶದ ವಿವಿಧ ನ್ಯಾಯಾಲಯಗಳಲ್ಲಿ ಸಿವಿಲ್ ನ್ಯಾಯಾಧೀಶರಾಗಿ ನೇಮಕ ಹೊಂದಲು ಅಭ್ಯರ್ಥಿಗಳು ವಕೀಲರಾಗಿ ಕಡೆಯ ಪಕ್ಷ ಮೂರು ವರ್ಷಗಳ ಕಾಲ ಕೆಲಸ ಮಾಡಬೇಕೆಂಬ ನಿಯಮವನ್ನು ಪುನಃ ಜಾರಿಗೆ ತರಲು ಆದೇಶಿಸಿರುವ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ತೀರ್ಪು ಸ್ವಾಗತಾರ್ಹವಾಗಿದೆ. ಇದು, ದೇಶದ ನ್ಯಾಯಾಂಗ ವ್ಯವಸ್ಥೆಯನ್ನು ಸದೃಢಗೊಳಿಸುವ ಮತ್ತೊಂದು ಪ್ರಯತ್ನವಾಗಿದೆ. ಮೂರು ವರ್ಷಗಳ ಕಾಲ ವಕೀಲರಾಗಿ ಕೆಲಸ ಮಾಡಿರಬೇಕೆಂಬ ನಿಯಮ 2002 ರವರೆಗೂ ಜಾರಿಯಲ್ಲಿತ್ತಾದರೂ, ನಂತರ ಆ ನಿಯಮವನ್ನು ತೆಗೆದುಹಾಕಲಾಯಿತು.

ನ್ಯಾಯಾಧೀಶರ ಹುದ್ದೆ ಉನ್ನತ ಹಾಗೂ ಪವಿತ್ರವಾದ ಹುದ್ದೆಯಾಗಿದ್ದು, ಇಂತಹ ಹುದ್ದೆಗೆ ಆಯ್ಕೆಯಾಗುವ ಅಭ್ಯರ್ಥಿಗಳು ನ್ಯಾಯಾಲಯದ ರೀತಿ ರಿವಾಜುಗಳ ಜೊತೆಗೆ ನ್ಯಾಯಾಲಯದ ನಿಯಮಗಳು, ಕಾನೂನಿನ ತಿಳುವಳಿಕೆ ಹಾಗೂ ವಿಶೇಷವಾಗಿ ಕಾನೂನುಗಳ ಅನ್ವಯಗೊಳಿಸುವ (applicability) ಬಗ್ಗೆ ಹೆಚ್ಚಿನ ಪರಿಜ್ಞಾನ ಹೊಂದಿರಬೇಕು. ಪುಸ್ತಕಗಳಲ್ಲಿ ಏನೇ ಓದಿಕೊಂಡಿದ್ದರೂ ಸಹ, ವಕೀಲರಾಗಿ ನ್ಯಾಯಾಲಯಗಳಲ್ಲಿ ಸಕ್ರಿಯರಾಗಿ ತೊಡಗಿಸಿಕೊಳ್ಳದ ಹೊರತು, ಅವರಿಗೆ ನ್ಯಾಯಾಂಗದ ಒಳ–ಹೊರವುಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ಮೂಡಲು ಸಾಧ್ಯವಾಗಲಾರದು. ಈ ನಿಟ್ಟಿನಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪು ಗಮನಾರ್ಹವಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದನಗರ, ಮೈಸೂರು

■ ಜನಮಿಡಿತ

ಮಾನ್ಯರೆ,

ಆತ್ಮಹತ್ಯೆ ಪ್ರಕರಣ ಮಿತಿ ಮೀರಿ ನಡೆಯುತ್ತಿದೆ. ಸಣ್ಣ–ಪುಟ್ಟ ವಿಷಯಗಳಿಗೂ ಮನನೊಂದು ಆತ್ಮಹತ್ಯೆಗೆ ಶರಣಾಗುವ ವರದಿ ಪ್ರತಿ ದಿನ ಬರುತ್ತಲೇ ಇರುತ್ತದೆ. ಅದರಲ್ಲೂ ಯುವಕ, ಯುವತಿಯರು, ಕ್ಷುಲ್ಲಕ ಕಾರಣಗಳಿಗಾಗಿ ಎಂಬುದು ಇನ್ನೂ ಆತಂಕದ ವಿಷಯ. ಪರೀಕ್ಷೆಯಲ್ಲಿ ಅಂಕ ಕಡಿಮೆ ಬಂತೆಂದೋ, ಪಾಲಕರು ಮೊಬೈಲ್ ಬಳಕೆ ನಿಷೇಧಿಸಿದರು ಅಂತಲೋ, ಪ್ರೀತಿಸಿ ಮದುವೆಯಾಗ ಬೇಕೆಂದವರ ಇಚ್ಛೆ ಪೂರೈಸದೇ ಇದ್ದಾಗಲೋ... ಇನ್ನೂ ಹೀಗೇ ಹಲವು ಅತೀ ಸಣ್ಣ ವಿಷಯಕ್ಕೆ ಇಂತಹ ಅತೀ ದೊಡ್ಡ ನಿರ್ಣಯ ತೆಗೆದುಕೊಳ್ಳುವುದು.

ಇದಕ್ಕೆ ಹೊಸದೊಂದು ಜೋಡಣೆ ಈಗಷ್ಟೇ ವರದಿಯಾಗಿದೆ. ತಲೆಗೂದಲು ವಿಪರೀತ ಉದುರುತ್ತಿದೆ ಎಂಬ ಕಾರಣಕ್ಕೆ ಮನನೊಂದು ಮಂಗಳೂರಿನ 32 ವರ್ಷದ ಸುಧೀರ್ ಆತ್ಮಹತ್ಯೆಗೆ ಶರಣಾಗಿದ್ದು ಎಂತಹ ಬಾಲಿಶ ನಿರ್ಧಾರ ಅಂತ ಅನ್ನಿಸುತ್ತಿಲ್ಲವೇ? ಇಂದಿನ ಯುವಕರಲ್ಲಿ ಯಾವುದನ್ನೂ ಅರಗಿಸಿಕೊಳ್ಳುವ ಶಕ್ತಿಯೇ ಇರುವುದಿಲ್ಲ. ಹೇಳಲಿಕ್ಕೇನೋ ಅತಿ ಚುರುಕು, ಬುದ್ಧಿವಂತರು. ಆದರೆ ಮನಸ್ಸಿನಲ್ಲಿ ಅತೀ ದುರ್ಬಲರು!

–ಶಂಕರನಾರಾಯಣ ಭಟ್, ಜಯಲಕ್ಷ್ಮಿಪುರಂ, ಮೈಸೂರು

■ ಮೈಸೂರು ಮಹಾನಗರ ಪಾಲಿಕೆ ನಿರ್ಲಕ್ಷ್ಯತೆ



ಮಾನ್ಯರೆ,

ಮೈಸೂರಿನ ಸಿದ್ಧಾರ್ಥನಗರ ಜ್ಞಾನ ಮಾರ್ಗದ 5ನೇ ಕ್ರಾಸ್ ಮುಖ್ಯ ರಸ್ತೆಯಲ್ಲಿ ಒಳಚರಂಡಿ ದುರಸ್ತಿಯನ್ನು ಮಹಾನಗರ ಪಾಲಿಕೆಯವರು ಸುಮಾರು ಎರಡು ತಿಂಗಳ ಹಿಂದೆ ಮಾಡಿದ್ದರು. ಆದರೆ, ಈ ದುರಸ್ತಿ ಕೆಲಸವನ್ನು ಕಾಟಾಚಾರಕ್ಕೆ ಮಾಡಿದಂತಿದೆ. ವಾಹನ ಸವಾರರಿಗೆ ಈ ಒಳಚರಂಡಿ ದುರವಸ್ಥೆಯಿಂದ ಅಪಾಯವಿದೆ. ಇತ್ತೀಚೆಗೆ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಇಲ್ಲಿ ನೀರು ನಿಂತರೆ ಪಾದಚಾರಿಗಳಿಗೂ ಅಪಾಯ ಕಟ್ಟಿಟ್ಟ ಬುತ್ತಿ. ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಶೀಘ್ರ ಒಳಚರಂಡಿ ದುರಸ್ತಿ ಮಾಡುವಂತೆ ಈ ಮೂಲಕ ಮನವಿ.

–ಅಮೃತ್, ಸಿದ್ಧಾರ್ಥನಗರ, ಮೈಸೂರು.



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಂಥನ

ನಗುವೇ ದೇಹಕ್ಕೆ ದಿವ್ಯೌಷಧ



ಮದನ್ ಕಟಾರಿಯಾ, ಮಾಧುರಿ



ಬಾಲಕೃಷ್ಣ



ನರಸಿಂಹರಾಜು



ಬೇಂದ್ರೆ



ಗುರು ಶಿಷ್ಯರು ಸಿನಿಮಾ

ನಗು ಎನ್ನುವುದು ದಿವ್ಯೌಷಧ ಎನ್ನುವ ಅರಿವು ಎಲ್ಲರಿಗೂ ಇದೆ. ನಗುವುದರಿಂದ ರೋಗಗಳು ಪರಿಹಾರವಾಗಿ ಆರೋಗ್ಯವೂ ಸುಧಾರಿಸುತ್ತದೆ ಎನ್ನುವ ಸತ್ಯ ಗೊತ್ತಾದಾಗಿನಿಂದ, ದಿನಾ ಬೆಳಗ್ಗೆ ಪಾರ್ಕುಗಳಲ್ಲಿ ಗುಂಪು ಕಟ್ಟಿ ನಗುವುದು, ಅದಕ್ಕಾಗಿ ಸಂಘ ರಚನೆಯಾಗುವುದು ಸರ್ವೇ ಸಾಮಾನ್ಯವಾಗಿಬಿಟ್ಟಿದೆ. ವಾಯು ವಿಹಾರಕ್ಕೆ ಹೋಗುವ ಅಭ್ಯಾಸ ನಿಮಗಿದ್ದಲ್ಲಿ, ಉದ್ಯಾನವನಗಳಲ್ಲಿ ವೃತ್ತ ರಚಿಸಿಕೊಂಡು ನಿಂತು ನಗುವವರನ್ನು ನೋಡಿ, ನೀವೂ ನಕ್ಕು ಹಗುರಾಗಿ ಅಪ್ರಯತ್ನಪೂರ್ವಕವಾಗಿ ಆರೋಗ್ಯವಂತರಾಗಿರುತ್ತೀರಿ! ಹೌದಲ್ಲವೇ? ನಗು ಸಾಂಕ್ರಾಮಿಕ! ಯಾರು ಏತಕ್ಕೆ ನಗುತ್ತಿದ್ದಾರೆಂದು ತಿಳಿಯದಿದ್ದರೂ, ಬೇರೆಯವರು ನಗುತ್ತಿದ್ದರೆ ನಮಗರಿವಿಲ್ಲದಂತೆ ನಗು ನಮ್ಮನ್ನೂ ಆವರಿಸಿಬಿಡುತ್ತದೆ.

ಇತ್ತೀಚಿನ ಕೆಲ ದಿನ, ದೇಶದಲ್ಲಿ ಬಹಳ ಗಂಭೀರವಾದ ಪರಿಸ್ಥಿತಿಯಿತ್ತು. ವಿನಾಕಾರಣ ನಮ್ಮನ್ನು ಕೆಣಕಿ ಅಕಾರಣವಾಗಿ ದುಃಖಕ್ಕೆ ದೂಡಿದವರ ಅಧಿಕಪ್ರಸಂಗತನಕ್ಕೆ ತಕ್ಕಪಾಠ ಕಲಿಸಿದೆವು. ಹಾಗಾಗಿ ಎಲ್ಲೆಡೆ ಬಿಗುವಿನ ವಾತಾವರಣ ಇದ್ದುದರಿಂದ, ವಿಶ್ವ ನಗುವಿನ ದಿನ ಬಂದು ಹೋದದ್ದು ನಮಗೆ ತಿಳಿಯಲೇ ಇಲ್ಲ. ಹೌದು ಮೇ ಮೊದಲನೆಯ ಭಾನುವಾರವನ್ನು 'ವಿಶ್ವ ನಗುವಿನ ದಿನ' ಎಂದು ಪ್ರಪಂಚದಾದ್ಯಂತ ಆಚರಿಸಲಾಗುತ್ತದೆ. ಸಾಮಾನ್ಯವಾಗಿ ಈ ರೀತಿಯ ದಿನಾಚರಣೆಗಳ ಮೂಲ ಹುಡುಕುತ್ತಾ ಹೋದರೆ, ಅಮೆರಿಕೆ ಅಥವಾ ಯೂರೋಪಿನ ಯಾವುದೋ ದೇಶದಲ್ಲಿ ಹುಟ್ಟಿದ್ದು ಎಂಬ ಮಾಹಿತಿ ನಮಗೆ ಸಿಗುತ್ತದೆ.

ಆದರೆ ವಿಶ್ವ ನಗುವಿನ ದಿನಕ್ಕೆ ಅಡಿಪಾಯ ಹಾಕಿದವರು ನಮ್ಮ ಭಾರತದ ಒಬ್ಬ ವೈದ್ಯರು ಎಂದರೆ ನೀವು ನಂಬಲೇಬೇಕು. ಹೌದು! ಮಹಾರಾಷ್ಟ್ರದ ಮುಂಬೈ ಮೂಲದ ವೈದ್ಯರಾದ **ಮದನ್ ಕಟಾರಿಯಾ** ಅವರು, 1995ರಲ್ಲಿ ತಮ್ಮ ಪತ್ನಿ ಮಾಧುರಿ ಜೊತೆಗೂಡಿ ನಗುವಿನ ಯೋಗ ಅಥವಾ ಹಾಸ್ಯ ಯೋಗವನ್ನು ಜನರಿಗೆ ಪರಿಚಯಿಸಿದರು. 1960ರ ದಶಕದಲ್ಲಿ ಚಾಲ್ತಿಯಲ್ಲಿದ್ದ ಆದರೆ ಜನರಿಗೆ ಅಷ್ಟೇನು ಪರಿಚಯವಿಲ್ಲದಿದ್ದ ಹಾಸ್ಯ ಯೋಗಕ್ಕೆ ಆಧುನಿಕತೆಯ ಸ್ಪರ್ಶ ನೀಡಿ ಜನಪ್ರಿಯಗೊಳಿಸಿದರು. ಇದಕ್ಕಾಗಿ ಸುಮಾರು 40 ಬಗೆಯ ನಗುವಿನ ವ್ಯಾಯಾಮಗಳನ್ನು ರೂಪಿಸಿದರು.

1995ರಲ್ಲಿ ಮುಂಬೈನ ಸಾರ್ವಜನಿಕ ಉದ್ಯಾನವನವೊಂದರಲ್ಲಿ ವಾಯುವಿಹಾರಕ್ಕಾಗಿ ಬರುತ್ತಿದ್ದವರನ್ನೇ ಸೇರಿಸಿಕೊಂಡು ಮೊದಲ ಲಾಫ್ಟರ್ ಕ್ಲಬ್ ಸ್ಥಾಪಿಸಿದರು. ನಿಧಾನವಾಗಿ ಜನಪ್ರಿಯವಾದ ಈ ಲಾಭದಾಯಕ ಯೋಗವನ್ನು ಎಲ್ಲರೂ ಮಾಡಲು ತೊಡಗಿದರು. ಕ್ಲಬ್‌ಗಳ ಸಂಖ್ಯೆ ಹೆಚ್ಚಾದುದು ಮಾತ್ರವಲ್ಲ, 1998ರಿಂದ ಇಡೀ ವಿಶ್ವವೇ ನಗುವಿಗಾಗಿ ಒಂದು ದಿನವನ್ನು ಮೀಸಲಿಡಲು ನಿರ್ಧರಿಸಿ, ಅದಕ್ಕಾಗಿ ಮೇ ತಿಂಗಳ ಮೊದಲ ಭಾನುವಾರವನ್ನು ಆರಿಸಿಕೊಂಡಿತು. ಇಂದು 115ಕ್ಕೂ ಹೆಚ್ಚು ದೇಶಗಳಲ್ಲಿ ವಿಶ್ವ ನಗುವಿನ ದಿನಾಚರಣೆಯ ಅಧಿಕೃತ ಕಾರ್ಯಕ್ರಮಗಳು ನಡೆಯುತ್ತವೆ.

ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದ ಪ್ರಖ್ಯಾತ ಸುರಭಿ ಕಾರ್ಯಕ್ರಮದಲ್ಲಿ ಜನ ಪಾರ್ಕಿನಲ್ಲಿ ನಿಂತು ಸುಮ್ಮನೆ ನಗುವುದನ್ನು ತೋರಿಸುತ್ತಿದ್ದಾಗ, ಈ ಹೊಚ್ಚ ಹೊಸ ವಿಚಾರದ ಅರಿವಿಲ್ಲದೆ ನಾವು ಆಡಿಕೊಂಡಿದ್ದೆವು! ಆದರೆ ನಂತರ ಪ್ರಪಂಚ ಸಾಕಷ್ಟು ಬದಲಾಯಿತು. ಫಾಸ್ಟ್ ಫಾರ್ವರ್ಡ್ ಮೋಡ್‌ಗೆ ಬದಲಾದ ಯಾಂತ್ರಿಕಯುಗದಲ್ಲಿ ಜನರಿಗೆ ನಗುವೆಂಬುದೇ ಮರೆತುಹೋಯಿತು ಅಥವಾ ನಗಲು ಸಮಯವಿಲ್ಲದಂತಾಯಿತು. ಆಗ ಮದನ್ ಕಟಾರಿಯಾ ಅವರ ಕನಸಿನ ಕೂಸಾದ ಈ ಲಾಫ್ಟರ್ ಕ್ಲಬ್‌ಗಳೇ ಜನರನ್ನು ನಗಿಸಿದ್ದು. ನಕ್ಕಾಗ ನಮ್ಮ ದೇಹದಲ್ಲಿ ಬಿಡುಗಡೆಯಾಗುವ Happy Hormoneಗಳಾದ ಎಂಡೋರ್ಫಿನ್ಸ್, ಡೋಪಮೈನ್, ಸೆರಾಟೊನಿನ್‌ಗಳು ಪ್ರಾಕೃತಿಕ ನೋವುನಿವಾರಕ, ಹಸಿವುಕಾರಕ, ನಿದ್ರಾಕಾರಕಗಳಾಗಿ ಕೆಲಸಮಾಡಿ ನಮ್ಮ ಮನಸ್ಸನ್ನು ಶಾಂತವಾಗಿ ಇಡುತ್ತವೆ. ಹಾಗಾಗಿಯೇ ನಗುವನ್ನು ದಿವ್ಯೌಷಧ ಎನ್ನುವುದು.

ಶಾಸ್ತ್ರಗಳು ಹೇಳುವುದನ್ನು ಒತ್ತಟ್ಟಿಗೆ ಇಟ್ಟು ನೋಡಿದರೆ, ನಿಜಜೀವನದಲ್ಲಿ ನಾವು ಅದೆಷ್ಟು ಬಗೆಯ ನಗುಗಳನ್ನು ಅಭ್ಯಸಿಸಿಕೊಂಡಿದ್ದೇವೆ! ಮುಗ್ಧ, ಸ್ನಿಗ್ಧ, ನಸು, ಮೆದು, ವ್ಯಂಗ್ಯ, ಕುಹಕ, ಕುತ್ಸಿತ, ಅಪಹಾಸ್ಯ, ಶಿಷ್ಟ, ಮೆಲು, ದುಷ್ಟ, ಕ್ರೂರ, ಸಂತೃಪ್ತ ಇನ್ನೂ ಹಲವು ಇದ್ದಾವೆ.

ಒಂದು ನಗು ಜೀವನವನ್ನು ಸುಂದರಗೊಳಿಸುತ್ತದೆ ಎಂಬುದು ನಿಜವಾದರೂ, ನಗು ಯುದ್ಧವನ್ನೂ ಮಾಡಿಸುತ್ತದೆ! ಅಲ್ಲವೇ ಮತ್ತೆ ಲಕ್ಷ್ಮಣನಿಂದ ಮೂಗು ಕೊಯ್ಸಿಕೊಂಡ ಶೂರ್ಪನಖಿಯನ್ನು ಕಂಡು ಮುಕ್ಕಳಿಸಿದ ನಗು, ಇಂದ್ರಪ್ರಸ್ಥದ ಅರಮನೆಯಲ್ಲಿ ಮುಗ್ಗರಿಸಿದ ದುರ್ಯೋಧನನ್ನು ನೋಡಿ ದ್ರೌಪದಿ ನಕ್ಕ ಕುಚೋದ್ಯದ ನಗುವಿಗಾಗಿ ರಾಮಾಯಣ, ಮಹಾಭಾರತಗಳೇ ನಡೆದುಹೋದವು!

ನಗು ನಮ್ಮ ಸಂತಸ ಮಾತ್ರವಲ್ಲದೆ ಬೇರೆಷ್ಟೋ ಭಾವನೆಗಳನ್ನು ಹೇಳುವ ಭಾಷೆಯೂ ಹೌದು.

ಹುಟ್ಟಿದಾಗಿನಿಂದ ನಗುವನ್ನೇ ಕಾಣದ ರಾಜಕುಮಾರಿಯ ಕತೆ ನಿಮಗೆಲ್ಲಾ ಗೊತ್ತು. 'ಪ್ರಚಂಡ ಕುಳ್ಳ' ಮತ್ತು 'ನಕ್ಕಳಾ ರಾಜಕುಮಾರಿ' ಸಿನಿಮಾಗಳ ನೆನಪಾಯ್ತೇ, ಸಿಟ್ಟು ಬಂದಾಗಲೆಲ್ಲಾ ನಗುವ 'ಮುನ್ನಾ ಭಾಯಿ ಎಂಬಿಬಿಎಸ್'ನ ಡಾ.ಆಸ್ಥಾನಾ, ಕ್ರೌರ್ಯವನ್ನೇ ಮೈವೆತ್ತಂತಿರುವ ನಮ್ಮ ವಜ್ರಮುನಿ, ಸುಂದರಕೃಷ್ಣ ಅರಸ್, ಮೊಗ್ಯಾಂಬೋ, ಗಬ್ಬರ್‌ಸಿಂಗ್‌ನ ಅಟ್ಟಹಾಸ, ನಗುವಿನ ವಿವಿಧ ಲಿಪಿಗಳೆನ್ನಬಹುದು!

> “ ನಗು ಎನ್ನುವುದು ಮನವನ್ನು ಅರಳಿಸುವ ಶಕ್ತಿಯುಳ್ಳದ್ದು ಹೇಗೋ, ಹಾಗೆಯೇ ಮನವನ್ನು ಮುದುಡಿಸಲೂ ಬಲ್ಲದು. ಶುದ್ಧವಾದ ಹಾಸ್ಯ ಮನವನ್ನು ಉಲ್ಲಸಿತಗೊಳಿಸುತ್ತದೆ. ಅಪಹಾಸ್ಯ ಇನ್ನೊಬ್ಬರ ಮನವನ್ನು ನೋಯಿಸಿ ವಿಕೃತಿ ಮೆರೆಯುತ್ತದೆ. ಅಂತಹ ವೇಳೆಯಲ್ಲಿ ಉತ್ಪತ್ತಿಯಾಗುವ ನಗುವಿಗೆ ತಣ್ಣನೆಯ ಕ್ರೌರ್ಯದ ಸ್ಪರ್ಶವಿರುತ್ತದೆ. ಅದು ಎಂದಿಗೂ ಸಮ್ಮತವಲ್ಲ.

ಮಗುವಿನ ನಗು ಬಹುಶಃ ಪ್ರಪಂಚದಲ್ಲಿಯೇ ಅತ್ಯಂತ ಸುಂದರವಾದ ನಗು ಎಂಬುದು ನಿರ್ವಿವಾದವಾದರೂ, ಮಧುಬಾಲಾ, ನೂತನ್, ಹೇಮಾಮಾಲಿನಿ, ಮಾಧುರಿ ದೀಕ್ಷಿತ್ ಇವರುಗಳು ತಮ್ಮ ಸ್ನಿಗ್ಧ ಮಂದಹಾಸಕ್ಕಾಗಿಯೇ ಹೆಸರಾದವರು. ಇನ್ನು ರಾಜ್‌ಕುಮಾರ್, ದೇವಾನಂದ್, ಶಾರುಖ್‌ಖಾನ್, ಸಲ್ಮಾನ್‌ಖಾನ್ ಅವರುಗಳು ನಗುವ ಪರಿಗೆ ಅವರ ಫ್ಯಾನ್ ಆದವರು ಎಷ್ಟೋ ಮಂದಿ. ಈಗೀಗ, ನಗುವಾಗ ತಮ್ಮ ಮುಖವನ್ನು ಕೈಯಿಂದ ಮುಚ್ಚಿಕೊಳ್ಳುವ ವಿರಾಟ್ ಕೊಹ್ಲಿ ಅವರ ಅಂದಾಜ್‌ಗೆ ಅಸಂಖ್ಯ ಅಭಿಮಾನಿನಿಯರಿದ್ದಾರೆ!

ನಗುವಿನ ಬಗ್ಗೆ ಹೇಳುವಾಗ ಮೋನಾಲಿಸಾಳನ್ನು ಮರೆವುದುಂಟೇ? ಲಿಯೋನಾರ್ಡೋ ಡಾವಿಂಚಿಯ ಈ ಮಹತ್ಕೃತಿಯಲ್ಲಿ ಅವಳ ಮುಖದ ಮೇಲೆ ಅರಳಿರುವ ಆ ನಗೆಯಲ್ಲದ ಕಿರುನಗೆ ಒಂದು ಅದ್ಭುತ! ನೋಡುಗರಿಗೆ ಸೋಜಿಗ!

ತೆನಾಲಿ ರಾಮಕೃಷ್ಣ, ಬೀರಬಲ್, ಮುಲ್ಲಾ ನಸ್ರುದ್ದೀನ್ ಇವರುಗಳು ನಗುವನ್ನು ಹರಿಸುತ್ತಲೇ ಜೀವನದ ಅರ್ಥ ಮಾಡಿಸಿದವರು. ಇವರು ಕಾಲ್ಪನಿಕ ವ್ಯಕ್ತಿಗಳೋ ಐತಿಹಾಸಿಕ ಸತ್ಯವೋ ಸ್ಪಷ್ಟವಿಲ್ಲ!

ಇನ್ನು ಸಿನಿಮಾ ಮತ್ತು ಸಾಹಿತ್ಯ ಕ್ಷೇತ್ರಗಳಂತೂ ನಗುವೇ ಅತ್ಯುತ್ತಮ ಮದ್ದು (LAUGHTER IS THE BEST MEDICINE) ಎಂಬುದನ್ನು ಮತ್ತೆ ಮತ್ತೆ ನಿರೂಪಿಸಿವೆ. ಇಲ್ಲಿ ನಾನು ಒಂದಷ್ಟನ್ನು ನಿಮಗೆ ನೆನಪಿಸಬಲ್ಲೆ!

ನಗು....

ಎಂದಿದೆ ಮಂಜಿನಾ ಬಿಂದು, ನಗಬೇಕಮ್ಮಾ ನಗಬೇಕು, ನಗುನಗುತಾ ನಲಿ, ನಗು, ನಗು ನಗು ನಗು ನೀ ನಗು, ನಗುತಾ ನಗುತಾ ಬಾಳು ನೀನು, ನಗುವಿನಾ ಲೋಕ ಇದು.., ನಿನ್ನ ನಗುವು ಹೂವಂತೆ, ನಗುನಗುತಾ ನೀ ಬರುವೆ ನಗು ನೀನಗು ಕಿರುನಗೆ... ಇತ್ಯಾದಿ

ಹಾಸ್ಯಭರಿತ ಸಿನಿಮಾಗಳ ಪಟ್ಟಿ ಕಿಲೋ ಮೀಟರುಗಟ್ಟಲೆ ಓಡಬಹುದು! ಮಾಯಾಬಜಾರ್, ಗುರುಶಿಷ್ಯರು, ಉಲ್ಟಾಪಲ್ಟಾ, ಭಾಗ್ಯದ ಲಕ್ಷ್ಮೀ ಬಾರಮ್ಮ,ಗಣೇಶನ ಮದುವೆ, ಗೌರಿ ಗಣೇಶ, ಜಾನೇ ಭೀ ದೊ ಯಾರೋ, ಗೋಲ್ ಮಾಲ್, ಚುಪ್ಕೆ ಚುಪ್ಕೆ

(ಈಗ ಕೀಳು ಅಭಿರುಚಿಯ ಹಾಸ್ಯವನ್ನು ಚಲನಚಿತ್ರಗಳಲ್ಲಿ ತೋರಿಸುತ್ತಿರುವುದು ಅತ್ಯಂತ ಖೇದಕರ).

ಆಧುನಿಕ ಯುಗದ ತಣ್ಣನೆಯ ಕ್ರೌರ್ಯವನ್ನು ಹಾಸ್ಯದ ಮೂಲಕ ಎಲ್ಲರಿಗೂ ತಲುಪಿಸಿದ ಸಿನಿಮಾ ಲೋಕದ ಧ್ರುವತಾರೆ ಚಾರ್ಲಿ ಚಾಪ್ಲಿನ್ ಇಂದಿಗೂ ಪ್ರಸ್ತುತ. ಲಾರೆಲ್ ಮತ್ತು ಹಾರ್ಡಿ, ಮಿಸ್ಟರ್ ಬೀನ್‌ರನ್ನು ಪ್ರೀತಿಸುವ ಅಭಿಮಾನಿಗಳು ಅಸಂಖ್ಯ. ನಮ್ಮ ಕನ್ನಡ ಕವಿಗಳೂ ನಗುವನ್ನು ರಾಮಬಾಣವೆಂದೇ ಎಣಿಸಿದ್ದಾರೆ ನಗುನಗುತಾ ಹಗುರವಾಗು ಓ ಮನವೇ ಎಂದು ಜಿ. ವರದರಾಜರಾವ್ ಹೇಳುತ್ತಾರೆ.

ಬೇಂದ್ರೆ,
ನನಕಯ್ಯಾ ಹಿಡಿದಾಕೆ ಅಳುನುಂಗಿನಗುವಾಕೆ
ನಗು ಒಮ್ಮೆ
ನಾನೂನೂ ನಕ್ಕೇನಾ
ಹುಸಿನಗುತಾ ಬಂದೇವಾ ನಸುನಗುತಾ ಬಾಳೋಣ
ತುಸುನಗುತಾ ತೆರಳೋಣ

ಎನ್ನುತ್ತಾ ಸುಖಸಂಸಾರಕ್ಕೆ ನಗುವಷ್ಟೇ ಶಕ್ತಿ ಎಂದು ಸರಳವಾಗಿ ಹೇಳಿಬಿಟ್ಟಿದ್ದಾರೆ.

ಹಾಸ್ಯ ಚಕ್ರವರ್ತಿ ನರಸಿಂಹರಾಜು, ಬಾಲಕೃಷ್ಣ, ಕಮೆಡಿಯನ್ ಗುಗ್ಗು, ದ್ವಾರಕೀಶ್, ಮುಸುರಿ ಕೃಷ್ಣಮೂರ್ತಿ, ರತ್ನಾಕರ್, ಮುಖ್ಯಮಂತ್ರಿ ಚಂದ್ರು, ದೊಡ್ಡಣ್ಣ, ಉಮೇಶ್, ಬಿ. ಜಯಾ, ರಮಾದೇವಿ, ಆರ್.ಟಿ. ರಮಾ, ಎಂ.ಎನ್. ಲಕ್ಷ್ಮೀದೇವಿ, ಸತ್ಯಭಾಮ, ಉಮಾಶ್ರೀ ಅವರು ಶುರು ಮಾಡಿದ ಹಾಸ್ಯನಟರ ಪರಂಪರೆಯನ್ನು ಇಂದು ಹಲವಾರು ನಟರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ನಗು ಎನ್ನುವುದು ಮನವನ್ನು ಅರಳಿಸುವ ಶಕ್ತಿಯುಳ್ಳದ್ದು ಹೇಗೋ, ಹಾಗೆಯೇ ಮನವನ್ನು ಮುದುಡಿಸಲೂ ಬಲ್ಲದು. ಶುದ್ಧವಾದ ಹಾಸ್ಯ ಮನವನ್ನು ಉಲ್ಲಸಿತಗೊಳಿಸುತ್ತದೆ. ಅಪಹಾಸ್ಯ ಇನ್ನೊಬ್ಬರ ಮನವನ್ನು ನೋಯಿಸಿ ವಿಕೃತಿ ಮೆರೆಯುತ್ತದೆ. ಅಂತಹ ವೇಳೆಯಲ್ಲಿ ಉತ್ಪತ್ತಿಯಾಗುವ ನಗುವಿಗೆ ತಣ್ಣನೆಯ ಕ್ರೌರ್ಯದ ಸ್ಪರ್ಶವಿರುತ್ತದೆ. ಅದು ಎಂದಿಗೂ ಸಮ್ಮತವಲ್ಲ.

ಈಗ್ಗೆ ಸ್ವಲ್ಪ ವರ್ಷಗಳ ಹಿಂದೆ, ಹಾಸ್ಯ ಸಂಜೆಗಳ ಭರಾಟೆ ಉತ್ತುಂಗದಲ್ಲಿತ್ತು. ಹಿರೇಮಗಳೂರು ಕಣ್ಣನ್, ಪ್ರೊ.ಕೃಷ್ಣೇಗೌಡರು, ಪ್ರಾಣೇಶ್, ದುಂಡಿರಾಜ್, ಎಂ.ಎಸ್.ನರಸಿಂಹ ಮೂರ್ತಿ, ಸುಧಾ ಬರಗೂರು, ಶೈಲಜಾ, ಅಸಾದುಲ್ಲಾ ಬೇಗ್, ಮೈಸೂರು ಆನಂದ್ ಇವರುಗಳು ನಡೆಸಿಕೊಡುತ್ತಿದ್ದ ಕಾರ್ಯಕ್ರಮಗಳಿಗೆ ಸುಸಂಸ್ಕೃತ ಹಿನ್ನೆಲೆಯಿರುತ್ತಿತ್ತು. ಪರಿಶುದ್ಧ ಹಾಸ್ಯಕ್ಕೆ ಸಾಹಿತ್ಯದ ಮೆರುಗು ಇರುತ್ತಿತ್ತು. ಇಂದಿಗೂ ಇವರುಗಳು ನಡೆಸಿಕೊಡುವ ಕಾರ್ಯಕ್ರಮಗಳು ಸಭ್ಯತೆಯ ಎಲ್ಲೆ ಮೀರದೆ, ಪ್ರೇಕ್ಷಕರಲ್ಲಿ ಸದಭಿರುಚಿಯನ್ನು ಮೂಡಿಸುವವು.

ಆದರೆ ಹಾಸ್ಯದ ಹೆಸರಲ್ಲಿ ದ್ವಂದ್ವಾರ್ಥದ ಸಂಭಾಷಣೆ, ಅಶ್ಲೀಲತೆ, ಅನೀತಿಗಳನ್ನು ವಿಜೃಂಭಿಸುವ ಪರಿಪಾಠ ಇತ್ತೀಚೆಗೆ ಹೆಚ್ಚಾಗಿ, ಹಾಸ್ಯವೆಂದರೆ ಅದೇ ಮತ್ತು ಸ್ವೀಕೃತ ಎನ್ನುವ ಧೋರಣೆಯನ್ನು ಪ್ರೇಕ್ಷಕರ ಮೇಲೆ ಹೇರುತ್ತಿರುವುದು ನಿಜಕ್ಕೂ ಆಘಾತಕಾರಿ.

ಸಿನಿಮಾಗಳಿಗಿಂತ ಹೆಚ್ಚು ಪ್ರೇಕ್ಷಕರಿರುವ ಇಂದಿನ ವಿವಿಧ ವಾಹಿನಿಗಳಲ್ಲಿ ಬರುವ ಎಲ್ಲ ರಿಯಾಲಿಟಿ ಶೋ ಹೆಸರಿನ ಮಂಗಾಟಗಳಲ್ಲಿ (ಮಕ್ಕಳನ್ನು ಒಳಗೊಂಡ ಶೋಗಳನ್ನೂ ಸೇರಿ), ವಿವಾಹೇತರ ಸಂಬಂಧಗಳು, ಮದ್ಯಪಾನ, ಕುಚೇಷ್ಟೆ, ಅಶ್ಲೀಲತೆ, ಅಸಭ್ಯ ನೃತ್ಯಗಳನ್ನು ಹಾಸ್ಯವೆಂಬ ಹೆಸರಿನಲ್ಲಿ ಪ್ರಸ್ತುತಪಡಿಸುತ್ತಾ ನಗಿಸಲು ಯತ್ನಿಸುತ್ತಿರುವುದು ಅಸಹ್ಯಕರ. ಜಡ್ಜ್, ಮೆಂಟರ್‌ಗಳ ಹೆಸರಿನಲ್ಲಿ ಜವಾಬ್ದಾರಿಯುತ ಸ್ಥಾನಗಳಲ್ಲಿ ಕುಳಿತಿರುವ ಪ್ರಖ್ಯಾತ ನಟ–ನಟಿ, ನಿರ್ದೇಶಕರು ಈ ಅಪಭ್ರಂಶಗಳಿಗೆ, ವಿಕೃತಿಗಳಿಗೆ ಕೇಕೆ ಹಾಕಿಕೊಂಡು ಚಪ್ಪಾಳೆ ತಟ್ಟಿಕೊಂಡು ಪ್ರೋತ್ಸಾಹಿಸುತ್ತಾರೆ. ಇವರುಗಳನ್ನು ಆರಾಧಿಸಿಕೊಂಡು, ಅವರ ಬಾಯಲ್ಲಿ ಬಂದದ್ದೇ ಭಗವದ್ಗೀತೆ ಎಂದು ನಂಬುವ ಬಹುತೇಕ ಪ್ರೇಕ್ಷಕರ ಸದಭಿರುಚಿಯನ್ನು ಹಳ್ಳ ಹಿಡಿಸುತ್ತಿರುವ ಈ ಚಾನೆಲ್‌ಗಳು, ಸೆಲೆಬ್ರಿಟಿಗಳು ನಿಜಕ್ಕೂ ಎಸಗುತ್ತಿರುವ ಅಪರಾಧದ ಗಾಂಭೀರ್ಯ ಯಾರಿಗೂ ಅರ್ಥವಾಗುತ್ತಿಲ್ಲವೇ ಅಥವಾ ಜಾಣ ಕುರುಡನ್ನು ಪ್ರದರ್ಶಿಸುತ್ತಿದ್ದಾರೆಯೋ ಒಂದು ಪೀಳಿಗೆಯಲ್ಲಿ ಕೆಟ್ಟ ಅಭಿರುಚಿಯನ್ನು ಹಾಸ್ಯದ ಹೆಸರಿನಲ್ಲಿ ಅಧಿಕೃತವಾಗಿ ಬೆಳೆಯಗೊಡುತ್ತಿರುವ ಇವರೆಲ್ಲರದೂ ಸಮಾಜ ಘಾತುಕ ನಡವಳಿಕೆ. ಟಿವಿಗೂ ಸೆನ್ಸಾರ್ ಮಂಡಳಿ ಇದ್ದರೆ ಸರಿ ಎಂದೇನೋ ನಾವು ಹೇಳಬಹುದು. ಆದರೆ, ಆತ್ಮಸಾಕ್ಷಿ, ಸಾಮಾಜಿಕ ಜವಾಬ್ದಾರಿ ಎನ್ನುವ ತತ್ವಗಳಿಗೆ ಈಗ ಜಾಗವಿಲ್ಲವೇ ಎಂದು ಪ್ರಶ್ನಿಸುವ ಹಾಗಾಗುತ್ತದೆ.

ಮತ್ತೊಬ್ಬರನ್ನು ನಗುವಂತೆ ಮಾಡುವ ಧ್ಯೇಯ ನಮ್ಮದಾಗಿದ್ದರೆ, ಹಾಗೆ ನಾವು ಹಾಸ್ಯ ಮಾಡಲು ಆತ್ಮಸ್ಥ ಮತ್ತು ಪರಸ್ಥ ಎಂಬ ಎರಡು ವಿಧಗಳನ್ನು ನಾಟ್ಯಶಾಸ್ತ್ರ ಹೇಳುತ್ತದೆ. ಆತ್ಮಸ್ಥ ಎಂದರೆ, ನಮ್ಮ ಮೇಲೆ ನಾವೇ ಹಾಸ್ಯ ಮಾಡಿಕೊಳ್ಳುವುದು. ಪರಸ್ಥ ಎಂದರೆ, ಇನ್ನೊಬ್ಬರ ಮೇಲೆ ಹಾಸ್ಯ ಮಾಡುವುದು. ಇವೆರಡರಲ್ಲಿ ಮೊದಲನೆಯದು ನಮ್ಮ ಆತ್ಮಾವಲೋಕನಕ್ಕೆ ಒಂದು ದಾರಿಯೂ ಕೂಡ. ಎರಡನೆಯ ರೀತಿಯನ್ನು ಅನುಸರಿಸುತ್ತೇವಾದರೆ, ಅದು ನಮ್ಮ ಸಹೃದಯತೆಯನ್ನು ತೋರಬೇಕು.

ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಇನ್ನೊಬ್ಬರ ಮೊಗದಲ್ಲಿ ನಗು ತರಿಸಲು ನಾವು ಯಶಸ್ವಿಯಾದರೆ, ಆಗ ಪ್ರತಿದಿನವೂ ನಗುವಿನ ದಿನ ಎನಿಸಿ ಎಲ್ಲರೂ ಆರೋಗ್ಯದಿಂದ ನಳನಳಿಸುತ್ತಾ ಸಂತಸದಿಂದಿರುತ್ತೇವೆ.

ಕುಹಕ, ಕುಟಿಲ ನಗು ತ್ಯಜಿಸಿ ಸಂತೃಪ್ತ ನಗುನಕ್ಕು ಹಗುರಾಗೋಣ, ಇತರರನ್ನೂ ಹಗುರಾಗಿಸೋಣ.

ಮೈಸೂರು ಬಿಜೆಪಿ ಕಚೇರಿಯಲ್ಲಿ ಅಹಲ್ಯಾಬಾಯಿ ಹೋಳ್ಕರ್ ಗುಣಗಾನ

ಮೈಸೂರು, ಮೇ 21(ಎಂಟಿವೈ)– ಸಣ್ಣ ಪುಟ್ಟ ವಿಚಾರಗಳನ್ನೇ ದೊಡ್ಡದು ಮಾಡಿಕೊಂಡು ಕೋಪ ಹಾಗೂ ವಿಚ್ಛೇಧನದ ಹಾದಿಯತ್ತ ಸಾಗುತ್ತಿರುವ ಇಂದಿನ ಮಹಿಳೆಯರು ಅಹಲ್ಯಾಬಾಯಿ ಹೋಳ್ಕರ್ ಅವರನ್ನು ಆದರ್ಶವಾಗಿ ಸ್ವೀಕರಿಸಿ ಸವಾಲುಗಳನ್ನು ಹಿಮ್ಮೆಟ್ಟಿ ನಿಲ್ಲಬೇಕು ಎಂದು ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ ಸಲಹೆ ನೀಡಿದ್ದಾರೆ.

ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಅಹಲ್ಯಾಬಾಯಿ ಹೋಳ್ಕರ್ ಅವರ ಜನ್ಮ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಮಹಿಳೆಯರು ಸಣ್ಣ ವಿಚಾರಕ್ಕೂ ಸಹನೆ ಕಳೆದುಕೊಳ್ಳುತ್ತಿದ್ದಾರೆ. ಮಹಿಳೆಯರಲ್ಲಿ ಅಸಹನೆ, ಕೋಪ ಹೆಚ್ಚಾಗುತ್ತಿದೆ. ಸಣ್ಣ ಕಾರಣಕ್ಕೂ ವಿಚ್ಛೇದನದ ಹಾದಿ ಹಿಡಿಯುತ್ತಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶ ಮತ್ತು ಸವಲತ್ತುಗಳು ಸಿಗುತ್ತಿವೆ. ಇದರಿಂದ ಏನು ಬೇಕಾದರೂ ಸಾಧಿಸಬಹುದಾಗಿದೆ. ಆದರೆ, ಸಾಧನೆ ಮಾಡುವುದಕ್ಕೆ ಒಲವು ತೋರಿಸುತ್ತಿಲ್ಲ. ಅಹಲ್ಯಾಬಾಯಿ ಹೋಳ್ಕರ್ ಅವರು ಸಾವಿರಾರು ಅಡಚಣೆಗಳಿದ್ದರೂ ಅವೆಲ್ಲವನ್ನು ಮೆಟ್ಟಿ ನಿಂತು ಸಾಧಿಸಿ ಮಾದರಿಯಾಗಿದ್ದಾರೆ ಎಂದು ತಿಳಿಸಿದರು



ಅಹಲ್ಯಾಬಾಯಿ ಹೋಳ್ಕರ್ ಅವರ ಜನ್ಮ ದಿನಾಚರಣೆ ಅಂಗವಾಗಿ ಮಹಿಳಾ ಕಾರ್ಯಕರ್ತೆಯರಿಗಾಗಿ ಆಯೋಜಿಸಿದ್ದ ಕಾರ್ಯಾಗಾರಕ್ಕೆ ರಾಜ್ಯ ಬಿಜೆಪಿ ಮೋರ್ಚಾ ಅಧ್ಯಕ್ಷೆ ಮಂಜುಳಾ, ಅಹಲ್ಯಾಬಾಯಿ ಹೋಳ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಅಹಲ್ಯಾಬಾಯಿ ಹೋಳ್ಕರ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಆದರ್ಶವಾಗಿ ಸ್ವೀಕರಿಸಿ, ಅವರ ಪ್ರತಿಮೆಯನ್ನು ಸಂಸತ್ತಿನ ಗ್ರಂಥಾಲಯದಲ್ಲಿ ಸ್ಥಾಪಿಸಿದ್ದಾರೆ. ಅಲ್ಲದೆ, ಕಾಶಿ ಕಾರಿಡಾರ್‌ನಲ್ಲೂ ಅವರ ಪ್ರತಿಮೆ ಪ್ರತಿಷ್ಠಾಪಿಸಿದ್ದಾರೆ. ಅಹಲ್ಯಾಬಾಯಿ ಅವರು ಕಾಶಿ ವಿಶ್ವನಾಥ ದೇವಾಲಯವನ್ನು ಮೊದಲು ಜೀರ್ಣೋದ್ಧಾರ ಮಾಡಿದರು. ದೇವಸ್ಥಾನದ ಉದ್ಧಾರಕ್ಕೆ ಪ್ರಜೆಗಳ ಬೊಕ್ಕಸವನ್ನು ವ್ಯಯ ಮಾಡದೆ, ತಮ್ಮ ಹಣವನ್ನೇ ಖರ್ಚು ಮಾಡಿದ್ದಾರೆ. ಅವರ ಆಡಳಿತದಲ್ಲಿ ಮಹಿಳೆಯರಿಗೆ ಸೀರೆ, ಆಭರಣದ ಕಸೂತಿ ಕೆಲಸದಿಂದ ಉದ್ಯೋಗ ಸೃಷ್ಟಿ ಮಾಡಿಕೊಟ್ಟರು, ಕೃಷಿಗೆ ಒತ್ತು ನೀಡಿದರು. ಬಾಲ್ಯವಿವಾಹವನ್ನು ತಡೆದರು. ಅವರಿಂದ ಮಹೇಶ್ವರ ಸೀರೆಗಳು ಇವತ್ತಿಗೂ ಹೆಚ್ಚು ಪ್ರಸಿದ್ಧಿ ಕಂಡಿದೆ. ಅವರ ಚಿಂತನೆಯೇ ಇಂದಿನ ಸ್ಕಿಲ್ ಇಂಡಿಯಾ ಯೋಜನೆ ಎಂದು ವಿವರಿಸಿದರು.

ಕರ್ನಾಟಕ ಸರ್ಕಾರ 2 ವರ್ಷ ಪೂರೈಸಿದ ಸಂಭ್ರಮದಲ್ಲಿದೆ. ಆದರೆ, ಇಡೀ ರಾಜ್ಯದಲ್ಲಿ ಮಹಿಳೆಯರ ದೌರ್ಜನ್ಯ, ಬಾಣಂತಿಯರ ಸಾವು ಅಪಾರವಾಗಿದೆ. ಅವರ ಸಮಾಧಿಯ ಮೇಲೆ ಸಂಭ್ರಮಾಚರಣೆ ಮಾಡುತ್ತಿದೆ ಎಂದು ಕಿಡಿಕಾರಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ರೇಣುಕಾ ರಾಜು, ಜಿಲ್ಲಾ ಮಹಿಳಾ ಪ್ರಧಾನ ಕಾರ್ಯದರ್ಶಿ ಬಿ.ಯು. ಚಂದ್ರಕಲಾ, ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಮೇಶ್, ಪಾಲಿಕೆ ಮಾಜಿ ಸದಸ್ಯ ಕಮಲಮ್ಮ, ನಗರಪಾಲಿಕೆ ಮಾಜಿ ಉಪ ಮೇಯರ್ ರತ್ನ ಲಕ್ಷ್ಮಣ್, ಮಹಿಳಾ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯೆ ಶಾಂತಮ್ಮ, ಪುಷ್ಪ ವೆಂಕಟೇಶ್, ಮುಖಂಡರಾದ ಕೇಬಲ ಮಹೇಶ್, ರಾಕೇಶ್ ಗೌಡ ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೂರನೇ ಪುಟದಿಂದ

ಪ್ರತಿಷ್ಠಿತ ಬೂಕರ್ ಪ್ರಶಸ್ತಿ

ಹೆಣ್ಣು ಮಕ್ಕಳ ದೈನಂದಿನ ಬದುಕನ್ನು ಆಧರಿಸಿ ಈ ಕತೆ ಬರೆಯಲಾಗಿತ್ತು ಮೇ 21ರಂದು ಲಂಡನ್‌ನಲ್ಲಿ ಟೇಟ್ ಮಾಡರ್ನ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಧಿಕೃತವಾಗಿ ಪ್ರಶಸ್ತಿ ಘೋಷಿಸಲಾಯಿತು. ಫ್ರೆಂಚ್‌ನಿಂದ ಅನುವಾದವಾದ 2 ಕೃತಿಗಳು, ಜಪಾನ್, ಇಟಾಲಿಯನ್ ಹಾಗೂ ಡ್ಯಾನಿಷ್ ಭಾಷೆಯ ತಲಾ 1 ಕೃತಿ 'ಶಾರ್ಟ್ ಲಿಸ್ಟ್'ನಲ್ಲಿದ್ದವು. ಶಾರ್ಟ್ ಲಿಸ್ಟ್‌ನಲ್ಲಿ ಆಯ್ಕೆಯಾಗಿದ್ದ ಎಲ್ಲರನ್ನೂ ಲಂಡನ್ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು.

ಮುಖ್ಯಮಂತ್ರಿ ಅಭಿನಂದನೆ: ಇನ್ನೂ ಬೂಕರ್ ಪ್ರಶಸ್ತಿ ಪಡೆದ ಬಾನು ಮುಸ್ತಾಕ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿನಂದನೆ ಸಲ್ಲಿಸಿದ್ದಾರೆ. ಅಂತರ ರಾಷ್ಟ್ರೀಯ ಬೂಕರ್ ಸಾಹಿತ್ಯ ಪ್ರಶಸ್ತಿ ಪುರಸ್ಕೃತರಾಗಿರುವ ಕನ್ನಡದ ಹೆಮ್ಮೆಯ ಲೇಖಕಿ ಬಾನು ಮುಷ್ತಾಕ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಇದು ಕನ್ನಡ, ಕನ್ನಡಿಗ ಮತ್ತು ಕರ್ನಾಟಕ ಸಂಭ್ರಮಿಸುವ ಹೊತ್ತು. ಈ ನೆಲದ ಸೌಹಾರ್ದತೆ, ಜಾತ್ಯತೀತತೆ ಮತ್ತು ಸೋದರತ್ವದ ನಿಜ ಮೌಲ್ಯಗಳನ್ನು ಮೈಗೂಡಿಸಿಕೊಂಡು ಬರೆಯುತ್ತಿರುವ ಬಾನು ಮುಷ್ತಾಕ್ ಅವರು ಕನ್ನಡದ ಹಿರಿಮೆಯ ಬಾವುಟವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಾರಿಸಿ ನಮಗೆಲ್ಲ ಗೌರವ ತಂದುಕೊಟ್ಟಿದ್ದಾರೆ.

ಭಸ್ತಿ ಅಭಿನಂದಿಸಿದ ಸಿಎಂ: ಅವರು ಇನ್ನಷ್ಟು ಕಾಲ ಸತ್ವಯುತವಾಗಿ ಬರೆಯುತ್ತಾ ಕನ್ನಡದ ಕಂಪನ್ನು ಜಗದಗಲಕ್ಕೆ ಪಸರಿಸುತ್ತಾ ಇರಲಿ ಎಂದು ಹಾರೈಸುತ್ತೇನೆ. ಬೂಕರ್ ಪ್ರಶಸ್ತಿಗೆ ಭಾಜನವಾಗಿರುವ ಅವರ ಕೃತಿ 'ಹೃದಯ ದೀಪ'ವನ್ನು ಇಂಗ್ಲೀಷ್‌ಗೆ ಅನುವಾದಿಸಿರುವ ಪ್ರತಿಭಾವಂತ ಲೇಖಕಿ ದೀಪಾ ಭಸ್ತಿ ಅವರಿಗೂ ಕನ್ನಡಿಗರೆಲ್ಲರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಬರೆದುಕೊಂಡಿದ್ದಾರೆ.

ಕೊಡಗಿನ ಪ್ರತಿಭೆ ದೀಪಾ ಭಸ್ತಿ

ದೀಪಾ ಅವರು ಈಗಾಗಲೇ ಕನ್ನಡದ ಹಿರಿಯ ಸಾಹಿತಿಗಳಾದ ಡಾ.ಶಿವರಾಮ ಕಾರಂತ್, ಸಣ್ಣ ಕಥೆಗಳ ಮೂಲಕ ಸಾಹಿತ್ಯ ವಲಯವನ್ನು ಪ್ರಭಾವಿಸಿದ್ದ ಕೊಡಗಿನ ಗೌರಮ್ಮ ಅವರ ಕೃತಿಗಳನ್ನು ಇಂಗ್ಲೀಷ್‌ಗೆ ಅನುವಾದ ಮಾಡಿದ್ದಾರೆ. ಬಾನು ಮುಷ್ತಾಕ್ ಅವರ ಕಥಾ ಸಂಗ್ರಹದ(ಹಸೀನಾ ಮತ್ತು ಇತರ ಕತೆಗಳು) ಅನುವಾದ ಕೃತಿ 'ಹಾರ್ಟ್ ಲ್ಯಾಂಪ್' ಅಂತಾರಾಷ್ಟ್ರೀಯ ಮನ್ನಣೆಯ ಬುಕ್ಕರ್ ಪ್ರಶಸ್ತಿಗೆ ಪಾತ್ರವಾಗುವ ಮೂಲಕ, ಭಾರತದ ಪ್ರಾದೇಶಿಕ ಭಾಷೆಗಳಲ್ಲಿ ಒಂದಾದ ಕನ್ನಡ ಸಾಹಿತ್ಯ ಶ್ರೀಮಂತಿಕೆಯನ್ನು ವಿಶ್ವದ ಮುಂದೆ ತೆರೆದಿಟ್ಟಿದೆ. ಇದೇ ಹಾರ್ಟ್ ಲ್ಯಾಂಪ್ ಅನುವಾದಿತ ಕೃತಿ ಕಳೆದ ವರ್ಷ ಪ್ರತಿಷ್ಠಿತ 'ಪೆನ್ ಟ್ರಾನ್ಸ್‌ಲೇಟ್' ಪ್ರಶಸ್ತಿಯನ್ನೂ ಮುಡಿಗೇರಿಸಿಕೊಂಡಿತ್ತು. ಹಾರ್ಟ್ ಲ್ಯಾಂಪ್ ಬಾನು ಮುಷ್ತಾಕ್ ಅವರ ಚೊಚ್ಚಲ ಅನುವಾದಿತ ಕೃತಿಯಾಗಿದ್ದರೆ, ದೀಪಾ ಭಸ್ತಿ ಅವರ ಮೂರನೇ ಪ್ರಕಟಿತ ಅನುವಾದವಾಗಿದೆ.

ಅನುವಾದಕ್ಕೆ ನಾಲ್ಕೈದು ತಿಂಗಳು: 'ಹಾರ್ಟ್ ಲ್ಯಾಂಪ್' ಅನುವಾದ ಕೃತಿ ಬುಕ್ಕರ್ ಪ್ರಶಸ್ತಿ ಪಡೆದ ಹಿನ್ನೆಲೆ ಅನುವಾದಕಿ ದೀಪಾ ಭಸ್ತಿ ಅವರ ತಂದೆ ಬಿ.ಎನ್.ಪ್ರಕಾಶ್ ಮಾಧ್ಯಮದೊಂದಿಗೆ ಮಾತನಾಡುತ್ತಾ, ಬಾನು ಮುಷ್ತಾಕ್ ಅವರ ಕಥಾ ಸಂಕಲನವನ್ನು ಇಂಗ್ಲೀಷ್‌ಗೆ ಮಡಿಕೇರಿಯ ರೈಫಲ್ ರೇಂಜ್‌ನ ಮನೆಯಲ್ಲೇ ದೀಪಾ ತರ್ಜುಮೆ ಮಾಡಿದ್ದಾಳೆ. ಇದಕ್ಕಾಗಿ ಆಕೆ ಸರಿ ಸುಮಾರು ನಾಲ್ಕೈದು ತಿಂಗಳ ಪರಿಶ್ರಮ ಪಟ್ಟಿರುವುದಾಗಿ ತಿಳಿಸಿದರು.

ಪತ್ರಕರ್ತೆಯೂ ಹೌದು: ಚೆನ್ನೈನಲ್ಲಿ 3 ವರ್ಷಗಳ ಕಾಲ ಪ್ರಾಥಮಿಕ ವಿದ್ಯಾಭ್ಯಾಸ, ಮಡಿಕೇರಿಯ ಕೊಡಗು ವಿದ್ಯಾಲಯದಲ್ಲಿ ಎಸ್‌ಎಸ್‌ಎಲ್‌ಸಿ, ವಿಜ್ಞಾನ ವಿಷಯದಲ್ಲಿ ಪಿಯುಸಿ ವ್ಯಾಸಂಗ ಮಾಡಿದ ದೀಪಾ ಭಸ್ತಿ, ನಗರದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನಲ್ಲಿ ಬಿ.ಕಾಂ. ಪದವಿ ಪಡೆದಿದ್ದಾರೆ. ನಂತರ ಅವರು ಪತ್ರಿಕೋದ್ಯಮದ ಕುರಿತು ಆಸಕ್ತಿ ಹೊಂದಿ ಮಂಗಳೂರು ವಿವಿಯಲ್ಲಿ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದುಕೊಂಡಿದ್ದರು. ಇಂಡಿಯನ್ ಎಕ್ಸ್‌ಪ್ರೆಸ್, ಟೈಮ್ಸ್ ಆಫ್ ಇಂಡಿಯಾದಲ್ಲಿ ಕಾರ್ಯನಿರ್ವಹಿಸಿದ ದೀಪ ಭಸ್ತಿ, ಕನ್ನಡ ಭಾಷಾ ಸಾಹಿತ್ಯ ಕೃತಿಗಳನ್ನು ಇಂಗ್ಲೀಷ್‌ಗೆ ಅನುವಾದಿಸುವ ಕಡೆ ಅಪಾರ ಆಸಕ್ತಿ ಹೊಂದಿದ್ದರು. ದೀಪ ಭಸ್ತಿ ಅವರ ಪತಿ ಚೆಟ್ಟಿರ ಸುಜನ್ ನಾಣಯ್ಯ ಮಡಿಕೇರಿಯಲ್ಲಿ ನೆಲೆಸಿದ್ದು, ಪತ್ನಿಯ ಗಮನಾರ್ಹ ಸಾಧನೆ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ್ದಾರೆ. ಬುಕ್ಕರ್ ಪ್ರಶಸ್ತಿ ಗೆದ್ದಿರುವುದು ಕೊಡಗು ಜಿಲ್ಲೆ, ರಾಜ್ಯ ಸೇರಿದಂತೆ ಇಡೀ ದೇಶವೇ ಹೆಮ್ಮೆಪಡುವ ವಿಚಾರವಾಗಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಇಡಿ ದಾಳಿ

ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದರು. ಈ ಘಟನೆಗೆ ಸಂಬಂಧಿಸಿದಂತೆ ಕೆಲವು ಸಂಶಯಗಳು ಎದುರಾಗಿದ್ದವು, ರಮೇಶ್ ಆತ್ಮಹತ್ಯೆ ನಂತರ ಐ.ಟಿ. ತನಿಖೆ ಸ್ಥಗಿತಗೊಳಿಸಿತ್ತು. ಇದಕ್ಕೂ ಮುನ್ನ ಕಾಫಿ–ಡೇ ಸಮೂಹ ಸಂಸ್ಥೆಗಳ ಅಧ್ಯಕ್ಷ ಹಾಗೂ ದಿವಂಗತ ಮಾಜಿ ಸಿಎಂ ಎಸ್.ಎಂ.ಕೃಷ್ಣ ಅವರ ಅಳಿಯ ಸಿದ್ಧಾರ್ಥ ಅವರು ಆತ್ಮಹತ್ಯೆಗೆ ಶರಣಾಗಿದ್ದರು. ಸಿದ್ಧಾರ್ಥ ಅವರ ಆತ್ಮಹತ್ಯೆಗೂ ಮುನ್ನ, ಚಲಾವಣೆಯಿಂದ ಸ್ಥಗಿತಗೊಂಡಿದ್ದ 2000 ರೂ. ಮೌಲ್ಯದ ನೋಟುಗಳ ಬದಲಾವಣೆ ಆರೋಪದ ಮೇಲೆ ಐ.ಟಿ. ಮತ್ತು ಇ.ಡಿ. ದಾಳಿ ಮಾಡಿದ್ದನ್ನು ಸ್ಮರಿಸಬಹುದು. ದಾಳಿ ನಂತರ ಇಬ್ಬರು ವ್ಯಕ್ತಿಗಳ ಆತ್ಮಹತ್ಯೆ ವಿಷಯ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿತ್ತು, ಇದರಿಂದ ಸಿದ್ಧಾರ್ಥ ಮೇಲಿನ ತನಿಖೆಯನ್ನು ಐ.ಟಿ. ತಾತ್ಕಾಲಿಕವಾಗಿ ಸ್ಥಗಿತಗೊಳಿಸಿತ್ತು.

ಖರ್ಗೆ ಕೂಡ ಪಪ್ಪು ಥರ ಆಡ್ತಾರೆ!

ಪರಿಪರಿಯಾಗಿ ಬೇಡಿದ್ದರು. ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಕೂಡ ಇದೇ ವಿಚಾರವಾಗಿ ಸ್ಪಷ್ಟನೆ ನೀಡಿದ್ದಾರೆ. ಆದರೂ ಭಾರತದ ಮಿಲಿಟರಿ ಕಾರ್ಯಾಚರಣೆ ಬಗ್ಗೆ ಕಾಂಗ್ರೆಸ್‌ನವರಿಗೆ ಅನು ಮಾನ ಎಂದು ಹೇಳಿದರು.

ಮುಂಬೈ ಮೇಲೆ ಉಗ್ರರ ದಾಳಿಯಾಗಿ ನೂರಾರು ಮಂದಿ ಪ್ರಾಣ ಕಳೆದುಕೊಂಡರು. ಆಗ ಕಾಂಗ್ರೆಸ್‌ನವರು ಚುಟ್–ಪುಟ್ ದಾಳಿ ಮಾಡಲಿಲ್ಲ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ದಾವೂದ್ ಇಬ್ರಾಹಿಂ ರಾಜಾರೋಷವಾಗಿ ಓಡಾ ಡುತ್ತಿದ್ದ. ಇಷ್ಟೆಲ್ಲಾ ಲೋಪ ಇಟ್ಟುಕೊಂಡು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮೇಲಿನ ಮತ್ಸರಕ್ಕೆ ಕಾಂಗ್ರೆಸ್‌ನವರು ಭಾರತ ಸೇನೆಯನ್ನು ಟೀಕಿಸುತ್ತಿದ್ದಾರೆ ಎಂದರು.

ನರೇಂದ್ರ ಮೋದಿ ಅವರು ಪ್ರಧಾನಿ ಯಾದ ನಂತರ ಭಾರತದ ಮಿಲಿಟರಿಗೆ ಶಕ್ತಿ ಬಂದಿದೆ. ದಾವೂದ್ ಇಬ್ರಾಹಿಂ ಎಲ್ಲೂ ಕಾಣಿಸುತ್ತಿಲ್ಲ. ಈ ಮೂಲಕ ಭಾರತದ ಸೇನೆ ಕಾರ್ಯಕ್ಷಮತೆ ಹೆಚ್ಚಾಗಿದೆ ಎಂದು ಪ್ರತಾಪ್ ಸಿಂಹ ಸ್ಪಷ್ಟಪಡಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರು ನಮ್ಮ ಪಾಕಿಸ್ತಾನ ಎಂಬ ಪದ ಬಳಕೆ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಪ್ರತಾಪ್ ಸಿಂಹ ಅವರು, ಖರ್ಗೆ ಹೇಳಿಕೆ ಸಹಜವಾದುದ್ದು, ಅದು ಅವರದೆ ಪಾಕಿಸ್ತಾನ, ಕಾಂಗ್ರೆಸ್ ಪಾಕಿಸ್ತಾನದ ಪಿತಾಮಹ. ಹೀಗಾಗಿ ನಮ್ಮ ಪಾಕಿಸ್ತಾನ ಎಂದಿದ್ದಾರಷ್ಟೆ ಎಂದರು. ಟರ್ಕಿ ಮತ್ತು ಚೀನಾ ಭಾರತದ ಪರ ನಿಲ್ಲಲಿಲ್ಲ ಎಂಬ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಇದೇ ವೇಳೆ ಟಾಂಗ್ ಕೊಟ್ಟ ಪ್ರತಾಪ್ ಸಿಂಹ, ಟರ್ಕಿ ಮುಸ್ಲಿಂ ದೇಶವಾಗಿದ್ದು, ಹಾಗಾಗಿ ಪಾಕಿಸ್ತಾನಕ್ಕೆ ಬೆಂಬಲ ನೀಡಿದ್ದಾರೆ. ಈ ಕನಿಷ್ಠ ಜ್ಞಾನ ಪ್ರಿಯಾಂಕ್ ಖರ್ಗೆಗೆ ಇಲ್ಲ ವಲ್ಲ ಎಂದು ಗೇಲಿ ಮಾಡಿದರು. ಚೈನಾ ನಮ್ಮ ಶತ್ರು ದೇಶ. ಹಾಗಾಗಿ ಅದೂ ಕೂಡ ನಮ್ಮ ವಿರುದ್ಧ ನಿಂತಿದೆ. ಆದರೆ ಅರಬ್ ರಾಷ್ಟ್ರಗಳು ಭಾರತದ ವಿರುದ್ಧವಾಗಿಲ್ಲ. ಇದೇ ಭಾರತದ ರಾಜತಾಂತ್ರಿಕ ಗೆಲುವು ಎಂದು ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು.

ನಾಲ್ಕು ಕುಮ್ಕಿ ಆನೆಗಳ ಹಸ್ತಾಂತರ

ಪವನ್ ಕಲ್ಯಾಣ್ ಅವರಿಗೆ ಆನೆಗಳನ್ನು ಹಸ್ತಾಂತರ ಮಾಡಿದರು. ಈ ವೇಳೆ ರಾಜ್ಯದಿಂದ ಆಂಧ್ರಪ್ರದೇಶ ರಾಜ್ಯಕ್ಕೆ ಕುಮ್ಕಿ ಆನೆಗಳನ್ನು ಹಸ್ತಾಂತರಿಸುವ ಒಡಂಬಡಿಕೆಗೆ ಸಹಿ ಹಾಕಿದರು. ಈ ವೇಳೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ದೇಶದಲ್ಲೇ ಆನೆ ಸಂಪತ್ತು ಹೆಚ್ಚಾಗಿರುವ ರಾಜ್ಯ ನಮ್ಮದು. 3,695 ಆನೆಗಳು ನಮ್ಮಲ್ಲಿವೆ. ಮಾನವ–ಆನೆ ಸಂಘರ್ಷ ತಡೆಗಟ್ಟಲು ಅಕ್ಕಪಕ್ಕದ ರಾಜ್ಯಗಳ ಸಹಕಾರವೂ ಅಗತ್ಯ. ಮಾನವ, ಆನೆ ಸಂಘರ್ಷ ತಡೆಯುವುದರಿಂದ ಜೀವ ಹಾನಿ, ಬೆಳೆ ಹಾನಿ ತಪ್ಪುತ್ತದೆ. ಈ ಮಹತ್ವದ ಉದ್ದೇಶದಿಂದಲೇ ರಾಜ್ಯದಿಂದ ಆರು ಕುಮ್ಕಿ ಆನೆಗಳನ್ನು ಆಂಧ್ರಕ್ಕೆ ಹಸ್ತಾಂತರಿಸಲಾಗುತ್ತಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಸಚಿವರಾದ ಕೆ.ಜೆ.ಜಾರ್ಜ್, ದಿನೇಶ್ ಗುಂಡೂರಾವ್, ಬೈರತಿ ಸುರೇಶ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತಿತರರು ಹಾಜರಿದ್ದರು. ಪ್ರಸ್ತುತ ಆಂಧ್ರಪ್ರದೇಶಕ್ಕೆ ರಾಜ್ಯ ಸರ್ಕಾರ ನಾಲ್ಕು ಆನೆಗಳನ್ನು ಹಸ್ತಾಂತರಿಸಿದ್ದು, ಮುಂದಿನ ದಿನಗಳಲ್ಲಿ ಮತ್ತೆರಡು ಆನೆಗಳನ್ನು ಹಸ್ತಾಂತರಿಸಲಿದೆ ಎಂದು ತಿಳಿದುಬಂದಿದೆ.

ಎಂ.ಎ.ಸಲೀಂ ರಾಜ್ಯದ ಪ್ರಭಾರ ಡಿಜಿ–ಐಜಿಪಿ

ತೆರವಾದ ಸ್ಥಾನಕ್ಕೆ, ಸೇವಾ ಹಿರಿತನ ಆಧಾರದ ಮೇಲೆ ಸಿಐಡಿ ಡಿಜಿಪಿ ಡಾ.ಎಂ.ಎ. ಸಲೀಂ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಪ್ರಭಾರ ಡಿಜಿ–ಐಜಿಪಿಯಾಗಿ ನೇಮಕ ಮಾಡಲಾಗಿದೆ. 1966ರ ಜೂನ್ 25ರಂದು ಬೆಂಗಳೂರಿನ ಚಿಕ್ಕಬಾಣಾವರದಲ್ಲಿ ಜನಿಸಿದ ಡಾ.ಎಂ.ಎ.ಸಲೀಂ ಅವರು, 1989ರಲ್ಲಿ ವಾಣಿಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. 1993ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಪೊಲೀಸ್ ನಿರ್ವಹಣೆ ಕುರಿತು ಸ್ನಾತಕೋತ್ತರ ಪದವಿ ಪಡೆದ ಸಲೀಂ ಅವರು 2010ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಟ್ರಾಫಿಕ್ ಮ್ಯಾನೇಜ್ಮೆಂಟ್ ವಿಷಯದಲ್ಲಿ ಡಾಕ್ಟರೇಟ್ ಪದವಿ ಪಡೆದುಕೊಂಡಿದ್ದಾರೆ. ಸಲೀಂ ಅವರು ಮೈಸೂರು ನಗರ ಪೊಲೀಸ್ ಆಯುಕ್ತರಾಗಿಯೂ ಸೇವೆ ಸಲ್ಲಿಸಿದ್ದರು.

ಬಾನು ಮುಷ್ತಾಕ್ ತವರು ಹಾಸನದಲ್ಲಿ ಸಂಭ್ರಮ

ಹಾಸನ, ಮೇ 21– ಸಾಹಿತಿ ಬಾನು ಮುಷ್ತಾಕ್ ಅವರಿಗೆ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಲಭಿಸಿದ್ದರಿಂದ ತವರು ಹಾಸನದಲ್ಲಿ ಸಂಭ್ರಮ ಮನೆ ಮಾಡಿದೆ ಲೇಖಕಿ ಬಾನು ಮುಷ್ತಾಕ್ ಅವರ ನಗರದ ಪೆನ್ಷನ್ ಮೊಹಲ್ಲಾ ಮನೆಯಲ್ಲಿ ಕುಟುಂಬದ ಸದಸ್ಯರು ಸಿಹಿ ಹಂಚಿ ಸಂಭ್ರಮಿಸಿದರು.

ಬಾನು ಅವರ ಪುತ್ರ ತಾಹೀರ್, ಸೊಸೆ ಯಾಸಿನ್ ಹಾಗೂ ಮೊಮ್ಮಗಳಿಗೆ ಸಿಹಿ ತಿನ್ನಿಸಿ ಸಂತಸ ಹಂಚಿಕೊಂಡ ಅವರ ಪತಿ ಮುಷ್ತಾಕ್, ಈ ಗೌರವ ಕರ್ನಾಟಕಕ್ಕೆ, ವಿಶೇಷವಾಗಿ ಹಾಸನ ಜಿಲ್ಲೆಗೆ ಸಿಕ್ಕಿರುವುದು ಅತೀವ ಸಂತೋಷದ ವಿಷಯ. ಇಂಗ್ಲೆಂಡ್‌ನಲ್ಲಿ ಪ್ರಶಸ್ತಿ ಘೋಷಣೆಯವರೆಗೂ ಕುತೂಹಲದಿಂದ ಕಾದಿದ್ದೆವು. ಘೋಷಣೆಯಾದಾಗ ನಂಬಲಾಗಲಿಲ್ಲ ಎಂದು ಹೇಳಿದರು.

ಅವರ ಪುತ್ರ ತಾಹೀರ್ ಮಾತನಾಡಿ, ಪ್ರಶಸ್ತಿ ಬರುವವರೆಗೂ ಕುತೂಹಲವಿತ್ತು. ಇನ್ನೂ ಆ ಗುಂಗಿನಿಂದ ಹೊರಬರಲು ಆಗಿಲ್ಲ. ಈ ಹಿಂದೆ ಎಲ್ಲ ಬೂಕರ್ ಪ್ರಶಸ್ತಿಗಳು ಕಾದಂಬರಿಗೆ ಸಿಕ್ಕಿದ್ದವು. ಆದರೆ ಈ ಬಾರಿ ಆಯ್ದ ಕತೆಗಳಿಗೆ ಸಿಗುತ್ತದೆಯೋ ಇಲ್ಲವೋ ಎಂಬ ಅನುಮಾನ ಇತ್ತು. ಆ ಅನುಮಾನ ಮೀರಿ ನನ್ನ ತಾಯಿಯ ಕೃತಿಗೆ ಪ್ರಶಸ್ತಿ ಸಿಕ್ಕಿದೆ. ಇದು ನಮ್ಮ ನಾಡಿಗೆ ಹೆಮ್ಮೆಯ ವಿಚಾರ. ಅವರು ಮೊದಲಿನಿಂದಲೂ ಸಾಹಿತ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಈ ಪ್ರಶಸ್ತಿ ಸಿಕ್ಕಿರುವುದು ನಮಗೆ ಸಂತಸ ತಂದಿದೆ ಎಂದು ತಿಳಿಸಿದರು.

ಕೊನೆಯ ಹಂತದವರೆಗೆ ಕುತೂಹಲ ಇತ್ತು. ಇದೀಗ ಬೂಕರ್ ಪ್ರಶಸ್ತಿಗೆ ಭಾಜನರಾಗಿರುವುದು ಎಲ್ಲರೂ ಹೆಮ್ಮೆ ಪಡುವಂತಾಗಿದೆ. ಅದರಲ್ಲೂ ಹಾಸನದ ಜನತೆಗೆ ಸಂಭ್ರಮದ ಕ್ಷಣವಾಗಿದೆ. ಪ್ರತಿ ಭಾರತೀಯರು, ಅದರಲ್ಲೂ ಮಹಿಳೆಗೆ ಸಂದ ಗೌರವ ಇದಾಗಿದೆ ರಾಜ್ಯವೇ ಸಂಭ್ರಮಿಸುವ ದಿನವಾಗಿದೆ ಎಂದು ಅನನ್ಯ ಟ್ರಸ್ಟ್ ಅಧ್ಯಕ್ಷೆ ಕೆ.ಟಿ.ಜಯಶ್ರೀ ಹೇಳಿದರು.

ಹಾಸನ ಜಿಲ್ಲಾ ವಕೀಲರ ಸಂಘದ ಹಿರಿಯ ಸದಸ್ಯೆಯಾಗಿರುವ ಬಾನು ಮುಷ್ತಾಕ್ ಅವರ ಸಣ್ಣ ಕಥೆಯಾದ 'ಹಾರ್ಟ್ ಲ್ಯಾಂಪ್' ಕೃತಿಗೆ ಬೂಕರ್ ಪ್ರಶಸ್ತಿ ಬಂದಿರುವುದು ಕನ್ನಡ ಭಾಷೆಗೆ, ಜಿಲ್ಲೆಗೆ ಸಂದ ಗೌರವ. ಬಾನು ಮುಸ್ತಾಕ್ ಅವರು ಮಲೆನಾಡಿನ ಸಣ್ಣ ಸಣ್ಣ ಕಥೆಗಳನ್ನು ಬರೆದು ಇವತ್ತು ವಿಶ್ವದಲ್ಲಿ ಜನ ಮನ್ನಣೆ ಗಳಿಸಿರುವುದು ಹೆಮ್ಮೆಯ ವಿಷಯ ಎಂದು ವಕೀಲರ ಸಂಘದ ಸದಸ್ಯ ಚೆನ್ನಂಗಿಹಳ್ಳಿ ಶ್ರೀಕಾಂತ ಸಂತಸ ಹಂಚಿಕೊಂಡರು.

ಸಾಹಿತ್ಯ ಕ್ಷೇತ್ರದಲ್ಲಿ ಭಾರತಕ್ಕೆ ಒಂದು ಸ್ಥಾನಮಾನ ನೀಡುವ, ಕನ್ನಡಿಗರೆಲ್ಲ ಹೆಮ್ಮೆ ಪಡುವ, ಅದರಲ್ಲೂ ಹಾಸನದವರಾದ ನಮ್ಮ ಸಂತೋಷಕ್ಕೆ ಪಾರವೇ ಇಲ್ಲದಂತಾಗಿದೆ. ಸಾಹಿತಿಗಳಾದ ಬಾನು ಮುಷ್ತಾಕ್ ಅವರ ಕೃತಿಗೆ ಈ ಬಾರಿಯ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಸಿಕ್ಕಿದ್ದು, ಕನ್ನಡ ಸಾಹಿತ್ಯಕ್ಕೆ ಸಿಕ್ಕ ಮೊದಲ ಗರಿಮೆ. ಕನ್ನಡಿಗರಾದ, ಅದರಲ್ಲೂ ಹಾಸನದವರಾದ ಬಾನು ಮುಷ್ತಾಕ್ ಅವರಿಗೆ ಪ್ರೀತಿಪೂರ್ವಕ ಅಭಿನಂದನೆಗಳು. ಜೊತೆಗೆ ಕನ್ನಡ ಕೃತಿಯನ್ನ ಇಂಗ್ಲಿಷ್‌ಗೆ ಅನುವಾದಿಸಿ ಜಗದೆಲ್ಲೆಡೆ ಪಸರಿಸುವಂತೆ ಮಾಡಿದ ದೀಪಾ ಭಸ್ತಿ ಅವರಿಗೂ ಅಭಿನಂದನೆಗಳು ಎಂದು ಕೆಪಿಆರ್‌ಎಸ್ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಆರ್.ನವೀನ್ ಕುಮಾರ್ ಪ್ರತಿಕ್ರಿಯಿಸಿದ್ದಾರೆ.

ಕನ್ನಡ ನಾಡಿನ ಹೆಮ್ಮೆಯ ಪುತ್ರಿ, ಹಲ್ಮಿಡಿ ಶಾಸನ ದೊರೆತ ಹೊಯ್ಸಳ ನಾಡಿನ ಹೆಣ್ಣುಮಗಳು ಬಾನು ಮುಷ್ತಾಕ್ ಅವರಿಗೆ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ದೊರೆತಿರುವುದು ಕನ್ನಡ ನಾಡಿನ ಹಿರಿಮೆಗೆ ಹೆಮ್ಮೆ ಎನ್ನಿಸುತ್ತದೆ. ಅವರ ಸಣ್ಣ ಕತೆಗಳ ಅನುವಾದಿತ 'ಹಾರ್ಟ್ ಲ್ಯಾಂಪ್' ಕೃತಿಗೆ ಬೂಕರ್ ಪ್ರಶಸ್ತಿ ಸಿಕ್ಕಿರುವುದು ಕನ್ನಡಕ್ಕೆ ಸಿಕ್ಕ ಮೊದಲ ಗೌರವ ಇದಾಗಿದೆ. ಈ ಸಂಭ್ರಮದ ಕ್ಷಣವು ಕನ್ನಡ ನಾಡಿನ ಏಳು ಕೋಟಿ ಕನ್ನಡಿಗರಿಗೆ ಸಂತಸ ತಂದಿದೆ' ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಡಾ. ನಾಯಕರಹಳ್ಳಿ ಮಂಜೇಗೌಡ ಹಾಗೂ ವಚನ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷೆ ಚೈತ್ರಾ ನಾಯಕರಹಳ್ಳಿ ಹೇಳಿದ್ದಾರೆ.

ಬಾನು ಮುಷ್ತಾಕ್ ಅವರು ಬೂಕರ್ ಸಾಹಿತ್ಯ ಪ್ರಶಸ್ತಿ ಪುರಸ್ಕೃತರಾಗಿದ್ದು, ಕನ್ನಡಿಗರು, ಅದರಲ್ಲೂ ಹಾಸನದವರಾದ ನಾವೆಲ್ಲಾ ಬಾನು ಮುಷ್ತಾಕ್ ಅವರಿಂದಾಗಿ ಹೆಮ್ಮೆಯ ಶಿಖರವೇರಿದ್ದೇವೆ. ಅವರಿಗೆ ಪ್ರೀತಿ ಪೂರ್ವಕ ಅಭಿನಂದನೆಗಳು. ಜೊತೆಗೆ ದೀಪಾ ಭಸ್ತಿ ಅವರಿಗೂ ಅಭಿನಂದನೆಗಳು' ಎಂದು ಎಂ.ಜಿ. ಪೃಥ್ವಿ ಹೇಳಿದ್ದಾರೆ.

ಪತ್ರಕರ್ತೆ, ನ್ಯಾಯವಾದಿ, ಲೇಖಕಿ: ಹಾಸನದಲ್ಲಿ ನೆಲೆಸಿರುವ ಭಾನು ಮುಷ್ತಾಕ್ ಅವರು ಲೇಖಕಿಯಾಗಿ, ಪತ್ರಕರ್ತೆಯಾಗಿ, ನ್ಯಾಯವಾದಿಯಾಗಿ ಕ್ರಿಯಾಶೀಲರಾಗಿದ್ದಾರೆ. ಐದು ಕಥಾ ಸಂಕಲನ ಮತ್ತು ಒಂದು ಪ್ರಬಂಧ ಸಂಕಲನ ಪ್ರಕಟಿಸಿರುವ ಅವರು ಕೌಟುಂಬಿಕ ತಡೆ ಕಾಯ್ದೆಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಫಾರಸಿ ಕೃತಿ ತಾರೀಖ್ –ಎ–ಫೆರಿಸ್ತಾವನ್ನು ಉರ್ದುವಿನಿಂದ ಕನ್ನಡೀಕರಿಸಿದ್ದಾರೆ. ಕರಿನಾಗರಗಳು' ಕತೆಯನ್ನು ಆಧರಿಸಿ ಗಿರೀಶ್ ಕಾಸರವಳ್ಳಿ ಅವರು 'ಹಸೀನಾ' ಚಿತ್ರ ನಿರ್ದೇಶಿಸಿದ್ದರು. ಭಾನು ಅವರ ಅನೇಕ ಕತೆಗಳು ಹಿಂದಿ, ಇಂಗ್ಲಿಷ್, ಉರ್ದು, ಮಲಯಾಳಂ, ತಮಿಳು ಭಾಷೆಗಳಿಗೆ ಅನುವಾದಗೊಂಡಿವೆ.

1954 ಏಪ್ರಿಲ್ 3ರಂದು ಹಾಸನದಲ್ಲಿ ಜನಿಸಿದರು. ಅವರು ಬರೆದ 'ಬೆಂಕಿಮಳೆ' ಕಥೆ ಹಸೀನಾ ಹೆಸರಲ್ಲಿ ಚಲನಚಿತ್ರವಾಗಿ 3 ರಾಷ್ಟ್ರಪ್ರಶಸ್ತಿ ಗಳಿಸಿದೆ. ಕುಬ, ಬಡವರ ಮಗಳು ಹೆಣ್ಣಲ್ಲ ಅವರ ಕಾದಂಬರಿ. ಲಂಕೇಶ್ ಪತ್ರಿಕೆಗೆ ಜಿಲ್ಲಾ ವರದಿಗಾರರಾಗಿ 9 ವರ್ಷ ಸೇವೆ ಸಲ್ಲಿಸಿದ್ದಾರೆ. 'ಹೆಜ್ಜೆ ಮೂಡಿದ ಹಾದಿ, ಬೆಂಕಿಮಳೆ, ಎದೆಯ ಹಣತೆ ಕಥಾಸಂಕಲನ ಹೊರತಂದಿದ್ದು, ಅವರ ಸಾಹಿತ್ಯ ಸೇವೆಗೆ ಹಲವಾರು ಪ್ರಶಸ್ತಿಗಳು ಲಭಿಸಿವೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಪದ್ಮಭೂಷಣ ಬಿ.ಸರೋಜ ದೇವಿ ಸಾಹಿತ್ಯ ಪ್ರಶಸ್ತಿ, 'ಒಮ್ಮೆ ಹೆಣ್ಣಾಗು ಪ್ರಭುವೆ' ನಾಟಕ ರೂಪಾಂತರಕ್ಕೆ ಇಂಟರ್ ನ್ಯಾಷನಲ್ ವುಮನ್ ಫಾರ್ ರೇಡಿಯೋ ಅಂಡ್ ಟೆಲಿವಿಷನ್ ಬಹುಮಾನ, ಕರ್ನಾಟಕ ಕಲ್ಪವಲ್ಲಿ ಪ್ರಶಸ್ತಿ, ಕರ್ನಾಟಕ ಲೇಖಕಿಯರ ಸಂಘದ ಹೆಚ್.ವಿ. ಸಾವಿತ್ರಮ್ಮ ದತ್ತಿನಿಧಿ ಬಹುಮಾನ ಹಾಗೂ ಗುಡಿಬಂಡೆ ಪೂರ್ಣಿಮಾ ದತ್ತಿನಿಧಿ ಬಹುಮಾನ, ಶ್ರವಣಬೆಳಗೊಳ ಮಹಾಮಸ್ತಕಾಭಿಷೇಕ ಪ್ರಶಸ್ತಿ, ಸುಧಾಮೂರ್ತಿ ಪ್ರಶಸ್ತಿಗಳು ಅವರನ್ನರಸಿವೆ. ಅವರ ಅನೇಕ ಕಥೆಗಳು ಹಿಂದಿ, ಮಲಯಾಳಂ ಇತ್ಯಾದಿಗೆ ಅನುವಾದಗೊಂಡಿವೆ.



ಪ್ರಶಸ್ತಿ ಪಡೆದ ಸಂಭ್ರಮದಲ್ಲಿ ಬಾನು ಮುಷ್ತಾಕ್ ಮತ್ತು ದೀಪಾ ಭಸ್ತಿ

ಕನ್ನಡ ಮಹಿಳೆಯರಿಗೆ ಡಬಲ್ ಧಮಾಕ



ಬೆಂಗಳೂರು, ಮೇ 21– ಕನ್ನಡದ ಲೇಖಕಿ ಬಾನು ಮುಷ್ತಾಕ್ ಅವರಿಗೆ 2025ನೇ ಸಾಲಿನ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ಬಂದಿದ್ದು, ಇದು ಪ್ರತಿಯೊಬ್ಬ ಕನ್ನಡಿಗ ಮಹಿಳೆಯರಿಗೆ ಡಬಲ್ ಗೆಲುವು ಎಂದು ಇನ್ಫೋಸಿಸ್ ಫೌಂಡೇಶನ್ ಸಂಸ್ಥಾಪಕಿ, ಅಧ್ಯಕ್ಷೆ ಸುಧಾಮೂರ್ತಿ ಅವರು ಬುಧವಾರ ಹೇಳಿದ್ದಾರೆ.

ಲೇಖಕಿ, ಸಾಮಾಜಿಕ ಕಾರ್ಯಕರ್ತೆ ಮತ್ತು ವಕೀಲೆ ಬಾನು ಮುಷ್ತಾಕ್ ಅವರ ಸಣ್ಣ ಕಥಾ ಸಂಕಲನ 'ಹಾರ್ಟ್ ಲ್ಯಾಂಪ್' ಮಂಗಳವಾರ ರಾತ್ರಿ ಲಂಡನ್‌ನಲ್ಲಿ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಗೆದ್ದಿದ್ದು, ಇದು ಕನ್ನಡಕ್ಕೆ ಸಿಕ್ಕ ಮೊದಲ ಪ್ರಶಸ್ತಿಯಾಗಿದೆ.

ನನಗೆ ತುಂಬಾ ಸಂತೋಷವಾಗುತ್ತಿದೆ. ಒಬ್ಬ ಭಾರತೀಯಳಾಗಿ ಸಂತೋಷ ಪಡುತ್ತಿದ್ದೇನೆ. ಕನ್ನಡಿಗಳಾಗಿ ತುಂಬಾ ಸಂತೋಷವಾಗುತ್ತಿದೆ. ಲೇಖಕಿಯಾಗಿ ಮತ್ತು ಮಹಿಳೆಯಾಗಿ ಇನ್ನೂ ಹೆಚ್ಚು ಸಂತೋಷವಾಗುತ್ತಿದೆ. ಅವರು ಒಬ್ಬ ಮಹಾನ್ ಬರಹಗಾರ್ತಿ ಮತ್ತು ಇದು ಒಂದು ಉತ್ತಮ ಆರಂಭ. ಅವರಂತಹ ಅನೇಕ ಜನರು ವಿವಿಧ ಭಾಷೆಗಳಲ್ಲಿ ಬೂಕರ್ ಪ್ರಶಸ್ತಿಯನ್ನು ಪಡೆಯಲಿ ಎಂದು ಸುಧಾಮೂರ್ತಿ ಅವರು ಪಿಟಿಐಗೆ ತಿಳಿಸಿದ್ದಾರೆ.

ಲಗೇಜ್ ಕಳೆದುಕೊಂಡು ಪರದಾಟ, ಪ್ರಯಾಸ ನಿವಾರಿಸಿದ 'ಪ್ರಶಸ್ತಿ'!



ಲಗೇಜ್ ಕಳೆದುಕೊಂಡ ಬಗ್ಗೆ ಬಾನು ಮುಷ್ತಾಕ್ ಅವರು ಫೇಸ್‌ಬುಕ್‌ನಲ್ಲಿ ಹಾಕಿದ್ದ ಪೋಸ್ಟ್ ಚಿತ್ರ

ಮೈಸೂರು, ಮೇ 21–ಪ್ರತಿಷ್ಠಿತ ಬೂಕರ್ ಪ್ರಶಸ್ತಿ ಸ್ವೀಕರಿಸಿದ ಬಾನು ಮುಷ್ತಾಕ್ ಅವರು ಭಾರತದಿಂದ ಲಂಡನ್‌ಗೆ ಪ್ರಯಾಣ ಬೆಳೆಸಿದ ವೇಳೆ ತಮ್ಮ ಲಗೇಜ್ ಕಳೆದುಕೊಂಡಿದ್ದರು.

ಬೂಕರ್ ಪ್ರಶಸ್ತಿಗೆ ಶಾರ್ಟ್‌ಲಿಸ್ಟ್ ಆಗಿದ್ದ ಎಲ್ಲಾ ಲೇಖಕರನ್ನು ಲಂಡನ್‌ಗೆ ಆಹ್ವಾನಿಸಲಾಗಿತ್ತು. ಬಾನು ಮುಷ್ತಾಕ್ ಅವರು ತಮ್ಮ ಮಗಳು ಮತ್ತು ಮೊಮ್ಮಗಳೊಂದಿಗೆ ಮೇ 16ರಂದು ಕತಾರ್, ಅಲ್ಲಿಂದ ಲಂಡನ್‌ಗೆ ವಿಮಾನದಲ್ಲಿ ಪ್ರಯಾಣ ಬೆಳೆಸಿದ್ದರು. ಲಂಡನ್ ವಿಮಾನ ನಿಲ್ದಾಣದಲ್ಲಿ ಅವರಿಗೆ ಶಾಕ್ ಕಾದಿತ್ತು. ವಿಮಾನದಲ್ಲಿದ್ದ ಅವರ ಲಗೇಜ್ ನಾಪತ್ತೆಯಾಗಿತ್ತು. ದಿಕ್ಕು ತೋಚದಂತಾದ ಅವರು, ಅನ್ಯಮಾರ್ಗವಿಲ್ಲದೇ ವಿಮಾನ ನಿಲ್ದಾಣಾಧಿಕಾರಿಗಳಿಗೆ ದೂರು ಸಲ್ಲಿಸಿ ಲಂಡನ್‌ನ ಹೋಟೆಲ್‌ಗೆ ತೆರಳಿದ್ದರು.

ಈ ಕುರಿತು 3 ದಿನದ ಹಿಂದೆ ಬಾನು ಮುಷ್ತಾಕ್, ತಮ್ಮ ಮಗಳು ಮತ್ತು ಮೊಮ್ಮಗಳೊಂದಿಗೆ ಜೀನ್ಸ್ ಪ್ಯಾಂಟ್ ಮತ್ತು ಷರ್ಟ್ ಧರಿಸಿದ್ದ ಫೋಟೋವನ್ನು ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಮಾಡಿ, 'ಬೂಕರ್ ಅಂತಿಮ ಸುತ್ತಿನ ಸಂದರ್ಭಕ್ಕಾಗಿ ಲಂಡನ್‌ನಲ್ಲಿ ಮಗಳು ಸಮೀನಾ ಮಿರ್ಜಾ ಮತ್ತು ಮೊಮ್ಮಗಳು ರಿದಾ ಮಿರ್ಜಾಳೊಡನೆ ಲಂಡನ್‌ಗೆ ಹೋದ ಕೂಡಲೇ ತನ್ನ ಅವತಾರ ಬದಲಾಯಿತು ಅಂತಾ ಅನ್ಕೋಬೇಡಿ. ರೇಷ್ಮೆ ಸೀರೆ, ತುಂಬಾ ಕಲಾತ್ಮಕವಾದ ಬಟ್ಟೆಗಳು ಮತ್ತು ಮೆಡಿಸಿನ್ ಸಮೇತ ಕತಾರ್ ಏರ್‌ವೇಸ್ ಮತ್ತು ಇಂಡಿಗೋ ನನ್ನ ಇಡೀ ಸೂಟ್‌ಕೇಸ್ ಅನ್ನೇ ಕಳೆದು ಹಾಕಿದ್ದಾರೆ. ಇನ್ನೂ ನನ್ನ ಕೈಗೆ ಅದು ಸಿಕ್ಕಿಲ್ಲ, ಸಿಕ್ಕುವುದೂ ಅನುಮಾನ. ನನ್ನ ಪರದಾಟದ ಬಗ್ಗೆ ಮುಂದೆ ಬರೆಯುತ್ತೇನೆ' ಎಂದು ಪೋಸ್ಟ್ ಮಾಡಿದ್ದರು. ಅವರ ಈ ಪೋಸ್ಟ್‌ಗೆ ಒಬ್ಬರು ಅಭಿಮಾನಿ 'ಬ್ಯಾಗ್ ಮಿಸ್ ಆದರೂ ಬೂಕರ್ ಮಿಸ್ ಆಗದಿರಲಿ' ಎಂದು ಶುಭ ಹಾರೈಸಿದ್ದರು.

ಈ ಕುರಿತು ಮಾಧ್ಯಮವೊಂದರ ಜೊತೆ ಮಾತನಾಡಿದ್ದ ಅವರು, 'ನನಗೆ ಓಪನ್ ಹಾರ್ಟ್ ಸರ್ಜರಿ ಆಗಿದೆ. ರಕ್ತದೊತ್ತಡ ಮತ್ತು ಮಧುಮೇಹವೂ ಇದೆ. ಮಿಸ್ ಆದ ನನ್ನ ಸೂಟ್‌ಕೇಸ್‌ನಲ್ಲಿ ಅಗತ್ಯ ಮಾತ್ರೆಗಳು ಇದ್ದವು. ನಿತ್ಯವೂ ನಾನು ಆ ಮಾತ್ರೆಗಳನ್ನು ಸೇವಿಸಲೇಬೇಕು. ಲಗೇಜ್ ಮಿಸ್ ಆಗಿರುವುದರಿಂದ ಏನು ಮಾಡಬೇಕೆಂದು ತೋಚುತ್ತಿಲ್ಲ. ಲಂಡನ್‌ನಲ್ಲಿ ಆ ಮಾತ್ರೆಗಳು ಸಿಗುತ್ತಿಲ್ಲ. ಸದ್ಯ ಬೆಂಗಳೂರಿನಿಂದ ಮಗಳ ಸ್ನೇಹಿತೆಯೊಬ್ಬರು ಲಂಡನ್‌ಗೆ ಬರುತ್ತಿದ್ದು, ಅವರು ಕೆಲ ಮಾತ್ರೆಗಳನ್ನು ತರಲಿದ್ದಾರೆ. ಇನ್ನು ಕೆಲವು ಮಾತ್ರೆಗಳನ್ನು ಮತ್ತೊಬ್ಬ ಮಗಳು ತಲುಪಿಸಲಿದ್ದಾಳೆ. ಸೂಟ್‌ಕೇಸ್ ಕಳೆದು ಹೋಗಿದ್ದರಿಂದ ಅನಿವಾರ್ಯವಾಗಿ ಜೀನ್ಸ್ ಹಾಕುವಂತಾಯಿತು. ಇದೆಲ್ಲಾ ಜೀವನ ಅನುಭವದ ಭಾಗ' ಎಂದು ಹೇಳಿದ್ದರು. ನಂತರ ಅವರ ಸೂಟ್‌ಕೇಸ್ ದೊರಕಿದ ಬಗ್ಗೆಯೂ ಕೆಲವರು ಮಾಹಿತಿ ಹಂಚಿಕೊಂಡಿದ್ದಾರೆ. ಆದರೆ ಬಾನು ಮುಷ್ತಾಕ್ ಅವರು ಅದನ್ನು ಖಚಿತಪಡಿಸಿಲ್ಲ.

ಸಿಬಿಎಸ್‌ಇ 10ನೇ ತರಗತಿಯಲ್ಲಿ ಬಿಎಂಶ್ರೀ ಶಿಕ್ಷಣ ಸಂಸ್ಥೆಗೆ ಶೇ.100 ಫಲಿತಾಂಶ




ಧನ್ಯಾ | ಹರ್ಷಿಣಿ | ಸಿಂಚುರುತಿ
ರಚಿತ | ಸಮರ್ಥ್ | ಪ್ರಥಮ್

ಮೈಸೂರು, ಮೇ 21–ಮೈಸೂರಿನ ವಿದ್ಯಾವರ್ಧಕ ಸಂಘಕ್ಕೆ ಸೇರಿದ ಕುವೆಂಪುನಗರದಲ್ಲಿರುವ ಬಿಎಂಶ್ರೀ ಶಿಕ್ಷಣ ಸಂಸ್ಥೆಯು ಸಿಬಿಎಸ್‌ಇ 10ನೇ ತರಗತಿಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದಿದೆ. ಧನ್ಯಾ ಕೆ.ಕಶ್ಯಪ್ ಅವರು 500ಕ್ಕೆ 483 ಅಂಕ ಪಡೆಯುವ ಮೂಲಕ ಸಂಸ್ಥೆಗೆ ಟಾಪರ್ ಆಗಿದ್ದಾರೆ. ಎಸ್.ಹರ್ಷಿಣಿ 479, ಎಸ್.ಎ. ಸಿಂಚುರುತಿ 478, ಬಿ.ಎಂ.ರಚಿತ 478, ಸಮರ್ಥ್ ಟಿ.ವಿನಯ್ 477, ಪ್ರಥಮ್ ವಿ.ಭಟ್ 477 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಪರೀಕ್ಷೆಗೆ ಹಾಜರಾದ 65 ವಿದ್ಯಾರ್ಥಿಗಳಲ್ಲಿ 31 ಮಂದಿ ಉನ್ನತ ಶ್ರೇಣಿ, 33 ಮಂದಿ ಪ್ರಥಮ ದರ್ಜೆ, ಓರ್ವ ವಿದ್ಯಾರ್ಥಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿರುವುದಾಗಿ ಆಡಳಿತ ಮಂಡಳಿ ಪ್ರಕಟಣೆ ತಿಳಿಸಿದೆ.







ಮಿಮ್ಸ್ ಆಸ್ಪತ್ರೆಯಲ್ಲಿ ಆರೋಗ್ಯ ಧಾಮ ಕಟ್ಟಡ ಉದ್ಘಾಟನೆ

ಮಂಡ್ಯ, ಮೇ 21– ಮಂಡ್ಯ ನಗರದ ಮಿಮ್ಸ್ ಆಸ್ಪತ್ರೆಯ ಆವರಣದಲ್ಲಿ 60 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಆರೋಗ್ಯ ಧಾಮ ಹಾಗೂ ಶೌಚಾಲಯದ ನೂತನ ಕಟ್ಟಡದ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್ ಚೆಲುವರಾಯಸ್ವಾಮಿ ನೆರವೇರಿಸಿದರು.

ನಂತರ ಮಾತನಾಡಿದ ಅವರು ಅನೇಕ ದಿನಗಳಿಂದ ಮಿಮ್ಸ್ ಆಸ್ಪತ್ರೆಗೆ ದಾಖಲಾಗುವ ರೋಗಿಗಳ ಆರೈಕೆ ಮಾಡಲು ಬರುವ ಸಂಬಂಧಿಕರಿಗೆ ತಂಗಲು ವ್ಯವಸ್ಥೆ ಇಲ್ಲದೆ ಸಮಸ್ಯೆ ಉಂಟಾಗುತ್ತಿತ್ತು ಇವೆಲ್ಲವನ್ನೂ ನೀಗಿಸಲು ಹಾಗೂ ಜಿಲ್ಲೆಯ ಸಾರ್ವಜನಿಕರ ಅನುಕೂಲಕ್ಕಾಗಿ 60 ಲಕ್ಷ ಸಿಆರ್‌ಎಸ್ ಅನುದಾನದಲ್ಲಿ ಶೌಚಾಲಯ ಹಾಗೂ ಆರೋಗ್ಯ ಧಾಮವನ್ನು ನಿರ್ಮಿಸಲಾಗಿದೆ ಎಂದು ತಿಳಿಸಿದರು.


ಆರೋಗ್ಯ ಧಾಮ ಕಟ್ಟಡವನ್ನು ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು.

ಮಿಮ್ಸ್ ಆವರಣದ ಹೆರಿಗೆ ವಾರ್ಡ್ ಮುಂಭಾದಲ್ಲಿ 34x56 ಚದರ ಅಡಿಯ ವಿಶಾಲವಾದ ವಿಶ್ರಾಂತಿ ಕೊಠಡಿ ನಿರ್ಮಿಸಲಾಗಿದೆ, ಕೊಠಡಿಯಲ್ಲಿ ವಿದ್ಯುತ್ ದೀಪ, ಫ್ಯಾನ್, ಮೊಬೈಲ್ ಚಾರ್ಜಿಂಗ್ ಪಾಯಿಂಟ್ ಸೇರಿದಂತೆ ಇನ್ನಿತರ ಮೂಲಸೌಕರ್ಯಗಳನ್ನು ಕಲ್ಪಿಸಲಾಗಿದೆ, ಆರೋಗ್ಯ ಧಾಮದ ಪಕ್ಕದಲ್ಲೇ ಹೈಟೆಕ್ ಶೌಚಾಲಯ ನಿರ್ಮಾಣ ಮಾಡಲಾಗಿದೆ ಎಂದರು.

ಆರೋಗ್ಯ ಧಾಮ ಕೊಠಡಿಯಲ್ಲಿ 150 ಜನ ಉಳಿದುಕೊಳ್ಳುವ ಸುಸಜ್ಜಿತ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು ಕಾಟ್‌ಗಳ ವ್ಯವಸ್ಥೆ ಮಾಡಲಾಗುವುದು, ಮಿಮ್ಸ್‌ನಲ್ಲಿ ಅನೇಕ ಸಮಸ್ಯೆಗಳಿದ್ದು ಮುಂದಿನ ವರ್ಷದೊಳಗೆ ಸಾಧ್ಯವಾದ ಮಟ್ಟಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ರವಿಕುಮಾರ್ ಹಾಗೂ ನಾನು ಶ್ರಮಿಸುತ್ತಿದ್ದೇವೆ ಎಂದರು.

ಇದೇ ಸಂದರ್ಭದಲ್ಲಿ ಮಂಡ್ಯ ಕ್ಷೇತ್ರದ ಶಾಸಕ ಪಿ.ರವಿಕುಮಾರ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್. ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಮಿಮ್ಸ್ ನಿರ್ದೇಶಕ ಡಾ.ನರಸಿಂಹ ಸ್ವಾಮಿ, ಮುಡಾ ಅಧ್ಯಕ್ಷ ನಯೀಮ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಚಿನಕುರಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ

ಧನಲಕ್ಷ್ಮಿ ಅಧ್ಯಕ್ಷೆ, ನರಸಿಂಹಶೆಟ್ಟಿ ಉಪಾಧ್ಯಕ್ಷ


ಚಿನಕುರಳಿ ಗ್ರಾಪಂ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಗಣ್ಯರು ಅಭಿನಂದಿಸಿದರು.

ಚಿನಕುರಳಿ, ಮೇ 21– ಇಲ್ಲಿನ ಚಿನಕುರಳಿ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಧನಲಕ್ಷ್ಮಿ ವಸಂತಕುಮಾರ್, ಉಪಾಧ್ಯಕ್ಷರಾಗಿ ನರಸಿಂಹಶೆಟ್ಟಿ ಬುಧವಾರ ಅವಿರೋಧವಾಗಿ ಆಯ್ಕೆಯಾದರು.

ಗ್ರಾಪಂನ ಹಿಂದಿನ ಅಧ್ಯಕ್ಷೆ ಗಾಯಿತ್ರಿ ಕುಮಾರ್ ಹಾಗೂ ಉಪಾಧ್ಯಕ್ಷ ಬಿ.ಶ್ರೀನಿವಾಸ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಬುಧವಾರ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಧನಲಕ್ಷ್ಮಿ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ನರಸಿಂಹಶೆಟ್ಟಿ ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪುಟ್ಟಮಾಯಿಗೌಡ ಘೋಷಿಸಿದರು.

ಮನ್‌ಮುಲ್ ನಿರ್ದೇಶಕ ಹಾಗೂ ಗ್ರಾಪಂ ಸದಸ್ಯ ಸಿ.ಶಿವಕುಮಾರ್ ಮಾತನಾಡಿ, ನಮ್ಮ ನಾಯಕ ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು ಅವರ ಸಲಹೆ, ಸೂಚನೆಯಂತೆ ಚಿನಕುರಳಿ ಗ್ರಾಪಂನ ನೂತನ ಅಧ್ಯಕ್ಷೆಯಾಗಿ ಧನಲಕ್ಷ್ಮಿ ವಸಂತ್ ಕುಮಾರ್ ಹಾಗೂ ಉಪಾಧ್ಯಕ್ಷರಾಗಿ ನರಸಿಂಹಶೆಟ್ಟಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಎಲ್ಲರು ಜತೆಗೂಡಿ ಗ್ರಾಪಂ ಅಭಿವೃದ್ದಿಗೆ ಒಟ್ಟಾಗಿ ಶ್ರಮಿಸಬೇಕು ಎಂದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಸಿ.ಎಸ್.ಗೋಪಾಲಗೌಡ, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ಶಿಂಡಭೋಗನಹಳ್ಳಿ ನಾಗಣ್ಣ, ಎ.ಎಸ್.ರಮೇಶ್, ಗ್ರಾಪಂ ಮಾಜಿ ಉಪಾಧ್ಯಕ್ಷರಾದ ಸ್ವಾಮೀಗೌಡ, ಎಂ.ಎಲ್.ರಮೇಶ್, ಗ್ರಾಪಂ ಸದಸ್ಯರಾದ ಮಹಮದ್ ಇಮ್ತಿಯಾಜ್ ಪಾಷ, ಕೆಎಸ್.ಪುಟ್ಟಸ್ವಾಮಿ (ಪಾಪಣ್ಣ), ಸಿ.ಎ.ಲೋಕೇಶ್, ಸಿ.ಎಸ್.ಪರಮೇಶ್, ಕೃಷ್ಣೇಗೌಡ, ಮಂಜುಳ ಸಿ.ಡಿ.ಮಹದೇವು, ಗಾಯಿತ್ರಿ ಕುಮಾರ್, ಬಿ.ಶ್ರೀನಿವಾಸ್, ಡಿ.ಎ.ಇಂದ್ರಾಣಿ, ಕಮಲಮ್ಮ ಸತೀಶ್, ಸುಶೀಲ, ದಿವ್ಯ, ಎ.ಜೆ. ನಾಗೇಗೌಡ, ದೇವರಾಜು, ಶ್ವೇತಾ, ಶಿವಮ್ಮ, ಸುಮ ಜಿ.ಆರ್, ವಿಎಸ್‌ಎಸ್‌ಎನ್‌ಬಿ ಮಾಜಿ ಅಧ್ಯಕ್ಷ ಮಂಜುನಾಥ್, ಡೇರಿ ಮಾಜಿ ಅಧ್ಯಕ್ಷ ರಮೇಶ್, ಗ್ರಾಪಂ ಮಾಜಿ ಸದಸ್ಯ ಸಿ.ಡಿ.ಮಹದೇವು, ಪಿಡಿಓ ಆರತಿಕುಮಾರಿ ಸೇರಿದಂತೆ ಹಲವರು ಹಾಜರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ, ಮೇ 21– ತುಂಬಕೆರೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾರ್ಯ ಹಮ್ಮಿಕೊಂಡಿರುವುದರಿಂದ ಮೇ 23 ರಂದು ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ಹೊಡಾಘಟ್ಟ, ಕೀಲಾರ, ಈಚಗೆರೆ, ಹಂಬರಹಳ್ಳಿ, ಆಲಕೆರೆ, ನಲ್ಲಹಳ್ಳಿ, ಕಚ್ಚಿಗೆರೆ, ಹೊನಗಾನಹಳ್ಳಿಮಠ, ತುಂಬಕೆರೆ, ಚಾಮಲಾಪುರ, ಉಮ್ಮಡಹಳ್ಳಿ, ಆಲಕೆರೆ, ಚಿಕ್ಕಬಾಣಸವಾಡಿ, ದೊಡ್ಡಬಾಣಸವಾಡಿ, ಡಣಾಯಕನಪುರ, ಬಸವನಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ನೇರ ಸಂದರ್ಶನ

ಮಂಡ್ಯ: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಮೆ.ಬಿ.ಎಸ್.ಎಸ್ ಮೈಕ್ರೋ ಫೈನನ್ಸ್ ಲಿ., ಮತ್ತು ಮೆ. ಕ್ರೆಡಿಟ್ ಗ್ರಾಮೀಣ್ ಆಕ್ಸಿಸ್ ಬ್ಯಾಂಕ್ ಸಂಸ್ಥೆಯವರು ತಮ್ಮ ಸಂಸ್ಥೆಯಲ್ಲಿ ಖಾಲಿಯಿರುವ ಹುದ್ದೆಗಳಿಗಾಗಿ ನೇರ ಸಂದರ್ಶನ ನಡೆಸಲಿದ್ದಾರೆ.

18 ರಿಂದ 30 ವರ್ಷವುಳ್ಳ ಆಸಕ್ತರು ಮೇ 23 ರಂದು ಬೆಳಗ್ಗೆ 10ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಹಾಜರಾಗಬಹುದು. ಮಾಹಿತಿಗೆ 08232–295124, 9164642684 ಸಂಪರ್ಕಿಸಿ.

ಕಲ್ಕುಣಿಕೆ ಮನೆಯೊಂದರಲ್ಲಿ ಸಿಲಿಂಡರ್ ಸ್ಫೋಟ

ಸುಟ್ಟ ಗಾಯಗಳಾಗಿದ್ದ ಇಬ್ಬರು ಮಹಿಳೆಯರು ಸಾವು

ತೀವ್ರ ಗಾಯಗಳಾಗಿರುವ ಮೂವರಿಗೆ ಕೆಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ

ಕ್ರೈಂ ಬಾಕ್ಸ್

ಮೈಸೂರು, ಮೇ 21(ಆರ್‌ಕೆ)– ಹುಣಸೂರು ತಾಲೂಕು ಕಲ್ಕುಣಿಕೆ ಗ್ರಾಮದ ಮನೆಯೊಂದರಲ್ಲಿ ಸಿಲಿಂಡರ್ ಸ್ಫೋಟಗೊಂಡು ಸುಟ್ಟ ಗಾಯಗಳಾಗಿದ್ದ ಐವರ ಪೈಕಿ ಮಹಿಳೆಯರಿಬ್ಬರು ಮೈಸೂರಿನ ಕೆಆರ್ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ.

ಕಲ್ಕುಣಿಕೆ ಗ್ರಾಮದ ಜ್ಯೋತಿ ಹಾಗೂ ನಾಗಮ್ಮ ಸಾವನ್ನಪ್ಪಿದವರಾಗಿದ್ದು, ತೀವ್ರ ಸುಟ್ಟ ಗಾಯಗಳಾಗಿರುವ ನಿಂಗರಾಜು ಮತ್ತು ರಾಜಮ್ಮ ಕೆಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೆ, ಶೀಲಾ ಅವರನ್ನು ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

ಮೇ 14ರಂದು ಬೆಳಗ್ಗೆ 8.30 ಗಂಟೆ ವೇಳೆ ನಿಂಗರಾಜು ಮತ್ತು ಜ್ಯೋತಿ ಅವರು ಖಾಲಿ ಸಿಲಿಂಡರ್ ತೆಗೆದು ಭರ್ತಿ ಸಿಲಿಂಡರ್ ಅಳವಡಿಸಿಕೊಳ್ಳುತ್ತಿದ್ದಾಗ ಸೋರಿಕೆಯಾಗಿದ್ದು, ಕೊನೆಗೆ ಬೆಂಕಿ ಹೊತ್ತಿಕೊಂಡು ಸಿಲಿಂಡರ್ ಸ್ಫೋಟಗೊಂಡಿತ್ತು. ಘಟನೆಯಲ್ಲಿ ಐವರಿಗೆ ಸುಟ್ಟ ಗಾಯಗಳಾಗಿದ್ದವು.

ಜ್ಯೋತಿಗೆ ಶೇ.80ರಿಂದ 85, ನಿಂಗರಾಜುಗೆ ಶೇ.50ರಿಂದ 55, ನಾಗಮ್ಮಗೆ ಶೇ.65ರಿಂದ 70, ರಾಜಮ್ಮಗೆ ಶೇ.15ರಿಂದ 20 ಹಾಗೂ ಶೀಲಾಗೆ ಶೇ.60ರಿಂದ 65ರಷ್ಟು ಸುಟ್ಟ ಗಾಯಗಳಾಗಿದ್ದವು. ಚಿಕಿತ್ಸೆ ಫಲಕಾರಿಯಾಗದೇ ಜ್ಯೋತಿ ಮತ್ತು ನಾಗಮ್ಮ ಮೇ 19ರಂದು ಸಾವನ್ನಪ್ಪಿದ್ದಾರೆ ಎಂದು ಕೆಆರ್ ಆಸ್ಪತ್ರೆ ಸುಟ್ಟ ಗಾಯಗಳ ವಿಭಾಗದ ಮುಖ್ಯಸ್ಥರಾದ ಪ್ಲಾಸ್ಟಿಕ್ ಸರ್ಜನ್ ಡಾ. ಮೋಹನ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಉಳಿದ ಮೂವರ ಸ್ಥಿತಿ ಗಂಭೀರವಾಗಿದ್ದು, ಚಿಕಿತ್ಸೆ ಮುಂದುವರಿದಿದೆ. ಪ್ರಕರಣ ದಾಖಲಿಸಿಕೊಂಡಿರುವ ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ವೇಲ್‌ನಿಂದ ಕುತ್ತಿಗೆ ಬಿಗಿದು ಯುವತಿ ಹತ್ಯೆ

ಮೈಸೂರು, ಮೇ 21(ಆರ್‌ಕೆ)– ವೇಲ್‌ನಿಂದ ಕುತ್ತಿಗೆ ಬಿಗಿದು ಯುವತಿ ಹತ್ಯೆಗೈದಿರುವ ಘಟನೆ ಮೈಸೂರು ಹೊರವಲಯದಲ್ಲಿ ಸಂಭವಿಸಿದೆ.

ಮೈಸೂರಿನ ಗಿರಿಯಾಬೋವಿ ಪಾಳ್ಯ ನಿವಾಸಿ ಲಕ್ಷ್ಮಣ್ ಅವರ ಪುತ್ರಿ ಲತಾ (25) ಕೊಲೆಯಾದ ಯುವತಿ. ಬನ್ನೂರು ರಸ್ತೆಯ ವಿದ್ಯಾ ವಿಕಾಸ ಇಂಜಿನಿಯರಿಂಗ್ ಕಾಲೇಜು ಸಮೀಪ ವಸಂತ ನಗರಕ್ಕೆ ಹೋಗುವ ರಸ್ತೆಯ ಖಾಸಗಿ ವಸತಿ ಬಡಾವಣೆಯಲ್ಲಿ ಯುವತಿ ಮೃತದೇಹ ಇಂದು ಬೆಳಗ್ಗೆ ಪತ್ತೆಯಾಗಿದೆ.

ಆಕೆಯು ವೇಲ್‌ನಿಂದ ಕುತ್ತಿಗೆ ಬಿಗಿದು ಹತ್ಯೆಗೈಯ್ಯಲಾಗಿದ್ದು, ಮೈಮೇಲೆ ಯಾವುದೇ ಗಾಯಗಳು ಕಂಡುಬಂದಿಲ್ಲ. ಕಾಲಿನಲ್ಲಿ ಚಪ್ಪಲಿ ಧರಿಸಿದಂತೆಯೇ ಇರುವುದರಿಂದ ಲತಾಳನ್ನು ಬೇರೆಡೆ ಹತ್ಯೆಗೈದು ಮೃತ ದೇಹವನ್ನು ಈ ಸ್ಥಳದಲ್ಲಿ ತಂದು ಹಾಕಿರ ಬಹುದೆಂದು ಪೊಲೀಸರು ಶಂಕಿಸಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಆಲನಹಳ್ಳಿ ಠಾಣೆ ಇನ್‌ಸ್ಪೆಕ್ಟರ್ ಸ್ವರ್ಣ ಹಾಗೂ ಸಿಬ್ಬಂದಿ ಮಹಜರು ನಡೆಸಿದ ಬಳಿಕ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಂತರ ದೇಹವನ್ನು ಬುಧವಾರ ಮಧ್ಯಾಹ್ನ ವಾರಸುದಾರರಿಗೆ ಒಪ್ಪಿಸಲಾಯಿತು.

ಹಲವು ವರ್ಷಗಳಿಂದ ಸರ್ಕಾರಿ ದತ್ತು ಪ್ರಕ್ರಿಯೆ ನಿರ್ವಹಣಾ ಸಂಸ್ಥೆಯಲ್ಲಿ ಹಂಗಾಮಿ ಕೋ–ಆರ್ಡಿನೇಟರ್ ಆಗಿ ಕೆಲಸ ಮಾಡುತ್ತಿದ್ದ ಲತಾ, ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು ಎಂದು ಹೇಳಲಾಗುತ್ತಿದ್ದು, ಕೊಲೆಗೆ ನಿಖರ ಕಾರಣ ತಿಳಿದುಬಂದಿಲ್ಲ.

ಪ್ರಕರಣ ದಾಖಲಿಸಿಕೊಂಡಿರುವ ಆಲನಹಳ್ಳಿ ಠಾಣೆ ಪೊಲೀಸರು, ಕೊಲೆ ಆರೋಪಿಗಳ ಪತ್ತೆಗೆ ತನಿಖಾ ತಂಡ ರಚಿಸಿದ್ದಾರೆ. ಘಟನಾ ಸ್ಥಳಕ್ಕೆ ದೇವರಾಜ ಉಪವಿಭಾಗದ ಎಸಿಪಿ ರಾಜೇಂದ್ರ ಭೇಟಿ ನೀಡಿ ಪರಿಶೀಲಿಸಿದರು.

ಜೈವಿಕ ಅನಿಲ ಸ್ಥಾವರ ನಿರ್ಮಾಣಕ್ಕೆ ರಾಜಕೀಯ ವಿರೋಧವಿದೆಯೇ ಹೊರತು ಸ್ಥಳೀಯರ ವಿರೋಧವಿಲ್ಲ

ಮಾಜಿ ಕಾರ್ಪೋರೇಟರ್ ಪ್ರೇಮಾ ಶಂಕರೇಗೌಡ ಪ್ರತಿಕ್ರಿಯೆ



ಮೈಸೂರು, ಮೇ21(ಬಿಎಲ್‌ಯು)– ಮೈಸೂರಿನ ಮಂಚೇಗೌಡನ ಕೊಪ್ಪಲ್‌ನ ಸ್ಮಶಾನದಲ್ಲಿ ಶವ ಸಂಸ್ಕಾರಕ್ಕಾಗಿ ಜೈವಿಕ ಅನಿಲ (ಬಯೋ ಗ್ಯಾಸ್) ಸ್ಥಾವರ ನಿರ್ಮಿಸಲು ರಾಜಕೀಯ ವಿರೋಧವಿದೆಯೇ ಹೊರತು ಸ್ಥಳೀಯರ ವಿರೋಧವಿಲ್ಲ ಎಂದು ಮಾಜಿ ಕಾರ್ಪೋರೇಟರ್ ಪ್ರೇಮಾ ಶಂಕರೇಗೌಡ ಸ್ಪಷ್ಟಪಡಿಸಿದ್ದಾರೆ.

ಬುಧವಾರದ 'ಮೈಸೂರು ಮಿತ್ರ' ಸಂಚಿಕೆಯಲ್ಲಿ 'ಜೈವಿಕ ಅನಿಲ ಸ್ಥಾವರ ನಿರ್ಮಾಣಕ್ಕೆ ಸ್ಥಳೀಯರ ವಿರೋಧ' ವರದಿಗೆ ಪ್ರತಿಕ್ರಿಯೆ ನೀಡಿರುವ ಅವರು, ಬಯೋ ಗ್ಯಾಸ್ ಸ್ಥಾವರ ನಿರ್ಮಾಣಕ್ಕೆ ಸ್ಥಳೀಯರು ವಿರೋಧ ಮಾಡಿಲ್ಲ. ಆದರೆ ರಾಜಕೀಯ ಕಾರಣಕ್ಕೆ ಕೆಲವರು ವಿರೋಧ ಮಾಡುತ್ತಿದ್ದಾರೆ ಎಂದು ತಿಳಿಸಿದರು.


ಜೈವಿಕ ಅನಿಲ ಸ್ಥಾವರ ಬಹುಪಯೋಗಿಯಾಗಿದೆ. ಕಸ ಬಳಸಿ ಜೈವಿಕ ಅನಿಲ ಉತ್ಪಾದಿಸಬಹುದು, ಜೈವಿಕ ಅನಿಲದಿಂದ ಶವಸಂಸ್ಕಾರದ ಜೊತೆಗೆ ಇಂಧನ ಉತ್ಪಾದಿಸಬಹುದು. ಈ ಇಂಧನದಿಂದ ಸುತ್ತಮುತ್ತಲ ರಸ್ತೆಗಳ ಬೀದಿದೀಪ ಬೆಳಗಬಹುದು, ಉದ್ಯಾನವನಗಳಿಗೆ ಗೊಬ್ಬರ ಬಳಕೆ ಮಾಡಬಹುದು. ಇಷ್ಟೆಲ್ಲಾ ಅನುಕೂಲ ಇದ್ದರೂ ಕೆಲವರು ರಾಜಕೀಯ ಕಾರಣಕ್ಕೆ ಇಲ್ಲಿ ಜೈವಿಕ ಅನಿಲ ಸ್ಥಾವರ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂದು ಆರೋಪಿಸಿದರು.

ಕೆಲವರ ಆಗ್ರಹಕ್ಕೆ ಮಣಿದು ಶಾಸಕ ಹರೀಶ್‌ಗೌಡ ಕೂಡ ಸಮ್ಮತಿ ಸೂಚಿಸಿ ಜೈವಿಕ ಅನಿಲ ಸ್ಥಾವರವನ್ನು ಬೇರೆಡೆ ಸ್ಥಳಾಂತರಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ. ಜೈವಿಕ ಅನಿಲ ಸ್ಥಾವರ ಬಳಕೆ ಪರಿಸರಸ್ನೇಹಿಯಾಗಿದ್ದು, ಇದರಿಂದ ಶವ ಸಂಸ್ಕಾರ ಮಾಡಿದರೆ ಹೊಗೆ, ವಾಸನೆ ಬರುವುದಿಲ್ಲ. ತುಂಬಾ ಎತ್ತರದಲ್ಲಿ ಚಿಮಣಿ ಅಳವಡಿಸುವುದರಿಂದ ಹೊಗೆ ಕೆಳಭಾಗಕ್ಕೆ ಆವರಿಸುವುದಿಲ್ಲ. ಈ ವಿಚಾರವನ್ನು ಸ್ಥಳೀಯ ಶಾಸಕ ಕೆ.ಹರೀಶ್ ಗೌಡ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ ಎಂದು ಪ್ರೇಮಾ ತಿಳಿಸಿದರು.

ಡಿಜಿಟಲ್ ಇಂಪ್ಲಾಂಟೋಲಜಿ ಪ್ರೋಗ್ರಾಮ್

ಮೈಸೂರು: ಮೈಸೂರಿನ ಫಾರೂಖಿಯಾ ಡೆಂಟಲ್ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ ಯುಜಿ ವಿದ್ಯಾರ್ಥಿಗಳಿಗೆ ಡಿಜಿಟಲ್ ಇಂಪ್ಲಾಂಟೋಲಜಿ ಪ್ರೋಗ್ರಾಮ್ ಆಯೋಜಿಸಲಾಗಿದೆ. ಮುಂದುವರೆದ ತಂತ್ರಜ್ಞಾನದೊಂದಿಗೆ ಉಚಿತವಾಗಿ ಮೇ 23ರಿಂದ 25ರವರೆಗೆ ರೋಗಿಗಳಿಗೆ 25 ಇಂಪ್ಲಾಂಟ್ ಅಳವಡಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಕಾಂಗ್ರೆಸ್‌ನಿಂದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಸ್ಮರಣೆ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಾಜಿ ಪ್ರಧಾನಿ ದಿವಂಗತ ರಾಜೀವ್ ಗಾಂಧಿಯವರ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಮೈಸೂರು, ಮೇ 21(ಎಂಕೆ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಐಎನ್‌ಟಿಯುಸಿ ವತಿಯಿಂದ ಮಾಜಿ ಪ್ರಧಾನಿ ದಿವಂಗತ ರಾಜೀವ್ ಗಾಂಧಿಯವರ ಪುಣ್ಯಸ್ಮರಣೆ ಕಾರ್ಯಕ್ರಮ ಬುಧವಾರ ನಡೆಯಿತು.

ರಾಜೀವ್ ಗಾಂಧಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ದೇಶದ ರಕ್ಷಣೆಗಾಗಿ ಎಂತಹ ತ್ಯಾಗಕ್ಕೂ ಸಿದ್ಧರಾಗುವ ಧೈರ್ಯ–ಸ್ಥೈರ್ಯ ನೆಹರು ಮತ್ತು ಇಂದಿರಾ ಗಾಂಧಿ ಅವರ ಕುಟುಂಬಕ್ಕಿದೆ. ಮಾಜಿ ಪ್ರಧಾನಿ ದಿವಂಗತ ರಾಜೀವ್ ಗಾಂಧಿ ಅವರು, ಆಕಸ್ಮಿಕವಾಗಿ ರಾಜಕಾರಣಕ್ಕೆ ಪಾದಾರ್ಪಣೆ ಮಾಡಿದ್ದರೂ ದೇಶವನ್ನು ಆರ್ಥಿಕ, ರಾಜತಾಂತ್ರಿಕ, ವಿಜ್ಞಾನ, ತಂತ್ರಜ್ಞಾನ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಇಡೀ ವಿಶ್ವವೇ ನಿಬ್ಬೆರಗಾಗುವಂತೆ ಕಟ್ಟಿದ ಹೆಗ್ಗಳಿಕೆ ಅವರದ್ದಾಗಿದೆ ಎಂದರು.

ಸಂಪರ್ಕ ಕ್ರಾಂತಿಗೆ ಹೊಸ ಭಾಷ್ಯ ಬರೆದ ರಾಜೀವ್ ಗಾಂಧಿಯವರು, 18ನೇ ವಯಸ್ಸಿಗೆ ಮತದಾನದ ಹಕ್ಕನ್ನು ಕಲ್ಪಿಸಿದವರು. ಇಡೀ ವಿಶ್ವದಲ್ಲಿ ಭಯೋತ್ಪಾದನೆ ನಿಲ್ಲದೇ ಹೋದರೆ ಯಾವುದೇ ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದ್ದ ಅವರು, ಉಗ್ರರ ನಿಗ್ರಹಕ್ಕೆ ಮುಂದಾಗಿದ್ದರು. ಜಗತ್ತಿನಲ್ಲಿ ಶಾಂತಿ ನೆಲೆಸಬೇಕು ಎಂಬ ಉದ್ದೇಶದಿಂದ ಶ್ರೀಲಂಕಾದ ಪರವಾಗಿ ಭಾರತದ ಸೇನೆಯನ್ನು ಕಳುಹಿಸಿದ್ದರು ಎಂದು ಸ್ಮರಿಸಿದರು.

ಅಧಿಕಾರಿಗಳೇ ನುಂಗಿ ಹಾಕುತ್ತಾರೆ....!

ಕಾರ್ಮಿಕರಿಗೆ ದೊರೆಯುವ ಸಾಲ–ಸೌಲಭ್ಯಗಳ ಶೇ.90ರಷ್ಟು ಅನುದಾನವನ್ನು ಅಧಿಕಾರಿಗಳೇ ನುಂಗಿಹಾಕುತ್ತಾರೆ. ಆದ್ದರಿಂದ ಐಎನ್‌ಟಿಯುಸಿ ಕಾರ್ಯಕರ್ತರು ಕಾರ್ಮಿಕರಿಗೆ ಸರ್ಕಾರದಿಂದ ದೊರೆಯುವ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಕೆಲಸಮಾಡುತ್ತಿದ್ದಾರೆ. **–ಲಕ್ಷ್ಮಿ ವೆಂಕಟೇಶ್, ರಾಜ್ಯಾಧ್ಯಕ್ಷ, ಐಎನ್‌ಟಿಯುಸಿ**

ಐಎನ್‌ಟಿಯುಸಿ ರಾಜ್ಯಾಧ್ಯಕ್ಷ ಲಕ್ಷ್ಮಿ ವೆಂಕಟೇಶ್ ಮಾತನಾಡಿ, ಐಎನ್‌ಟಿಯುಸಿ ಕಾರ್ಮಿಕ ಪರವಾಗಿ ಕೆಲಸ ಮಾಡುವ ಸಂಘಟನೆಯಾಗಿದ್ದು, ಕಾರ್ಮಿಕರ ವಿರುದ್ಧ ಸರ್ಕಾರ ಯಾವುದೇ ತಪ್ಪು ನಿರ್ಣಯಗಳನ್ನು ತೆಗೆದುಕೊಂಡರು ಅದನ್ನು ಖಂಡಿಸುತ್ತದೆ. ಕಾರ್ಮಿಕರಿಗೆ ಸರ್ಕಾರದಿಂದ ಸೌಕರ್ಯಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಿದೆ. ದೇಶದಲ್ಲಿ 3.80 ಕೋಟಿ ಐಎನ್‌ಟಿಯುಸಿ ಸದಸ್ಯರಿದ್ದು, ಕೇಂದ್ರ ಸರ್ಕಾರ ಐಎನ್‌ಟಿಯುಸಿ ನವೀಕರಣಕ್ಕೆ ಅವಕಾಶ ನೀಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಭಯೋತ್ಪಾದನಾ ವಿರೋಧಿ ಪ್ರತಿಜ್ಞಾ ವಿಧಿ ಬೋಧಿಸಿದರು. ಮಾಜಿ ಮೇಯರ್‌ಗಳಾದ ಮೋದಮಣಿ, ಪುಷ್ಪಲತಾ ಚಿಕ್ಕಣ್ಣ, ಮುಖಂಡರಾದ ಮೋಹನ್ ರಾಜ್, ಪ್ರೊ.ರಾಮಪ್ರಸಾದ್, ಈಶ್ವರ ಚಕ್ಕಡಿ, ಪ್ರೊ.ಶಿವಕುಮಾರ್, ರುಕ್ಮಿಣಿ, ರಾಹುಲ್ ಕುಂಬರಹಳ್ಳಿ, ಐಎನ್‌ಟಿಯುಸಿ ಮುಖಂಡರಾದ ನಾಗರಾಜ್, ಚೇತನ್, ಮದನ್, ಪುಟ್ಟಯ್ಯ, ಕುಮಾರ್ ಮತ್ತಿತರರಿದ್ದರು.

ಮೇ 23, ಶ್ರೀ ಬಾಲರಾಮನ ಮೂರ್ತಿ ಕೆತ್ತನೆ ಕಾರ್ಯಕ್ಕೆ ಚಾಲನೆ

ಮೈಸೂರು, ಮೇ 21– ಅಯೋಧ್ಯೆ ಶ್ರೀ ಬಾಲರಾಮನ ಮೂರ್ತಿಗೆ ಶಿಲೆ ದೊರೆತ ಸ್ಥಳವಾದ ಮೈಸೂರು ತಾಲೂಕಿನ ಹಾರೋಹಳ್ಳಿಯಲ್ಲಿ ಮಂದಿರ ನಿರ್ಮಾಣಕ್ಕಾಗಿ ಮೇ 23ರಂದು ಬೆಳಗ್ಗೆ ಗಂಟೆಗೆ ಧ್ವಜಾರೋಹಣ ಹಾಗೂ ಶ್ರೀ ಬಾಲರಾಮನ ಮೂರ್ತಿ ಕೆತ್ತನೆಯ ಚಾಲನೆ ಕಾರ್ಯಕ್ರಮವನ್ನು ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಯವರಿಂದ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್ ಒಡೆಯರ್, ಶಾಸಕ ಜಿ.ಟಿ. ದೇವೇಗೌಡ, ಶಿಲ್ಪಿ ಅರುಣ್ ಯೋಗಿರಾಜ್, ಆರ್‌ಎಸ್‌ಎಸ್ ಮುಖಂಡ ಮಾ. ವೆಂಕಟರಾಮ್‌ಜೀ, ಪ್ರಾಚೀನ ಇತಿಹಾಸ ಪುರಾತತ್ವ ಅಧ್ಯಯನ ಸಂಶೋಧನಾ ವಿಭಾಗದ ಮುಖ್ಯಸ್ಥ ಪ್ರೊ. ಶೆಲ್ವಪಿಳ್ಳೈ ಅಯ್ಯಂಗಾರ್ ಭಾಗವಹಿಸಲಿದ್ದಾರೆ.

25 ಮಂದಿ ಇನ್‌ಸ್ಪೆಕ್ಟರ್, 19 ಡಿವೈಎಸ್ಪಿಗಳ ವರ್ಗಾವರ್ಗಿ

ಮೈಸೂರು, ಮೇ 21(ಎಸ್‌ಪಿಎನ್)– ರಾಜ್ಯ ಸರ್ಕಾರ, 25 ಮಂದಿ ಪೊಲೀಸ್ ಇನ್‌ಸ್ಪೆಕ್ಟರ್(ಸಿವಿಲ್) ಹಾಗೂ 19 ಮಂದಿ ಡಿವೈಎಸ್‌ಪಿ(ಸಿವಿಲ್)ಗಳನ್ನು ವರ್ಗಾವಣೆ ಮಾಡಿದೆ. ಕಲಬುರಗಿ ಜಿಲ್ಲೆ ಆಳಂದ ಉಪ ವಿಭಾಗದ ಆಂತರಿಕ ಭದ್ರತಾ ವಿಭಾಗದ ಡಿವೈಎಸ್ಪಿ ಬಿ.ಆರ್.ಗೋಪಿ ಅವರನ್ನು ಹಾಸನ ಜಿಲ್ಲೆ ಅರಸೀಕೆರೆ ಉಪ ವಿಭಾಗಕ್ಕೆ ಹಾಗೂ ಮೈಸೂರು ದಕ್ಷಿಣ ವಲಯದ ಐಜಿಪಿ ಕಚೇರಿಯ ಜಿ.ನಿಖಿತಾ ಅವರನ್ನು ಬೆಂಗಳೂರು ನಗರದ ವಿಜಯ ನಗರ ಸಂಚಾರ ಉಪವಿಭಾಗಕ್ಕೆ ವರ್ಗಾವಣೆ ಮಾಡಲಾಗಿದೆ. ಇವರು ಸೇರಿದಂತೆ ಒಟ್ಟು 19 ಮಂದಿಯನ್ನು ರಾಜ್ಯದ ಬೇರೆಬೇರೆ ಸ್ಥಳಗಳಿಗೆ ವರ್ಗಾಯಿಸಲಾಗಿದೆ. ಕರ್ನಾಟಕ ಲೋಕಾಯುಕ್ತಕ್ಕೆ ವರ್ಗಾವಣೆಗೊಂಡಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ವಿ.ಎಸ್.ಶಶಿಕುಮಾರ್ ಅವರನ್ನು ಮೈಸೂರು ಜಿಲ್ಲೆ ಸಾಲಿಗ್ರಾಮ ಪೊಲೀಸ್ ಠಾಣೆಗೆ, ಕರ್ನಾಟಕ ಲೋಕಾಯುಕ್ತಕ್ಕೆ ವರ್ಗಾವಣೆಗೊಂಡಿದ್ದ ಡಿ.ಯೋಗೇಶ್ ಅವರನ್ನು ಕುವೆಂಪುನಗರ ಠಾಣೆಗೆ, ಕುವೆಂಪುನಗರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಇನ್‌ಸ್ಪೆಕ್ಟರ್ ಎಲ್.ಅರುಣ್ ಅವರನ್ನು ನಗರ ವಿಶೇಷ ಶಾಖೆಗೆ ವರ್ಗಾವಣೆಗೊಂಡಿದ್ದಾರೆ.

ಮೈಸೂರು, ಮಂಡ್ಯ, ಹಾಸನ, ಕೊಡಗು, ಚಾ.ನಗರ ಜಿಲ್ಲೆಗಳಲ್ಲಿ ವಾಡಿಕೆಗಿಂತ ಅಧಿಕ ಮಳೆ



ಮೈಸೂರು, ಮೇ 21(ಬಿಎಲ್‌ಯು)– ಮೈಸೂರು, ಮಂಡ್ಯ, ಹಾಸನ, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಮೇ ತಿಂಗಳ ಅವಧಿಯಲ್ಲಿ ವಾಡಿಕೆಗಿಂತ ಅಧಿಕ ಮಳೆ ಬಂದಿದ್ದು, ಈ ವಾರವೂ ಮತ್ತಷ್ಟು ಹೆಚ್ಚಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮೇ ತಿಂಗಳ ಪೂರ್ವ ಮುಂಗಾರಿನಲ್ಲಿ ಮೈಸೂರು ಸೇರಿದಂತೆ ಐದು ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಬಂದಿದ್ದು, ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.

ಮೈಸೂರಿನಲ್ಲಿ ಬುಧವಾರ ಕನಿಷ್ಠ 23.4 ಡಿಗ್ರಿ ಸೆಲ್ಸಿಯಸ್, ಗರಿಷ್ಠ 35 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಮೇ 1 ರಿಂದ 21ರವರೆಗೆ ಮೈಸೂರು ಜಿಲ್ಲೆಯಲ್ಲಿ 79. 4 ಮಿಲಿ ಮೀಟರ್ ಮಳೆಯಾಗಬೇಕು. ಆದರೆ ಈಗ 79.2 ಮಿಲಿ ಮೀಟರ್ ಮಳೆಯಾಗಿದೆ. ಈ ಬಾರಿ ವಾಡಿಕೆ ಮಳೆಯನ್ನು ದಾಟಿದ್ದು, ಇನ್ನು ಒಂಭತ್ತು ದಿನದ ಅವಧಿಯಲ್ಲಿ ಮಳೆಯ ಪ್ರಮಾಣ ಮತ್ತಷ್ಟು ಹೆಚ್ಚಾಗಲಿದೆ. ಕೊಡಗು ಜಿಲ್ಲೆಯಲ್ಲಿ ಮೇ ತಿಂಗಳ 1 ರಿಂದ 21ರವರೆಗೆ 83 ಮಿಲಿ ಮೀಟರ್ ವಾಡಿಕೆ ಮಳೆ ಬರಬೇಕು. 21 ದಿನದ ಅವಧಿಯಲ್ಲಿ 76 ಮಿಲಿ ಮೀಟರ್ ಮಳೆಯಾಗಿದೆ. ಇನ್ನು ಉಳಿದ 9 ದಿನದ ಅವಧಿಯಲ್ಲಿ ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆಯಾಗಲಿದೆ. ಇದರಿಂದ ಕಾವೇರಿ ಅಚ್ಚುಕಟ್ಟು ಪ್ರದೇಶದ ಜಲಾಶಯಗಳು ತುಂಬಲು ಆರಂಭವಾಗಲಿದೆ. ಚಾಮರಾಜನಗರ ಜಿಲ್ಲೆಯಲ್ಲಿ 74.70 ಮಿಲಿ ಮೀಟರ್ ವಾಡಿಕೆ ಮಳೆಯಾಗಬೇಕು. ಆದರೆ ಈಗಾಗಲೇ 74.80 ಮಿಲಿ ಮೀಟರ್ ಮಳೆಯಾಗಿದೆ. ಹಾಸನ ಜಿಲ್ಲೆಯಲ್ಲಿ 91.6 ಮಿಲಿ ಮೀಟರ್ ಮಳೆಯಾಗಿದ್ದು, 85 ಮಿಲಿ ಮೀಟರ್ ಮಳೆ ಬಿದ್ದಿದ್ದು, ವಾಡಿಕೆಗಿಂತ ಶೇಕಡ 38 ಪರ್ಸೆಂಟ್ ಹೆಚ್ಚು ಮಳೆಯಾಗಿದೆ. ಮಂಡ್ಯದಲ್ಲಿ 62.7 ಮಿಲಿ ಮೀಟರ್ ವಾಡಿಕೆ ಮಳೆ ಬೀಳಬೇಕು. ಆದರೆ ಈಗಾಗಲೇ 116.4 ಮಿಲಿ ಮೀಟರ್ ಮಳೆಯಾಗಿದೆ. ಇದರಿಂದ ಶೇಕಡ 86 ಪರ್ಸೆಂಟ್ ಹೆಚ್ಚು ಮಳೆಯಾಗಿದೆ.

ಈ ಬಾರಿ ಮೈಸೂರು ಜಿಲ್ಲೆಯಲ್ಲಿ ವಾಡಿಕೆಗಿಂತ ಹೆಚ್ಚು ಮಳೆ

ಮೈಸೂರು ಜಿಲ್ಲೆಗೆ ಪ್ರತಿ ವರ್ಷದ ವಾಡಿಕೆ ಮಳೆ 837 ಮಿಲಿಮೀಟರ್ ಆಗಿದೆ. ಆದರೆ ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ. ಅಂದರೆ ಶೇಕಡ 5ಕ್ಕಿಂತ ಹೆಚ್ಚು ಮಳೆಯಾಗಲಿದೆ. ಜೂನ್ ತಿಂಗಳ ಮೊದಲ ವಾರದಲ್ಲಿ ಮುಂಗಾರು ಮಳೆ ಕೇರಳ ಮೂಲಕ ಕರ್ನಾಟಕ ಪ್ರವೇಶ ಪಡೆಯುತ್ತದೆ. ಸಾಮಾನ್ಯವಾಗಿ ಮೈಸೂರು ಭಾಗದಲ್ಲಿ ಮೇ ತಿಂಗಳಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗುತ್ತದೆ. ನಿರೀಕ್ಷೆಯಂತೆ ಈಗ ಹೆಚ್ಚು ಮಳೆ ಬೀಳುತ್ತಿದೆ. ಜೂನ್ ತಿಂಗಳಿನಲ್ಲಿ ಸಾಧಾರಣ ಮತ್ತು ಭಾರೀ ಮಳೆಯಾದರೆ, ಜುಲೈ ತಿಂಗಳಲ್ಲಿ ಭಾರಿ ಮಳೆಯಾಗಲಿದೆ. ಆಗಸ್ಟ್ ತಿಂಗಳಲ್ಲಿ ಭಾರಿ ಮಳೆಯಾದರೆ, ಸೆಪ್ಟಂಬರ್ ತಿಂಗಳಲ್ಲಿ ಸಾಧಾರಣ ಮಳೆಯಾಗಿ ಮಳೆಯ ಪ್ರಮಾಣ ಇಳಿಕೆಯಾಗುತ್ತಾ ಬರಲಿದೆ.

– ಡಾ.ಜಿ.ವಿ.ಸುಮಂತ್‌ಕುಮಾರ್, ತಾಂತ್ರಿಕ ಅಧಿಕಾರಿ, ಹವಾಮಾನ ಇಲಾಖೆ, ನಾಗನಹಳ್ಳಿ.

ಆರ್‌ಪಿಎಫ್ ಅಧಿಕಾರಿ, ಸಿಬ್ಬಂದಿಗೆ ಬಾಡಿ–ವೋರ್ನ್ ಕ್ಯಾಮರಾ



ರೈಲ್ವೇ ಭದ್ರತಾ ಪಡೆಗೆ ಬಾಡಿ–ವೋರ್ನ್ ಕ್ಯಾಮರಾ ವಿತರಣಾ ಸಮಾರಂಭ.

ಮೈಸೂರು, ಮೇ 21(ಆರ್‌ಕೆ)– ರೈಲ್ವೇ ಭದ್ರತಾ ಪಡೆಯನ್ನು ಬಲಪಡಿಸಲು ಹಾಗೂ ಪಾರದರ್ಶಕತೆ ಹೆಚ್ಚಿಸಲು ರೈಲ್ವೇ ರಕ್ಷಣಾ ಪಡೆ (ಆರ್‌ಪಿಎಫ್) ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಬಾಡಿ–ವೋರ್ನ್ ಕ್ಯಾಮರಾ ಒದಗಿಸಲಾಗಿದೆ.

ಮೇ 14ರಂದು ನಡೆದ ಸರಳ ಸಮಾರಂಭದಲ್ಲಿ ಹಿರಿಯ ವಿಭಾಗೀಯ ಭದ್ರತಾ ಆಯುಕ್ತ ಜೆ.ಆರ್.ಶ್ಯಾಂ ಪ್ರಶಾಂತ್, ಸಹಾಯಕ ಭದ್ರತಾ ಆಯುಕ್ತ ಇ.ಕೆ.ಅನುಜ್ ಕುಮಾರ್ ಬಾಡಿ ವೋರ್ನ್ ಕ್ಯಾಮರಾಗಳನ್ನು ಆರ್‌ಪಿಎಫ್‌ಗೆ ಹಸ್ತಾಂತರಿಸಿದರು.

ರೈಲ್ವೇ ವಿಭಾಗೀಯ ವ್ಯವಸ್ಥಾಪಕ ಮುದಿಲ್ ಮಿತ್ತಲ್ ಸಿಬ್ಬಂದಿಗಳಿಗೆ ಬಾಡಿ ವೋರ್ನ್ ಕ್ಯಾಮರಾಗಳನ್ನು ಧಾರಣೆ ಮಾಡಿದರು. ರೈಲ್ವೇ ಭದ್ರತಾ ವ್ಯವಸ್ಥೆಯಲ್ಲಿ ತಂತ್ರಜ್ಞಾನ ಅಳವಡಿಸಿ ಸಶಕ್ತಗೊಳಿಸಲು ಇಲಾಖೆಯು ವಿನೂತನ ವ್ಯವಸ್ಥೆಯನ್ನು ಪರಿಚಯಿಸಿದೆ. ಈ ವ್ಯವಸ್ಥೆಯಿಂದಾಗಿ ಭದ್ರತೆಯಲ್ಲಿ ಪಾರದರ್ಶಕತೆ, ಜವಾಬ್ದಾರಿ, ಸಾಕ್ಷ್ಯಾಧಾರಿತ ಕಾನೂನು ಜಾರಿ ಉತ್ತೇಜಿಸಲು ಅನುಕೂಲವಾಗುವುದಲ್ಲದೇ, ಈ ಕ್ಯಾಮರಾಗಳು ರೈಲಿನಲ್ಲಿ ಬೆಂಗಾವಲು ಕರ್ತವ್ಯ, ಪ್ರಯಾಣಿಕರ ಪ್ರತಿಕ್ರಿಯೆ ಹಾಗೂ ರಕ್ಷಣಾ ಕಾರ್ಯಾಚರಣೆ ಸಂದರ್ಭ ನಿರ್ಣಾಯಕ ಪಾತ್ರ ವಹಿಸಲಿವೆ.

ರೋಟರಿ ಗಾಯತ್ರಿ ಪ್ರಶಸ್ತಿ

ಮೈಸೂರು, ಮೇ 21– ರೋಟರಿ ಮೈಸೂರು ವತಿಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 620 ಅಂಕ ಮತ್ತು ಶೇ. 98 (ಸೆಂಟ್ರಲ್ ಸಿಲಬಸ್) ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ರೋಟರಿ ಗಾಯತ್ರಿ ಪ್ರಶಸ್ತಿ ನೀಡಲಾಗುತ್ತಿದೆ. ಅರ್ಹ ವಿದ್ಯಾರ್ಥಿಗಳು ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ ಮತ್ತು ತಾತ್ಕಾಲಿಕ ಅಂಕಪಟ್ಟಿಗೆ ಸಹಿ ಹಾಗೂ ಶಾಖೆಯ ಮುಖ್ಯಸ್ಥರು ಮೊಹರನ್ನು ಹಾಕಿದ ಅರ್ಜಿಯನ್ನು ಮೇ 26ರ ಸಂಜೆ 5 ಗಂಟೆಯೊಳಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಮೊ. 9632503181 ಸಂಪರ್ಕಿಸಬಹುದು.

ಸರ್ವರ್ ಸಮಸ್ಯೆ: ಇ–ಖಾತಾ, ಬಿ–ಖಾತಾ ವಿತರಣೆ ಪ್ರಕ್ರಿಯೆಗೆ ಅಡ್ಡಿ

ನಾಲ್ಕು ದಿನಗಳ ನಂತರ ಸೇವೆ ಪುನಾರಂಭ



ಶಾರದಾದೇವಿನಗರದ ಪಾಲಿಕೆ ವಲಯ ಕಚೇರಿ–3ರಲ್ಲಿ ಬುಧವಾರ ಮಧ್ಯಾಹ್ನದಿಂದ ವಲಯಾಧಿಕಾರಿ ಸತ್ಯಮೂರ್ತಿ ಆಸ್ತಿ ಮಾಲೀಕರಿಗೆ ಇ–ಖಾತಾ ಪತ್ರ ವಿತರಿಸಿದರು.

ಮೈಸೂರು, ಮೇ 21(ಆರ್‌ಕೆ)– ಇ–ಖಾತಾ ಮತ್ತು ಬಿ–ಖಾತಾ ವಿತರಣಾ ಪ್ರಕ್ರಿಯೆಗೆ ತೊಂದರೆಯಾಗಿದ್ದ ಸರ್ವರ್ ಸಮಸ್ಯೆ ನಾಲ್ಕು ದಿನಗಳ ನಂತರ ಪರಿಹಾರವಾಗಿದೆ.

ಸರ್ಕಾರವು ರಾಜ್ಯದಾದ್ಯಂತ ಸ್ವತ್ತುಗಳಿಗೆ ಇ–ಖಾತೆ ಮತ್ತು ಬಿ–ಖಾತೆ ನೀಡುವಂತೆ ಎಲ್ಲಾ ಮಹಾನಗರ ಪಾಲಿಕೆ, ನಗರ ಸಭೆ, ಪಟ್ಟಣ ಪಂಚಾಯ್ತಿಗಳಿಗೆ ನಿರ್ದೇಶನ ನೀಡಿತ್ತು. ಇ–ಖಾತಾ ಹೊಂದಿರದಿದ್ದರೆ ಆಸ್ತಿಗಳ ಮಾರಾಟದ ಕ್ರಯಪತ್ರ ನೋಂದಣಿ ಮಾಡಬಾರದೆಂದು ಎಲ್ಲಾ ಉಪನೋಂದಣಾಧಿಕಾರಿಗಳಿಗೆ ಕಂದಾಯ ಇಲಾಖೆಯು ಆದೇಶ ಹೊರಡಿಸಿತ್ತು.

ತದನಂತರ ಅಗತ್ಯ ದಾಖಲೆ ಪತ್ರ ಮಾಲೀಕರ ಭಾವಚಿತ್ರ ಪಡೆದು ಇ–ಖಾತಾ ಪ್ರಕ್ರಿಯೆ ನಡೆಸಲಾಗುತ್ತಿತ್ತು. ಎಲ್ಲಾ ಮಹಾನಗರ ಪಾಲಿಕೆಗಳು, ನಗರಸಭೆ, ಪಟ್ಟಣ ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿಗಳಿಗೆ ಸಾರ್ವಜನಿಕರು ಅರ್ಜಿ ಸಲ್ಲಿಸಿ ಖಾತೆ ಮಾಡಿಸಿಕೊಳ್ಳಲು ಮುಗಿಬೀಳುತ್ತಿದ್ದರು. ಬೆಂಗಳೂರಿನಲ್ಲಿರುವ ಎನ್‌ಐಸಿ (ನ್ಯಾಷನಲ್ ಇನ್ಫರ್ಮ್ಯಾಟಿಕ್ ಸೆಂಟರ್)ಯು ನಿರ್ವಹಿಸಿರುವ ಇ–ಸ್ವತ್ತು ತಂತ್ರಾಂಶದ ಮೂಲಕವೇ ಅಪ್‌ಲೋಡ್ ಮಾಡಿ ದಾಖಲೆಗಳನ್ನು ಸ್ಕ್ಯಾನ್ ಮಾಡಿದ ಬಳಿಕ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಲಾಗಿನ್‌ನಲ್ಲಿ ಸ್ವತ್ತಿನ ಇ–ಖಾತೆ ಪತ್ರಕ್ಕೆ ಅನುಮೋದನೆ ನೀಡಿದ ಬಳಿಕ ಪ್ರತಿಯನ್ನು ಮಾಲೀಕರಿಗೆ ನೀಡುವ ಸೇವೆ ನಡೆಯುತ್ತಿತ್ತು.

ಕಳೆದ ಮೇ 17ರಿಂದ ಇದ್ದಕ್ಕಿದ್ದಂತೆಯೇ ಇ–ಸ್ವತ್ತು ತಂತ್ರಾಂಶದ ಸರ್ವರ್ ಡೌನ್ ಆದ ಕಾರಣ ಇ–ಖಾತಾ, ಬಿ–ಖಾತಾ ಪ್ರಕ್ರಿಯೆ ಸಂಪೂರ್ಣ ಸ್ಥಗಿತಗೊಂಡಿತ್ತು. ಜನರು ಸ್ಥಳೀಯ ಸಂಸ್ಥೆಗಳಿಗೆ ಅಲೆದಾಡುತ್ತಿದ್ದರು. ಜೊತೆಗೆ ಮುಖ್ಯಮಂತ್ರಿಗಳು ಮೇ 30, 31ರಂದು ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆ ಕರೆದಿದ್ದು, ಇ–ಖಾತಾ, ಬಿ–ಖಾತಾ ಪ್ರಗತಿ ಪರಿಶೀಲನೆಗೆ ಅಗತ್ಯ ಮಾಹಿತಿಗಳೊಂದಿಗೆ ಹಾಜರಾಗುವಂತೆ ಸೂಚನೆ ನೀಡಿದ್ದಾರೆ.

ಕಳೆದ 4 ದಿನಗಳಿಂದ ಸರ್ವರ್ ಡೌನ್ ಆದ ಕಾರಣ ಇ–ಸ್ವತ್ತು ತಂತ್ರಾಂಶದಲ್ಲಿ ಮಾಹಿತಿಯನ್ನೇ ಅಪ್‌ಲೋಡ್ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಸಭೆಯಲ್ಲಿ ಮುಖ್ಯಮಂತ್ರಿಗಳಿಗೆ ಪ್ರಗತಿ ಬಗ್ಗೆ ಹೇಗೆ ವರದಿ ನೀಡುವುದೆಂಬ ಆತಂಕದಿಂದ ಅಧಿಕಾರಿಗಳು ಪರದಾಡುತ್ತಿದ್ದರು.

ಇದೀಗ ಇಂದು ಮಧ್ಯಾಹ್ನದಿಂದ ಸರ್ವರ್ ಸಮಸ್ಯೆ ಪರಿಹಾರವಾಗಿ ಕಚೇರಿಗಳಲ್ಲಿ ಇ–ಖಾತಾ ಪ್ರಕ್ರಿಯೆ ಪುನಾರಂಭಗೊಂಡಿದೆ. ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಇಂದು ಪಾಲಿಕೆ ವಲಯ ಕಚೇರಿ–3ಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರಲ್ಲದೇ ತ್ವರಿತಗತಿಯಲ್ಲಿ ಸಾರ್ವಜನಿಕರಿಗೆ ಸೇವೆ ಒದಗಿಸುವಂತೆ ನಿರ್ದೇಶನ ನೀಡಿದರು.

ದೇಶ – ವಿದೇಶ

ಪಾಕಿಸ್ತಾನದಲ್ಲಿ ಶಾಲಾ ಬಸ್ ಮೇಲೆ ಆತ್ಮಾಹುತಿ ಕಾರ್ ಬಾಂಬ್ ದಾಳಿ; ನಾಲ್ವರು ಮಕ್ಕಳು ಸಜೀವ ದಹನ



ಬಲೂಚಿಸ್ತಾನ: ಪಾಕಿಸ್ತಾನದ ನೈಋತ್ಯ ಭಾಗದಲ್ಲಿ ಬುಧವಾರ ಶಾಲಾ ಬಸ್ ಮೇಲೆ ಆತ್ಮಾಹುತಿ ಕಾರ್ ಬಾಂಬರ್ ದಾಳಿ ನಡೆದಿದ್ದು, ಕನಿಷ್ಠ ನಾಲ್ವರು ಮಕ್ಕಳು ಸಾವನ್ನಪ್ಪಿದ್ದು, 38 ಮಂದಿ ಗಾಯಗೊಂಡಿದ್ದಾರೆ ಎಂದು ಸರ್ಕಾರಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬಲೂಚಿಸ್ತಾನ್ ಪ್ರಾಂತ್ಯದ ಖುಜ್ದಾರ್ ಜಿಲ್ಲೆಯ ಬಸ್ ನಗರದಲ್ಲಿ ಶಾಲೆಗೆ ಮಕ್ಕಳನ್ನು ಸಾಗಿಸುತ್ತಿದ್ದಾಗ ಈ ದಾಳಿ ನಡೆದಿದೆ ಎಂದು ಸ್ಥಳೀಯ ಉಪ ಆಯುಕ್ತ ಯಾಸಿರ್ ಇಕ್ಬಾಲ್ ತಿಳಿಸಿದ್ದಾರೆ. ಹಲವಾರು ಮಕ್ಕಳ ಸ್ಥಿತಿ ಗಂಭೀರವಾಗಿರುವುದರಿಂದ ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗಬಹುದು. ತಕ್ಷಣಕ್ಕೆ ಯಾವುದೇ ಗುಂಪು ಹೊಣೆಗಾರಿಕೆಯನ್ನು ಹೊತ್ತುಕೊಂಡಿಲ್ಲ, ಜನಾಂಗೀಯ ಬಲೂಚ್ ದಾಳಿ ನಡೆಸಿರುವ ಸಾಧ್ಯತೆಯಿದೆ. ಪಾಕಿಸ್ತಾನದ ಆಂತರಿಕ ಸಚಿವ ಮೊಹ್ಸಿನ್ ನಖ್ವಿ ದಾಳಿಯನ್ನು ಬಲವಾಗಿ ಖಂಡಿಸಿದರು ಮತ್ತು ಮಕ್ಕಳ ಸಾವಿನ ಬಗ್ಗೆ ತೀವ್ರ ದುಃಖ ವ್ಯಕ್ತಪಡಿಸಿದರು. ಪಾಕಿಸ್ತಾನದಿಂದ ಇಬ್ಭಾಗವಾಗಲು ಬಯಸುತ್ತಿರುವ ಅಲ್ಲಿನ ಪ್ರತ್ಯೇಕತಾವಾದಿಗಳು ಬಲೂಚಿಸ್ತಾನ ಪ್ರಾಂತ್ಯದಲ್ಲಿ ಸತತ ದಾಳಿ ಸಂಘಟಿಸುತ್ತಿದ್ದಾರೆ.

ಸುಳ್ಳು ಮಾಹಿತಿ ಆರೋಪ: ಅಮಿತ್ ಮಾಳವೀಯ, ಅರ್ನಬ್ ಗೋಸ್ವಾಮಿ ವಿರುದ್ಧ ಎಫ್‌ಐಆರ್ ದಾಖಲು



ಬೆಂಗಳೂರು: ಸುಳ್ಳು ಮಾಹಿತಿ ನೀಡಿದ ಆರೋಪದ ಮೇಲೆ ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಮತ್ತು ರಿಪಬ್ಲಿಕ್ ಟಿವಿಯ ಪ್ರಧಾನ ಸಂಪಾದಕ ಅರ್ನಬ್ ಗೋಸ್ವಾಮಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಭಾರತೀಯ ಯುವ ಕಾಂಗ್ರೆಸ್‌ನ ಕಾನೂನು ವಿಭಾಗದ ಮುಖ್ಯಸ್ಥ ಶ್ರೀಕಾಂತ್ ಸ್ವರೂಪ್ ಬಿ.ಎನ್ ನೀಡಿದ ದೂರಿನ ಮೇರೆಗೆ ಮಂಗಳವಾರ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 192 (ಗಲಭೆಯನ್ನು ಉಂಟುಮಾಡುವ ಉದ್ದೇಶದಿಂದ ಉದ್ದೇಶಪೂರ್ವಕವಾಗಿ ಪ್ರಚೋದನೆ ನೀಡುವುದು) ಮತ್ತು 352 (ಶಾಂತಿ ಉಲ್ಲಂಘನೆಯನ್ನು ಪ್ರಚೋದಿಸುವುದು) ಅಡಿಯಲ್ಲಿ ಬೆಂಗಳೂರು ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಟರ್ಕಿಯಲ್ಲಿರುವ ಇಸ್ತಾನ್‌ಬುಲ್ ಕಾಂಗ್ರೆಸ್ ಕೇಂದ್ರವು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಕಚೇರಿಯಾಗಿದೆ ಎಂದು ಸುಳ್ಳು ಹೇಳಿಕೆಗಳನ್ನು ನೀಡುವ ಮೂಲಕ ಅಮಿತ್ ಮಾಳವೀಯ ಮತ್ತು ಅರ್ನಬ್ ಗೋಸ್ವಾಮಿ ದುರುದ್ದೇಶಪೂರ್ವಕವಾಗಿ ಪ್ರಚಾರ ಮಾಡಿದ್ದಾರೆ ಎಂದು ಸ್ವರೂಪ್ ಆರೋಪಿಸಿದ್ದಾರೆ.

ಸೋತರೂ, ಪಾಕ್ ಸೇನಾ ಮುಖ್ಯಸ್ಥ ಅಸಿಮ್ ಮುನೀರ್‌ಗೆ ಫೀಲ್ಡ್ ಮಾರ್ಷಲ್ ಆಗಿ ಬಡ್ತಿ



ಇಸ್ಲಾಮಾಬಾದ್: ಭಾರತದೊಂದಿಗೆ 'ಆಪರೇಷನ್ ಸಿಂಧೂರ್' ಸೇನಾ ಕಾರ್ಯಾಚರಣೆ ವೇಳೆಯಲ್ಲಿ ಸೋತರೂ ಪಾಕಿಸ್ತಾನದ ಸೇನಾ ಮುಖ್ಯಸ್ಥ ಜನರಲ್ ಅಸಿಮ್ ಮುನೀರ್ ಅವರಿಗೆ ಸೇನೆಯಲ್ಲಿನ ಅತ್ಯುನ್ನತ ಪದವಿ ಫೀಲ್ಡ್ ಮಾರ್ಷಲ್ ಆಗಿ ಬಡ್ತಿ ನೀಡಲಾಗಿದೆ. ಸಾಮಾನ್ಯವಾಗಿ ಅಪರೂಪದ ಸಂದರ್ಭಗಳಲ್ಲಿ ವೃತ್ತಿಜೀವನದಲ್ಲಿ ಅಗಾಧ ಸಾಧನೆಗಾಗಿ ಈ ಪದವಿ ನೀಡಲಾಗುತ್ತದೆ. ಭಾರತದೊಂದಿಗಿನ ಇತ್ತೀಚಿನ ಸೇನಾ ಸಂಘರ್ಷದ ಸಂದರ್ಭದಲ್ಲಿ ಪಾಕ್ ಸಶಸ್ತ್ರ ಪಡೆಗಳನ್ನು ಯಶಸ್ವಿಯಾಗಿ ಮುನ್ನಡೆಸಿದ್ದಕ್ಕಾಗಿ ಅಸಿಮ್ ಮುನೀರ್‌ಗೆ ಬಡ್ತಿ ನೀಡಲಾಗಿದೆ ಎಂದು ಹೇಳಲಾಗಿದೆ. ಪ್ರಧಾನಿ ಶೆಹಬಾಜ್ ಷರೀಫ್ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಜನರಲ್ ಅಸೀಮ್ ಮುನೀರ್ ಅವರನ್ನು ದೇಶದ ಫೀಲ್ಡ್ ಮಾರ್ಷಲ್ ಆಗಿ ಬಡ್ತಿ ನೀಡುವ ಮಹತ್ವದ ನಿರ್ಧಾರವನ್ನು ಸಂಪುಟ ಕೈಗೊಂಡಿದೆ. ಭಾರತದೊಂದಿಗಿನ ಸಂಘರ್ಷದಲ್ಲಿ ಅವರ ಆದರ್ಶಪ್ರಾಯ ಪಾತ್ರಕ್ಕಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಸರ್ಕಾರಿ ಸ್ವಾಮ್ಯದ ಪಿಟಿವಿ ವರದಿ ಮಾಡಿದೆ.

ಛತ್ತೀಸ್‌ಗಢದಲ್ಲಿ ಗುಂಡಿನ ಚಕಮಕಿ: 27 ನಕ್ಸಲೀಯರು ಹತ್ಯೆ



ಛತ್ತೀಸ್‌ಗಢ: ಛತ್ತೀಸ್‌ಗಢದ ನಾರಾಯಣ್‌ಪುರ–ಬಿಜಾಪುರ್ ಗಡಿಯಲ್ಲಿ ಬುಧವಾರ ಭದ್ರತಾ ಪಡೆಗಳೊಂದಿಗೆ ನಡೆದ ಭೀಕರ ಗುಂಡಿನ ಚಕಮಕಿಯಲ್ಲಿ ಕನಿಷ್ಠ 27 ನಕ್ಸಲರು ಮೃತಪಟ್ಟಿದ್ದಾರೆ.

ಗುಂಡಿನ ಚಕಮಕಿಯಲ್ಲಿ ಪೊಲೀಸರ ಬೆಂಬಲಿಗ ಮೃತಪಟ್ಟಿದ್ದಾರೆ ಮತ್ತು ಒಬ್ಬರು ಪೊಲೀಸರಿಗೆ ಗಾಯವಾಗಿದೆ. ರಾಜ್ಯ ಪೊಲೀಸರು ದೊಡ್ಡ ಪ್ರಮಾಣದ ನಕ್ಸಲ್ ವಿರೋಧಿ ಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದು, ದಟ್ಟ ಅರಣ್ಯ ಅಭುಜ್‌ಮದ್ ಪ್ರದೇಶದಲ್ಲಿ ಗುಂಡಿನ ಚಕಮಕಿ ನಡೆದಿದೆ. ಮಾವೋವಾದಿಗಳ 'ಮ್ಯಾಡ್' ವಿಭಾಗದ ಹಿರಿಯ ಕಾರ್ಯಕರ್ತರ ಉಪಸ್ಥಿತಿ ಬಗ್ಗೆ ಗುಪ್ತಚರ ಮಾಹಿತಿ ಸಿಕ್ಕಿ, ಭದ್ರತಾ ಪಡೆಗಳು ಪ್ರಸಿದ್ಧ ನಕ್ಸಲೀಯ ಭದ್ರಕೋಟೆಯಾದ ಅಭುಜ್‌ಮದ್ ಪ್ರದೇಶದೊಳಗೆ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದವು. ನಮ್ಮ ತಂಡಗಳು ನಕ್ಸಲರ ಅಡಗುತಾಣವನ್ನು ಸಮೀಪಿಸುತ್ತಿದ್ದಂತೆ ಮನಬಂದಂತೆ ಗುಂಡು ಹಾರಿಸಲು ಆರಂಭಿಸಿದರು. ಪ್ರತೀಕಾರದ ಕ್ರಮದಲ್ಲಿ, 27 ಕ್ಕೂ ಹೆಚ್ಚು ಮಾವೋವಾದಿಗಳು ಹತರಾಗಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕ್ಯಾಲಿಫೋರ್ನಿಯಾದಲ್ಲಿ ಮತ್ತೆ ವಕ್ಕರಿಸಿದ ವ್ಯಾಲಿ ಫೀವರ್



ವಾಷಿಂಗ್ಟನ್ ಡಿಸಿ: ನೈಸರ್ಗಿಕ ವಿಕೋಪದ ಸುಳಿಯಲ್ಲಿ ಸಿಕ್ಕು ನಲುಗುತ್ತಿರುವ ಅಮೆರಿಕ, ಇದೀಗ ಮತ್ತೊಂದು ಹೊಡೆತವನ್ನು ಎದುರಿಸುವ ಅನಿವಾರ್ಯತೆಗೆ ಸಿಲುಕಿದೆ. ಕ್ಯಾಲಿಫೋರ್ನಿಯಾದಲ್ಲಿ 'ವ್ಯಾಲಿ ಫೀವರ್' ಹೆಸರಿನ ಶ್ವಾಸಕೋಶ ಸಂಬಂಧಿ ಸೋಂಕು ಕಾಣಿಸಿಕೊಂಡಿದ್ದು, ಇದುವರೆಗೂ ಸುಮಾರು 3,100ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ.

ವ್ಯಾಲಿ ಫೀವರ್ ಅಮೆರಿಕಕ್ಕೆ ಹೊಸದಲ್ಲ. ಆದರೆ ಕಳೆದ ವರ್ಷಕ್ಕಿಂತ ಈ ವರ್ಷ ಸೋಂಕು ಪ್ರಕರಣಗಳ ಸಂಖ್ಯೆ ಹೆಚ್ಚಾಗಿರುವುದು ಆತಂಕಕ್ಕೆ ಕಾರಣವಾಗಿದೆ. ಕ್ಯಾಲಿಫೋರ್ನಿಯಾದಲ್ಲೇ ಅತಿಹೆಚ್ಚು ಪ್ರಕರಣಗಳು ದಾಖಲಾಗಿದ್ದು, ಆರೋಗ್ಯ ಅಧಿಕಾರಿಗಳು ಮತ್ತು ಜನರಲ್ಲಿ ಆತಂಕ ಹೆಚ್ಚಾಗಿದೆ. ಈ ಸೋಂಕು ಮಣ್ಣಿನಲ್ಲಿ ಬೆಳೆಯುವ ಶಿಲೀಂಧ್ರದಿಂದ ಬರುತ್ತದೆ. ಇದು ಶ್ವಾಸಕೋಶದ ತೊಂದರೆಗೆ ಕಾರಣವಾಗಬಹುದು. ಸಮಯಕ್ಕೆ ಸರಿಯಾಗಿ ಚಿಕಿತ್ಸೆ ನೀಡದಿದ್ದರೆ, ಸೋಂಕು ಮೆದುಳಿಗೆ ಹರಡಿ ಪ್ರಾಣಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ. ಪ್ರತಿ ವರ್ಷ ಸಾವಿರಾರು ಜನರಿಗೆ ಈ ಸೋಂಕು ತಗುಲುತ್ತದೆ. ಈ ಪೈಕಿ ನೂರಾರು ಜನರು ಈ ಸೋಂಕಿಗೆ ಬಲಿಯಾಗುತ್ತಾರೆ.

ಕಾಡಾನೆ ದಾಳಿಗೆ ಕಾರ್ಮಿಕ ಬಲಿ

ಗೋಣಿಕೊಪ್ಪ/ ಮಡಿಕೇರಿ, ಮೇ 21– ಪೊನ್ನಂ ಪೇಟೆ ತಾಲೂಕಿನ ದೇವರಪುರ ದೇವ ಕಾಡಿನಲ್ಲಿ ಆದಿವಾಸಿ ಕಾರ್ಮಿಕನ ಮೇಲೆ ಕಾಡಾನೆ ದಾಳಿ ನಡೆಸಿದ್ದು, ಆತ ಸ್ಥಳದಲ್ಲೇ ಅಸುನೀಗಿದ್ದಾನೆ. ಅಣ್ಣಯ್ಯ (46) ಮೃತ ದುರ್ದೈವಿ.

ಇಂದು ಬೆಳಗ್ಗೆ ಮನೆಯಿಂದ ಕಾಲುದಾರಿ ಕೆಲಸಕ್ಕೆ ಹೋಗುತ್ತಿದ್ದಾಗ ದಿಢೀರ್ ಪ್ರತ್ಯಕ್ಷವಾದ ಆನೆ ಸೊಂಡಲಿನಿಂದ ಎದೆ ಭಾಗಕ್ಕೆ ಬಡಿದಿದೆ. ಇದರಿಂದ ಹೃದಯ ಭಾಗಕ್ಕೆ ಗಂಭೀರ ಪೆಟ್ಟಾಗಿ ಸ್ಥಳದಲ್ಲೇ ಕಾರ್ಮಿಕ ಸಾವಿಗೀಡಾಗಿದ್ದಾನೆ. ಸ್ಥಳಕ್ಕೆ ವಿರಾಜಪೇಟೆ ಡಿಸಿಎಫ್ ಜಗನ್ನಾಥ್, ತಿತಿಮತಿ ಎಸಿಎಫ್ ಗೋಪಾಲ್, ಆರ್‌ಎಫ್‌ಓ ಗಂಗಾಧರ್, ಡಿಆರ್‌ಎಫ್‌ಓ ಪ್ರಶಾಂತ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತ ದೇಹವನ್ನು ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಶವ ಪರೀಕ್ಷೆ ನಡೆಸಿ ದೇಹವನ್ನು ಕುಟುಂಬಕ್ಕೆಹಸ್ತಾಂತರಿಸಲಾಯಿತು.

ಹುಲಿ ದಾಳಿ: ಕಾಫಿ ತೋಟದಲ್ಲಿ ಅಡಗಿದ್ದ ಹುಲಿ, ಏಕಾಏಕಿ ಹಸುವಿನ ಮೇಲೆ ದಾಳಿ ಮಾಡಿ ಕುತ್ತಿಗೆ ಹಾಗೂ ಕಾಲಿನ ಭಾಗಕ್ಕೆ ಕಚ್ಚಿ ಗಾಯಗೊಳಿಸಿರುವ ಘಟನೆ ನಡೆದಿದೆ.

ಪೊನ್ನಂಪೇಟೆ ತಾಲೂಕಿನ ಕಿರುಗೂರು ಗ್ರಾಮದ ವಿ.ಎಲ್.ಚಂದ್ರಶೇಖರ್ ಎಂಬುವವರಿಗೆ ಈ ಹಸು ಸೇರಿದ್ದು, ಗದ್ದೆಯಲ್ಲಿ ಮೇಯಲು ಬಿಡಲಾಗಿತ್ತು. ಮಳೆ ಬಂದ ಕಾರಣದಿಂದಾಗಿ ಕೊಟ್ಟಿಗೆಯಲ್ಲಿ ಕಟ್ಟಲು ಕಾಫಿ ತೋಟದ ಮಧ್ಯ ಭಾಗದ ರಸ್ತೆಯಲ್ಲಿ ಹೊಡೆದುಹೊಂಡು ಬರುತ್ತಿದ್ದಾಗ ಈ ಘಟನೆ ಸಂಭವಿಸಿದೆ.

ಹುಲಿಯನ್ನು ಕಂಡ ಚಂದ್ರಶೇಖರ್ ಗಾಬರಿಯಿಂದ ಓಡಿ ಬಂದು ಪೊನ್ನಂಪೇಟೆಯ ಉಪವಲಯ ಅರಣ್ಯಾಧಿಕಾರಿ ಕೆ.ಜಿ. ದಿವಾಕರ್ ಅವರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಪೊನ್ನಂಪೇಟೆ ಉಪವಲಯ ಅರಣ್ಯಾಧಿಕಾರಿ ಕೆ.ಜಿ. ದಿವಾಕರ್, ಗಸ್ತು ಅರಣ್ಯ ಪಾಲಕರ ಅಣ್ಣಯ್ಯ ಹಾಗೂ

ಹುಲಿ ದಾಳಿ: ಹಸುವಿಗೆ ತೀವ್ರ ಗಾಯ



ಹುಲಿ ದಾಳಿಯಿಂದ ಗಾಯಗೊಂಡಿರುವ ಹಸುವಿಗೆ ವೈದ್ಯರು ಚಿಕಿತ್ಸೆ ನೀಡುತ್ತಿರುವುದು.

ಆರ್‌ಆರ್‌ಟಿ ಸಿಬ್ಬಂದಿ ಭೇಟಿ ನೀಡಿದಾಗ ಹಸುವಿನ ಕುತ್ತಿಗೆ ಹಾಗೂ ಕಾಲುಗಳಲ್ಲಿ ಆಳವಾದ ಗಾಯವಾಗಿರುವುದು ಕಂಡು ಬಂದಿದೆ. ಪಶುವೈದ್ಯಾಧಿಕಾರಿ ಡಾ.ಚಂದ್ರಶೇಖರ್ ಹಸುವಿಗೆ ಚಿಕಿತ್ಸೆ ನೀಡಿದ್ದಾರೆ.

ಹುಲಿ ದಾಳಿ ಕುರಿತು ಮಾತನಾಡಿದ ವಲಯ ಅರಣ್ಯಾಧಿಕಾರಿ ಬಿ.ಎಂ.ಶಂಕರ್, ಹುಲಿಯ ಚಲನವಲನಗಳನ್ನು ತಿಳಿಯಲು 10 ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಹುಲಿ ಕಂಡು ಬಂದಲ್ಲಿ ಕೂಡಲೇ ಕೂಂಬಿಂಗ್ ಕಾರ್ಯಾಚರಣೆ ಮಾಡಲಾಗುತ್ತದೆ. ಸಾರ್ವಜನಿಕರು, ಕಾರ್ಮಿಕರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಎಚ್ಚರಿಕೆಯಿಂದ ಇರುಬೇಕು. ಅಲ್ಲದೆ ಹುಲಿಯ ಚಲನವಲನಗಳು ಕಂಡು ಬಂದಲ್ಲಿ ಕೂಡಲೇ ಮಾಹಿತಿ ನೀಡಿ ಸಹಕರಿಸುವಂತೆ ಮನವಿ ಮಾಡಿಕೊಂಡರು.

ಈ ಸಂದರ್ಭ ಕಿರುಗೂರು ಗ್ರಾಮದ ಅಧ್ಯಕ್ಷ ಅಲೆಮಾಡ ಸುದೀರ್, ಕಾಕೇರ ರಾಜೇಶ್, ಕಾಕೇರ ಅಪ್ಪಿ ಮಂಜುನಾಥ, ಪೊಕ್ಕಳಿಚಂಡ ಬೋಪ್ಪಣ್ಣ ವಿ.ಎಲ್. ಗಣೇಶ್, ವಿ.ಎಲ್.ಮಂಜುನಾಥ್, ಆರ್‌ಆರ್‌ಟಿ ಸಿಬಂದಿಗಳಾದ ಕಾಕೇರ ಸನ್ನಿ, ಸಶಾಂಕ್, ಸಂಜು ಕುಮಾರ್, ಅರುಣ, ಭರತ್, ಸಚಿನ್, ಪೂಣಚ್ಚ, ಪುನೀತ್, ಶೈಲೇಶ್ ಇತರರು ಹಾಜರಿದ್ದರು.

ವಿದ್ಯುತ್ ಕಡಿತಕ್ಕೆ ಕಡಿವಾಣ ಹಾಕದಿದ್ದಲ್ಲಿ ಚೆಸ್ಕಾಂ ಕಚೇರಿಗೆ ಮುತ್ತಿಗೆ

ಮಡಿಕೇರಿ: ಅನಿಯಮಿತ ವಿದ್ಯುತ್ ಕಡಿತಗೊಳಿಸುತ್ತಿರುವ ಕ್ರಮವನ್ನು ವಿರೋಧಿಸಿ ಚೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕುವುದಾಗಿ ನಗರ ಚೇಂಬರ್ ಆಫ್ ಕಾಮರ್ಸ್ ಎಚ್ಚರಿಕೆ ನೀಡಿದೆ.



ಸಂತೋಷ್ ಅನ್ವೇಕರ್

ಕಳೆದ ನಾಲ್ಕೈದು ದಿನಗಳಿಂದ ಯಾವುದೇ ಮಾಹಿತಿ ನೀಡದೆ ಗಂಟೆಗಟ್ಟಲೆ ವಿದ್ಯುತ್ ಕಡಿತ ಮಾಡಲಾಗುತ್ತಿದ್ದು, ಇದರಿಂದ ವರ್ತಕರಿಗೆ ಭಾರೀ ನಷ್ಟವಾಗುತ್ತಿದೆ ಸಾರ್ವಜನಿಕರ ಕೆಲಸ, ಕಾರ್ಯಗಳಿಗೆ ತೊಂದರೆಯಾಗುತ್ತಿದೆ ಎಂದು ಚೇಂಬರ್ ಆಫ್ ಕಾಮರ್ಸ್‌ನ ನಗರಾಧ್ಯಕ್ಷ ಸಂತೋಷ್ ಅನ್ವೇಕರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ದುರಸ್ತಿ ಮತ್ತು ನಿರ್ವಹಣೆಯ ಕಾರಣ ನೀಡಿ ವ್ಯಾಪಾರದ ಸಂದರ್ಭದಲ್ಲೇ ವಿದ್ಯುತ್ ಕಡಿತ ಮಾಡಲಾಗುತ್ತಿದ್ದು, ವ್ಯಾಪಾರಸ್ಥರು ಕಷ್ಟ, ನಷ್ಟ ಅನುಭವಿಸುತ್ತಿದ್ದಾರೆ. ಸಮಸ್ಯೆಯನ್ನು ಶೀಘ್ರ ಬಗೆಹರಿಸಿ ಅನಿಯಮಿತ ವಿದ್ಯುತ್ ಕಡಿತಕ್ಕೆ ಕಡಿವಾಣ ಹಾಕದಿದ್ದಲ್ಲಿ ಚೇಂಬರ್ ಆಫ್ ಕಾಮರ್ಸ್ ನೇತೃತ್ವದಲ್ಲಿ ಸಮಸ್ತ ವರ್ತಕರು ಚೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಅವರು ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ಎಚ್ಚರಿಕೆ ನೀಡಿದ್ದಾರೆ.

ವಿಕಲಚೇತನ ಮಹಿಳೆ ಮೇಲೆ ಹಲ್ಲೆ ಆರೋಪಿಗಳ ಬಂಧನಕ್ಕೆ ಆಗ್ರಹ



ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ವಿಕಲಚೇತನರು ಎಸ್‌ಪಿಗೆ ಮನವಿ ಸಲ್ಲಿಸಿದರು.

ಮಡಿಕೇರಿ: ಗ್ರಾಮೀಣ ಪುನರ್ವಸತಿ ಕಾರ್ಯಕರ್ತೆ ವಿಕಲಚೇತನ ಮಹಿಳೆಯ ಮೇಲೆ ಹಲ್ಲೆ ನಡೆಸಿರುವ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ರಾಜ್ಯ ವಿಶೇಷ ಚೇತನರ ನಗರ ಮತ್ತು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ರಾಜ್ಯ ಸಮಿತಿಯ ಅಧ್ಯಕ್ಷ ಪ್ರವೀಣ್ ನಾಯಕ್ ಆಗ್ರಹಿಸಿದ್ದಾರೆ.

ಬೆಟ್ಟಗೇರಿಯಲ್ಲಿ ನೆಲೆಸಿರುವ, ಗ್ರಾಮೀಣ ಪುನರ್ವಸತಿ ಕಾರ್ಯಕರ್ತೆ ವಿಕಲಚೇತನ ಮಹಿಳೆ ವೀಣಾ ಮತ್ತು ಅವರ ತಾಯಿಯ ಮೇಲೆ ನಿನ್ನೆ ಸಂಜೆ ದುಷ್ಕರ್ಮಿಗಳು ಹಲ್ಲೆ ನಡೆಸಿದ್ದಾರೆ. ಅವರ ವಿರುದ್ಧ ಕ್ರಮಕ್ಕೆ ಆರಕ್ಷಕ ಇಲಾಖೆ ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ. ಈ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೂ ದೂರು ಸಲ್ಲಿಸುತ್ತಿರುವುದಾಗಿ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ವಿಕಲಚೇತನರ ರಾಜ್ಯ ಸಮಿತಿಯಲ್ಲಿ 6860 ಸದಸ್ಯರಿದ್ದು, ಇವರಲ್ಲಿ ಯಾವುದೇ ಕಾರ್ಯಕರ್ತರ ಸಂಕಷ್ಟಗಳನ್ನು ರಾಜ್ಯ ಸಮಿತಿ ಗಂಭೀರವಾಗಿ ಪರಿಗಣಿಸಿ, ಅಗತ್ಯ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನ ಪ್ರಯತ್ನಗಳನ್ನು ನಡೆಸುತ್ತದೆಂದು ಸ್ಪಷ್ಟಪಡಿಸಿದರು.

ಕನಿಷ್ಟ ವೇತನಕ್ಕೆ ಆಗ್ರಹ: ವಿಕಲಚೇತನರ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಕಲಚೇತನರಿಗೆ ಪ್ರಸ್ತುತ ಗ್ರಾಮೀಣ ಮತ್ತು ನಗರ ಪುನರ್ವಸತಿ ಕಾರ್ಯಕರ್ತರಿಗೆ 9 ಸಾವಿರ ಮಾಸಿಕ ಗೌರವ ಧನವನ್ನು ನೀಡುತ್ತಿದ್ದು, ಇತ್ತೀಚೆಗೆ 1 ಸಾವಿರ ರೂ.ಗಳನ್ನು ಹೆಚ್ಚಿಸಲಾಗಿದೆ. ತಾಲೂಕು ಪುನರ್ವಸತಿ ಕಾರ್ಯಕರ್ತರಿಗೆ 15 ಸಾವಿರ ರೂ. ಗೌರವ ಧನವನ್ನು ನೀಡಲಾಗುತ್ತಿದೆ. ಇವರೆಲ್ಲರಿಗೆ ಕನಿಷ್ಟ ವೇತನವನ್ನು ನಿಗದಿಪಡಿಸಿ, ಅವರ ಸೇವೆಯನ್ನು ಖಾಯಂಗೊಳಿಸಬೇಕೆಂದು ಒತ್ತಾಯಿಸಿದರು.

ಸಂಘದ ಜಿಲ್ಲಾ ಅಧ್ಯಕ್ಷ ಕೆ.ಎ.ಮಹೇಶ್ವರ ಮಾತನಾಡಿ, ಆರೋಪಿಗಳನ್ನು ತಕ್ಷಣವೇ ಬಂಧಿಸಿ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಮುಂಭಾಗ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ರಾಜ್ಯ ಕಾರ್ಯದರ್ಶಿ ಬಿ.ಎಂ.ತಿರುಮಲೇಶ್ವರ, ಜಿಲ್ಲಾ ನಿರ್ದೇಶಕ ಎನ್.ಎಂ.ಜಯಕುಮಾರ್, ಕೆ.ಎಂ.ಹಸನ್ ಮತ್ತು ಪಿ.ಡಿ. ಹೇಮಾವತಿ ಉಪಸ್ಥಿತರಿದ್ದರು.

ಚರಂಡಿಗೆ ಬಿದ್ದು ವ್ಯಕ್ತಿ ಸಾವು

ಮಡಿಕೇರಿ: ನಗರದ ಕೈಗಾರಿಕಾ ಬಡಾವಣೆಯ ಚರಂಡಿಗೆ ಬಿದ್ದು, ವ್ಯಕ್ತಿಯೊಬ್ಬರು ಸಾವನ್ನಪ್ಪಿದ ಘಟನೆ ನಡೆದಿದೆ.

ಹೊಸ ಬಡಾವಣೆ ನಿವಾಸಿ ಬಾಬು(56) ಎಂಬವರೇ ಮೃತ ದುರ್ದೈವಿ. 10 ವರ್ಷಗಳಿಂದ ನಗರದಲ್ಲಿ ಟೀ ಮಾರುತ್ತಾ ಜೀವನ ಸಾಗಿಸುತ್ತಿದ್ದ ಬಾಬು ಬುಧವಾರ ಕೈಗಾರಿಕಾ ಬಡಾವಣೆಯಲ್ಲಿರುವ ಚರಂಡಿಗೆ ಆಯ ತಪ್ಪಿ ಬಿದ್ದು, ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನಾ ಸ್ಥಳಕ್ಕೆ ಮಡಿಕೇರಿ ನಗರ ಠಾಣಾ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.


ವಿಮಲ ನಿಧನ

ಮಡಿಕೇರಿ, ಮೇ 21– ಸಂಪಿಗೆ ಕಟ್ಟೆ ನಿವಾಸಿ ನಡುಮನೆ ಶಂಭು ಅವರ ಪತ್ನಿ ವಿಮಲ (72 ತವರು ಮನೆ–ಕೊಲ್ಯದ ಮದೆ ಗ್ರಾಮ) ಇಂದು ನಿಧನರಾದರು.



ಮೃತರು ಪತಿ, ಹಿರಿಯ ಪತ್ರಕರ್ತ ಪ್ರಸಾದ್ ಸಂಪಿಗೆ ಕಟ್ಟೆ ಸೇರಿದಂತೆ ಇಬ್ಬರು ಮಕ್ಕಳು ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಮೇ 22) ಮಡಿಕೇರಿಯ ಗೌಡ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲ್–ಅನ್ಸಾರ್ ಆಸ್ಪತ್ರೆಯಿಂದ ಕಡಿಮೆ ದರದಲ್ಲಿ ಉತ್ತಮ ಸೇವೆ



ವಿರಾಜಪೇಟೆ: ಮೈಸೂರಿನ ಅಲ್–ಅನ್ಸಾರ್ ಆಸ್ಪತ್ರೆ 12 ವರ್ಷದಿಂದಲೂ ಜನರಿಗೆ ಉತ್ತಮ ಸೇವೆ ನೀಡುತ್ತಾ ಬಂದಿದ್ದು, ಶಾಲೆ ಗಳಲ್ಲಿ ಕ್ಯಾಂಪ್ ನಡೆಸುವ ಮೂಲಕ ಜನರ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಅಲ್–ಅನ್ಸಾರ್ ಆಸ್ಪತ್ರೆಯ ಮೆಡಿಕಲ್ ಡೈರೆಕ್ಟರ್ ಡಾ, ಇಫ್ತೆಖಾರ್ ಅಹಮದ್ ಹೇಳಿದರು.

ಅಲ್–ಅನ್ಸಾರ್ ಆಸ್ಪತ್ರೆ ಪ್ರಾರಂಭಗೊಂಡು 10 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಪಟ್ಟಣದ ನುಸ್ರತುಲ್ ಉಲಂ ಮದ್ರಾಸ ಸಭಾಂಗಣದಲ್ಲಿ ಆಯೋಜಿಸಿದ್ದ ಅಲ್ಪಸಂಖ್ಯಾತರ ಗಂಡುಮಕ್ಕಳಿಗೆ ಉಚಿತ ಕಾರ್ಡ್ ವಿತರಣೆ ಹಾಗೂ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿ ಕೊರೊನಾ ಸಂದರ್ಭ ಅನೇಕರಿಗೆ ತುರ್ತು ಸೇವೆ ನೀಡಲಾಗಿತ್ತು ಎಂದರು.

ಮೈಸೂರಿನ ಕೀಲು ಮತ್ತು ಮೂಳೆ ತಜ್ಞ ಡಾ, ಫುಜೇಲ್ ಇಯಾಜ್ ಮತ್ತು ವಿರಾಜಪೇಟೆ ಸ್ನೇಹಿತರ ಒಕ್ಕೂಟದ ಡಿ.ಎ.ಏಜಾಜ್ ಅಹ್ಮದ್ ಸಭೆಯನ್ನುದ್ದೇಶಿಸಿ ಮಾತನಾಡಿದರು, ವೇದಿಕೆಯಲ್ಲಿ ಒಕ್ಕೂಟದ ಎ.ಎಸ್. ಹಬೀಬ್, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಕೆ.ಅಬ್ದುಲ್ ಜಲೀಲ್, ಶಾಫಿಜುಮ್ಮ ಮಸೀದಿಯ ಅಧ್ಯಕ್ಷ ರಶೀದ್, ಮಸಿದಿ ಆಜಮ್ ನಿಸಾರ್ ಅಹಮದ್, ಪಪಂ ಮಾಜಿ ಸದಸ್ಯ ಮುನಾವರ್, ಆಸ್ಪತ್ರೆಯ ಡಾ.ಅನೀಸ್, ರಿಯಾಜುದ್ದಿನ್ ಭಾಗವಹಿಸಿದ್ದರು.

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಕೊಡಗಿನ ಯುವಕನಿಗೆ 69ನೇ ರ‍್ಯಾಂಕ್

ಮಡಿಕೇರಿ: ಕೇಂದ್ರ ಲೋಕಸೇವಾ ಆಯೋಗ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕೊಡಗಿನ ಯುವಕ ಮೂವೇರ ಲೋಚನ್ ಬೋಪಣ್ಣ 69ನೆಯ ರ‍್ಯಾಂಕ್ ಪಡೆಯುವ ಮೂಲಕ ಅಭೂತಪೂರ್ವ ಸಾಧನೆ ತೋರಿದ್ದಾರೆ.



ಬೋಪಣ್ಣ

ಲೋಚನ್ ಬೋಪಣ್ಣ ಮೂಲತಃ ಪೇರೂರು ಬಲ್ಲಮಾವಟಿಯ ನಿವಾಸಿ ಮಡಿಕೇರಿ ದೇಚೂರುವಿನಲ್ಲಿ ನೆಲೆಸಿರುವ ಮೂವೇರ ಸುರೇಶ್ ಹಾಗೂ ಅನು ದೇಚಮ್ಮ(ತಾಮನೆ ಅರಮಣಮಾಡ) ದಂಪತಿ ಪುತ್ರರಾಗಿರುವ ಇವರು ಈ ಸ್ಪರ್ಧಾತ್ಮಕ ಪರೀಕ್ಷೆಯ 2ನೇ ಪ್ರಯತ್ನದಲ್ಲಿ ಯಶಸ್ಸು ಕಂಡಿದ್ದಾರೆ.

ಮಡಿಕೇರಿ ಕಾನ್ವೆಂಟ್, ಕೇಂದ್ರೀಯ ವಿದ್ಯಾಲಯ, ಕೊಡಗು ವಿದ್ಯಾಲಯದಲ್ಲಿ ಆರಂಭಿಕ ಶಿಕ್ಷಣ ಪೂರೈಸಿದ್ದ ಲೋಚನ್ 8ನೇ ತರಗತಿಯಿಂದ ಪಿಯುಸಿಯನ್ನು ಮೈಸೂರಿನ ರಾಮಕೃಷ್ಣ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ್ದರು. ನಂತರ ಬಿಎಸ್‌ಸಿ ಅಗ್ರಿಕಲ್ಚರಲ್ ಪದವಿಯನ್ನು ಧಾರವಾಡ ವಿಶ್ವವಿದ್ಯಾನಿಲಯದ ಮೂಲಕ ಗಳಿಸಿದ್ದರು.

ಮೈಸೂರಿನಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗದ ಸಂದರ್ಭ ಬೆಸ್ಟ್ ಔಟ್ ಸ್ಟ್ಯಾಂಡಿಂಗ್ ವಿದ್ಯಾರ್ಥಿ ಎಂಬ ಸಾಧನೆಗೂ ಪಾತ್ರವಾಗಿದ್ದ ಲೋಚನ್‌ಗೆ ಆ ಸಂದರ್ಭ ಮೆಡಿಕಲ್ ಸೀಟ್ ದೊರೆತಿತ್ತಾದರೂ ಈ ವಿಭಾಗದತ್ತ ಹೆಚ್ಚು ಆಸಕ್ತಿ ತೋರಿ ಮುಂದುವರಿದಿದ್ದು, ಇದೀಗ ಈ ಸಾಧನೆ ಮಾಡಿದ್ದಾರೆ.

ಸಿಂಧೂರ ವಿಜಯೋತ್ಸವ ಪೂರ್ವಭಾವಿ ಸಂಪರ್ಕ ಸಭೆ

ನಾಪೋಕ್ಲು, ಮೇ 21– (ದುಗ್ಗಲ) ಮಡಿಕೇರಿಯಲ್ಲಿ ಶುಕ್ರವಾರ ನಡೆಯುವ ಸಿಂಧೂರ ವಿಜಯೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಂಪರ್ಕ ಸಭೆ ಇಂದು ಭಗವತಿ ದೇವಾಲಯದ ಸಮುದಾಯ ಭವನದಲ್ಲಿ ಜರುಗಿತು.

ನಾಪೋಕ್ಲು ಗ್ರಾಮ ಪಂಚಾಯತಿ ವ್ಯಾಪ್ತಿಯ ಪೂರ್ವಭಾವಿ ಸಂಪರ್ಕ ಸಭೆಯಲ್ಲಿ ಮಾಜಿ ಶಾಸಕ ಕೆ ಜಿ ಬೋಪಯ್ಯ ಭಾಗವಹಿಸಿ, ಸಿಂಧೂರ ವಿಜಯೋತ್ಸವ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಒಗ್ಗೂಡಿಸಿ ಕಾರ್ಯಕ್ರಮದ ಯಶಸ್ವಿಗೆ ಮಾರ್ಗದರ್ಶನ ನೀಡಲಾಯಿತು.

ಕಾರ್ಯಕ್ರಮದಲ್ಲಿ ಶಿವಚಾಳಿಯಂಡ ಅಂಬಿ ಕಾರ್ಯಪ್ಪ, ಜಗದೀಶ್, ಕಂಗಂಡ ಜಾಲಿ ಪೂವಪ್ಪ, ಕನ್ನಂಬೀರ ಸುಧಿ ತಿಮ್ಮಯ್ಯ, ಪಾಡಿಯಮ್ಮಂಡ ಮನು ಮಹೇಶ್, ಚಂದ್ರ ಉಡೋತ್, ಪ್ರಕಾಶ್, ಪಟ್ರಪಂಡ ನಿರನ್, ಚೋಕಿರ ಸಜಿತ್, ಅರೆಯಡ ನಂದ, ರವಿ ಮಕ್ಕಿ, ಉದಯ ಶಂಕರ್ ಇನ್ನಿತರರು ಭಾಗವಹಿಸಿದ್ದರು.



ರಸ್ತೆ ಒತ್ತುವರಿ ತೆರವುಗೊಳಿಸುತ್ತಿಲ್ಲ, ಇ ಸ್ವತ್ತು ನೀಡದೆ ಅಲೆಸಲಾಗುತ್ತಿದೆ

ಲೋಕಾಯುಕ್ತರಿಗೆ ಲಿಖಿತ ದೂರುಗಳ ಸಲ್ಲಿಕೆ



ಪ್ರವಾಸಿ ಮಂದಿರದಲ್ಲಿ ಲೋಕಾಯುಕ್ತ ಅಧಿಕಾರಿಗಳಿಗೆ ಹಲವು ಮುಖಂಡರು ಲಿಖಿತ ದೂರು ಸಲ್ಲಿಸಿದರು

ಕೊಳ್ಳೇಗಾಲ, ಮೇ 21– ತಾಲೂಕಿನಲ್ಲಿ ಸಮಸ್ಯೆಗಳಿಗೆ ಸ್ಪಂದಿಸದೆ ಅಧಿಕಾರಿಗಳ ಅಸಹಕಾರ, ಭರವಸೆ ಕೊಟ್ಟು ಕೆಲಸ ಮಾಡಿಕೊಡದ ಅಲೆದಾಡಿಸುತ್ತಿರುವ ನೌಕರರು, ಬಡ್ಡಿ ಹಣ ನೀಡದೆ ಸತಾಯಿಸುತ್ತಿರುವ ಸಹಕಾರ ಸಂಘ ಹೀಗೆ ಲೋಕಾಯುಕ್ತ ಅಧಿಕಾರಿಗಳ ಮುಂದೆ ಸಮಸ್ಯೆಗಳ ದರ್ಶನವೇ ಆಯಿತು. ಜಿಲ್ಲಾ ಲೋಕಯುಕ್ತ ಪೊಲೀಸ್ ಉಪಾಧೀಕ್ಷಕ ಜಿ.ಎಸ್.ಗಜೇಂದ್ರ ಪ್ರಸಾದ್ ಮತ್ತು ಸಿಬ್ಬಂದಿಗಳು ಬುಧವಾರ ಸಾರ್ವಜನಿಕರಿಂದ ಲಿಖಿತ ದೂರುಗಳನ್ನು ಸ್ವೀಕರಿಸಿ ಸಮಸ್ಯೆಗಳನ್ನು ಆಲಿಸಿ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ದೂರು ಪ್ರತಿ ಸಲ್ಲಿಸಿ ಮುಂದಿನ ಕ್ರಮಕೈಗೊಂಡು ನ್ಯಾಯಸಲ್ಲಿಸುವುದಾಗಿ ದೂರುದಾರರಿಗೆ ಭರವಸೆ ನೀಡಿದರು

ಮುಡಿಗುಂಡ ಕೃಷಿ ಪತ್ತಿನ ಸಹಕಾರದಲ್ಲಿ 20ಕ್ಕೂ ಅಧಿಕಮಂದಿ ಇಟ್ಟಿರುವ ಲಕ್ಷಾಂತರ ಠೇವಣಿ ಹಣ ವಾಪಸ್ಸು ನೀಡುತ್ತಿಲ್ಲ, ಸಕಾಲದಲ್ಲಿ ಬಡ್ಡಿ ಹಣವನ್ನು ಪಾವತಿಸುತ್ತಿಲ್ಲ, ಈ ಸಂಬಂಧ ಹಿರಿಯ ಸಹಕಾರಿ ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ ಎಂದು ಲಿಂಗರಾಜಮ್ಮ, ಶಾಂತಮ್ಮ, ಮುನಿಯಮ್ಮ ಸೇರಿದಂತೆ ಲಿಖಿತ ದೂರು ಸಲ್ಲಿಸಿದರು

ಲಿಂಗಣಾಪುರದ ಇ ಸ್ವತ್ತು ಮಾಡಿಕೊಡದೆ ನಗರ ಸಭೆ ಅಧಿಕಾರಿಗಳು ಸತಾಯಿಸುತ್ತಿದ್ದು ಈ ಸಂಬಂಧ 2 ವರ್ಷಗಳಿಂದಲೂ ಅಲೆಸುತ್ತಿದ್ದು, ಈಸಂಬಂಧ ನನಗೆ ನ್ಯಾಯ ದೊರಕಿಸಿಕೊಡಬೇಕು ಎಂದು ದಾಕ್ಷಾಯಿಣಿ ಎಂಬುವರು ದೂರು ಸಲ್ಲಿಸಿದರು.

ನಗರಸಭಾಧಿಕಾರಿಗಳು ಅಂಬೇಡ್ಕರ್ ರಸ್ತೆ ತೆರವು ಮಾಡುವುದಾಗಿ ಅಳತೆ ಮಾಡಿಸಿ ಅತಿಕ್ರಮ ತೆರವಿಗೆ ಮುಂದಾಗದೆ ಒತ್ತುವರಿದಾರರೊಂದಿಗೆ ಶಾಮೀಲಾಗಿದ್ದು ಈಸಂಬಂಧ ಕ್ರಮ ವಹಿಸಬೇಕು ಎಂದು ರೈತ ಮುಖಂಡರುಗಳಾದ ಅಣಗಳ್ಳಿ ದಶರಥ್, ರಾಮಕೃಷ್ಣ ದೂರಿದರು.


ಈ ಸಂದರ್ಭದಲ್ಲಿ ಚಾ.ನಗರ ಲೋಕಯುಕ್ತ ಇನ್ಸ್‌ಪೆಕ್ಟರ್ ಎಂ.ಕೆ. ಲೋಹಿತ್ ಕುಮಾರ್, ಶಶಿ ಕುಮಾರ್, ಸಿಬ್ಬಂದಿಗಳಾದ ಮಹಾಲಿಂಗಸ್ವಾಮಿ, ಶ್ರೀನಿವಾಸ್, ಗೌತಮ್, ಶಾಂತರಾಜು, ಕುಮಾರ ಆರಾಧ್ಯ, ಇಸಾಕ್, ನಾಗೇಂದ್ರ ಇನ್ನಿತರಿದ್ದರು.

ಸರ್ಕಾರಿ ವಸತಿ ಶಾಲೆಗಳ ಸದುಪಯೋಗಕ್ಕೆ ಶಾಸಕರ ಕರೆ

ಗುಂಡ್ಲುಪೇಟೆ, ಮೇ 21 (ಸೋಮ್.ಜಿ) ಬುಡಕಟ್ಟು ಹಾಗೂ ಗಿರಿಜನರ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಸರ್ಕಾರ ವಸತಿ ಶಾಲೆಯನ್ನು ನಿರ್ಮಿಸಿದ್ದು ಪಾಲಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ತಾಲೂಕಿನ ನಾಗಾಪಟ್ಟಣ ಕಾಲೋನಿಯಲ್ಲಿ ಪರಿಶಿಷ್ಟವರ್ಗಗಳ ಕಲ್ಯಾಣ ಇಲಾಖೆ ನಿರ್ಮಿಸಿದ ಆದಿವಾಸಿ ಬುಡಕಟ್ಟು ಜನಾಂಗದ ಮಕ್ಕಳ ಆಶ್ರಮ ಶಾಲೆಯನ್ನು ಉದ್ಘಾಟಿಸಿ ಮಾತನಾಡಿ ಕಾಡಂಚಿನ ಹಾಡಿ ಪೋಡುಗಳಲ್ಲಿ ನೆಲೆಸಿರುವ ಬುಡಕಟ್ಟು ಹಾಗೂ ಗಿರಿಜನರ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕುವಂತೆ ಮಾಡಲು ಸರ್ಕಾರ ವಸತಿ ಶಾಲೆ ನಿರ್ಮಿಸಿದ್ದು ಹೆಚ್ಚಿನ ಮಕ್ಕಳು ಉತ್ತಮ ಶಿಕ್ಷಣ ಪಡೆದುಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಪರಿಶಿಷ್ಟವರ್ಗಗಳ ಕಲ್ಯಾಣಾಧಿಕಾರಿ ಎಚ್.ಎಸ್. ಬಿಂದ್ಯಾ ಮಾತನಾಡಿ, ಕಾಡಂಚಿನ ಹಾಡಿ ಪೋಡುಗಳ ಮಕ್ಕಳಿಗೆ ಶಾಲೆ ತೆರೆದು ಶಿಕ್ಷಣ ದೊರಕು ವಂತೆ ಮಾಡುವುದು ಕಷ್ಟವಾಗಿದ್ದರಿಂದ ಅರಣ್ಯ ವಾಸಿಗಳ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕುವಂತೆ ಮಾಡಲು ಸರ್ಕಾರ ಸುಸಜ್ಜಿತ ಕಟ್ಟಡದಲ್ಲಿ ಆಶ್ರಮ ಶಾಲೆಗಳನ್ನು ತೆರೆದಿದೆ. ಈ ಶಾಲೆಯಲ್ಲಿ ಒಂದರಿಂದ ಏಳನೇ ತರಗತಿವರೆಗೆ ಶಿಕ್ಷಣ ಜತೆಗೆ ವಸತಿ ಸೌಲಭ್ಯವಿದ್ದು ಬುಡಕಟ್ಟು ಹಾಗೂ ಗಿರಿಜನರು ತಮ್ಮ ಮಕ್ಕಳನ್ನು ಇಲ್ಲಿಗೆ ದಾಖಲಿಸುವ ಮೂಲಕ ಉತ್ತಮ ಶಿಕ್ಷಣ ದೊರಕಿಸಬೇಕು ಎಂದು ಕೋರಿದರು.



ನಾಗಾಪಟ್ಟಣ ಕಾಲೋನಿಯಲ್ಲಿ ಬುಡಕಟ್ಟು ಜನಾಂಗದ ಮಕ್ಕಳ ಆಶ್ರಮ ಶಾಲೆಯನ್ನು ಉದ್ಘಾಟಿಸಿದರು.

ತಾಲೂಕು ಸಮಾಜ ಕಲ್ಯಾಣಾಧಿಕಾರಿ ಮೋಹನ್ ಕುಮಾರ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕೆ.ಎಸ್.ಮಹೇಶ್, ತಾಲೂಕು ಪಂಚಾಯಿತಿ ಮಾಜಿ ಸದಸ್ಯೆ ಕಲಾವತಿ, ಮುಖಂಡರಾದ ಸ್ವಾಮಿ, ಮನು. ಲಿಂಗಪ್ಪ, ಮುದ್ದಯ್ಯ ಹಾಗೂ ಇತರರು ಇದ್ದರು.

ತಾಲೂಕಿನ ನಾಗಾಪಟ್ಟಣ ಕಾಲೋನಿಯಲ್ಲಿ ಪರಿಶಿಷ್ಟವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ನಿರ್ಮಿಸಿದ ಆದಿವಾಸಿ ಬುಡಕಟ್ಟು ಜನಾಂಗದ ಮಕ್ಕಳ ಆಶ್ರಮ ಶಾಲೆಯನ್ನು ಹೆಚ್.ಎಂ.ಗಣೇಶ್ ಪ್ರಸಾದ್ ಉದ್ಘಾಟಿಸಿದರು. ಎಚ್.ಎಸ್.ಬಿಂದ್ಯಾ, ಮೋಹನ್ ಕುಮಾರ್, ಕೆ.ಎಸ್.ಮಹೇಶ್, ಪ್ರಭಾವತಿ, ಮುದ್ದಯ್ಯ ಇದ್ದರು.

ಹಾವು ಕಚ್ಚಿ ಯುವಕ ಸಾವು

ಬೇಗೂರು: ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭ ಹಾವು ಕಚ್ಚಿ ವ್ಯಕ್ತಿಯೋರ್ವ ಮೃತಪಟ್ಟ ಘಟನೆ ತಾಲೂಕಿನ ಹಸಗೂಲಿ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಹಸಗೂಲಿ ಗ್ರಾಮದ ಉಮೇಶ್ (37) ಮೃತಪಟ್ಟವರು. ಈತ ಜಮೀನಿನಲ್ಲಿ ಕೆಲಸ ಮಾಡುತಿದ್ದ ವೇಳೆ ಹಾವು ಕಚ್ಚಿದೆ. ತಕ್ಷಣ ಆಸ್ಪತ್ರೆಗೆ ಕರೆದುಕೊಂಡು ಹೋಗುವಷ್ಟರಲ್ಲೇ ವಿಷ ದೇಹದ ತುಂಬೆಲ್ಲಾ ಹರಡಿದ್ದು, ಪರೀಕ್ಷಿಸಿದ ವೈದ್ಯರು ಸಾವನ್ನಪ್ಪಿದ್ದಾನೆ ಎಂದು ಧೃಡಪಡಿಸಿದರು.

ಬೆಳೆ ನಷ್ಟಕ್ಕೆ ಪರಿಹಾರ ನೀಡಲು ರೈತರ ಮನವಿ



ಬೆಳೆ ಪರಿಹಾರಕ್ಕೆ ಒತ್ತಾಯಿಸಿ ರೈತ ಸಂಘಟನೆಗಳ ಒಕ್ಕೂಟ, ಅರಣ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿತು.

ಕೊಳ್ಳೇಗಾಲ: ತಾಲೂಕಿನ ದೊಡ್ಡಿಂದುವಾಡಿ ಹೊರವಲಯದ ಗುಂಡಾಲ್ ವ್ಯಾಪ್ತಿಯ ಜಮೀನುಗಳಲ್ಲಿ ರಾತ್ರಿ ಕಾಡುಹಂದಿಗಳಿಂದ ಅಧಿಕ ಬೆಳೆ ನಷ್ಟ ಉಂಟಾಗಿರುವ ಹಿನ್ನೆಲೆ ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕಬ್ಬು ಬೆಳೆಗಾರರ ಸಂಘ ಅರಣ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿತು.

ದೊಡ್ಡಿಂದುವಾಡಿ ಗ್ರಾಮದ ರೈತರು ಮಾದೇಶ್ ಎನ್ನುವರು 2 ಎಕರೆ ಜಮೀನ ಭತ್ತದ ಫಸಲು, ಆರ್.ವೆಂಕಟೇಶ್ ಎನ್ನುವರ 5 ಎಕರೆ ಜಮೀನಿನಲ್ಲಿ ಬೆಳೆಯಲಾಗಿದ್ದ ಮುಸುಕಿನ ಜೋಳದ ಫಸಲು ಕಾಡು ಪ್ರಾಣಿಗಳು ನಾಶ ಮಾಡಿದ ಹಿನ್ನೆಲೆ ನಷ್ಟ ಉಂಟಾಗಿದೆ ಕಳೆದ ಹತ್ತು ವರ್ಷಗಳಿಂದ ಗುಂಡಾಲ್ ಜಲಾಶಯ ವ್ಯಾಪ್ತಿಯ ರೈತರ ಜಮೀನಿನಲ್ಲಿ ಬೆಳೆಗಳ ಮೇಲೆ ಆಗಾಗ್ಗೆ ಕಾಡುಪ್ರಾಣಿಗಳ ಹಾವಳಿ ನಡೆಸಿ ಬೆಳೆ ಹಾನಿ ಮಾಡುತ್ತಲೆ ಇರುವುದು ಅರಣ್ಯಾಧಿಕಾರಿಗಳಿಗೆ ತಿಳಿದ ವಿಚಾರವೇ ಆಗಿದೆ. ಹೀಗಿದ್ದರೂ ಸಹ ಕಾಡು ಪ್ರಾಣಿಗಳ ಹಾವಳಿ ತಡೆಯಲು ಇಲಾಖೆಯ ಯಾವ ಅಧಿಕಾರಿಗಳು ಕ್ರಮ ಜರುಗಿಸುತ್ತಿಲ್ಲ. ಆದ್ದರಿಂದ ಕೂಡಲೇ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ನಷ್ಟವಾಗಿರುವ ಬೆಳೆಗೆ ಸೂಕ್ತ ಪರಿಹಾರ ಒದಗಿಸಬೇಕು. ಹಾಗೂ ಕಾಡುಪ್ರಾಣಿ ಹಾವಳಿಯನ್ನು ನಿಯಂತ್ರಿಸಬೇಕು, ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರಹೋರಾಟ ನಡೆಸಬೇಕಾಗುತ್ತದೆ ಎಂದು ಮನವಿ ವೇಳೆ ಸಂಘದ ಅಧ್ಯಕ್ಷ ಮಾದೇಶ್, ಕಾರ್ಯದರ್ಶಿ ವೆಂಕಟೇಶ್. ಬಲನಿಂಗಶೆಟ್ಟಿ, ಶ್ರೀನಿವಾಸ್, ಮಾದೇಶ್, ರಾಚಪ್ಪ, ದಿಲೀಪ್ ಕುಮಾರ್ ಇನ್ನಿತರರು ಇದ್ದರು.

ಶಿಕ್ಷಣದಿಂದ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ: ರವಿಕುಮಾರ್

ಚಾಮರಾಜನಗರ: ಶಿಕ್ಷಣದಿಂದ ವಿದ್ಯಾರ್ಥಿಗಳು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಕಠಿಣ ಪರಿಶ್ರಮ ಹೊಂದಬೇಕು ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಕೆ. ರವಿಕುಮಾರ್ ತಿಳಿಸಿದರು.

ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಸಿಬಿಎಸ್‌ಇ ಪರೀಕ್ಷೆಯಲ್ಲಿ 580 ಅಂಕಗಳನ್ನು ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಎನ್.ಹರ್ಷಿತಾರನ್ನು ಸನ್ಮಾನಿಸಿ ಮಾತನಾಡಿದ ಅವರು, ವಿದ್ಯೆ ಸಾಧಕನ ಸ್ವತ್ತೇ ಹೊರತು ಸೋಮಾರಿಗಳ ಸ್ವತ್ತಲ್ಲ. ಹೀಗಾಗಿ ಓದುವ ಹಾಗೂ ಸಾಧಿಸುವ ಛಲ ಇದ್ದರೆ ಜೀವನದಲ್ಲಿ ಗುರಿ ಸಾಧಿಸಲು ಸಾಧ್ಯವಿದೆ. ಹರ್ಷಿತಾಳಿಗೆ ಉತ್ತಮ ಭವಿಷ್ಯವಿದ್ದು, ಮುಂದಿನ ದಿನಗಳಲ್ಲಿ ಉನ್ನತ ಸ್ಥಾನವನ್ನು ಗಳಿಸುವ ದಿಕ್ಕಿನಲ್ಲಿ ಪಯಣ ಬೆಳೆಯಲಿ ಎಂದು ಹಾರೈಸಿದರು. ಹರ್ಷಿತಾಳಂಥ ಸಾಧಕರು ನಿಮ್ಮೆಲ್ಲರಿಗೂ ರೋಲ್ ಮಾಡಲ್ ಆಗಬೇಕು. ಸಿನಿಮಾ ನಟರನ್ನು ಇನ್ನಾವುದೋ ಕ್ಷೇತ್ರದಲ್ಲಿರುವವರನ್ನು ಅನುಸರಿಸುವ ಬದಲು ನಮ್ಮೊಂದಿಗೆ ಇದ್ದು, ಸಾಧನೆ ಮಾಡುವ ಹರ್ಷಿತಾ ಅಂಥವರು ಮಾದರಿಯಾಗಬೇಕು. ಅವರಂತೆ ನಾನು ಸಹ ಸಾಧನೆ ಮಾಡಬೇಕು ಎಂಬ ಛಲ ನಿಮ್ಮಲ್ಲಿ ಮೂಡಬೇಕು. ಹೀಗಾಗಿ ನಿಮ್ಮೆಲ್ಲರ ಉಪಸ್ಥಿತಿಯಲ್ಲಿ ಹರ್ಷಿತಾಳನ್ನು ಅಭಿನಂದಿಸುತ್ತೇವೆ ಎಂದು ಅವರು ತಿಳಿಸಿದರು.

ಜೆಎಸ್‌ಎಸ್ ಸಾರ್ವಜನಿಕ ಸಂಪರ್ಕಾಧಿಕಾರಿ ಆರ್.ಎಂ.ಸ್ವಾಮಿ ಮಾತನಾಡಿ, ವಿದ್ಯಾರ್ಥಿಗಳಿಗೆ ಉತ್ತಮ ಕಲಿಕೆ ವಾತಾವರಣ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಪೋಷಕರು ಮುಂದಾಗಬೇಕು. ಶಿಕ್ಷಣದಿಂದ ಬದುಕು ಬದಲಾಯಿಸಿಕೊಳ್ಳಲು ಸಾಧ್ಯವಿದೆ. ಹರ್ಷಿತಾಳ ಭವಿಷ್ಯ ಉಜ್ವಲವಾಗಲಿ ಎಂದರು. ಮಹಿಳಾ ಪದವಿ ಕಾಲೇಜಿನ ಪ್ರಾಂಶುಪಾಲ ಮಹದೇವಸ್ವಾಮಿ ಮಾತನಾಡಿದರು. ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಎಚ್.ಎಂ. ಉಮೇಶ್ ಅಧ್ಯಕ್ಷತೆ ವಹಿಸಿದ್ದರು,



ಎಸ್‌ಎಸ್‌ಎಲ್‌ಸಿ ಸಿಬಿಎಸ್‌ಇ ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಎನ್. ಹರ್ಷಿತಾರನ್ನು ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಕೆ. ರವಿಕುಮಾರ್ ಅಭಿನಂದಿಸಿದರು.

ಸನ್ಮಾನ ಸ್ವೀಕರಿಸಿದ ವಿದ್ಯಾರ್ಥಿನಿ ಎನ್. ಹರ್ಷಿತಾ ಮಾತನಾಡಿ, ಅಂದಿನ ಪಾಠವನ್ನು ಅಂದೇ ಓದುವ ಜೊತೆಗೆ ಬಿಡುವಿನ ವೇಳೆಯಲ್ಲಿ ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಓದುವುದು ಬಹಳ ಮುಖ್ಯ. ಮೊಬೈಲ್‌ನಿಂದ ದೂರವಿದ್ದು, ಓದಿನ ಕಡೆ ಹೆಚ್ಚು ನಿಗಾ ವಹಿಸಿದ ಪರಿಣಾಮ ನನಗೆ ಸಾಧನೆ ಮಾಡಲು ಸಾಧ್ಯವಾಯಿತು ಎಂದು ತನ್ನ ಅನುಭವನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯ ಪೋಷಕರಾದ ಎನ್. ನಾಗೇಂದ್ರ, ನಳಿನನಾಗೇಂದ್ರ, ಶಿಕ್ಷಕರಾದ ದೇವಕಿ, ಸೌಮ್ಯ, ವಿನುತಾ, ಉಷಾ ಸಹ ಶಿಕ್ಷಕ ವೃಂದವರು ಉಪಸ್ಥಿತರಿದ್ದರು.

ವ್ಯಕ್ತಿಗಳಿಬ್ಬರ ನಾಪತ್ತೆ

ಚಾಮರಾಜನಗರ: ಯಳಂದೂರು ತಾಲೂಕಿನ ಬಿಳಿಗಿರಿರಂಗನ ಬೆಟ್ಟದ ಮುತ್ತುಗದಪೋಡು ಗ್ರಾಮದ ನಿವಾಸಿ ಪ್ರೇಮ ಎಂಬ ಯುವತಿ ಕಾಣೆಯಾಗಿದ್ದು, ಇವರ ಪತ್ತೆಗೆ ಸಹಕರಿಸುವಂತೆ ಕೋರಲಾಗಿದೆ.



19 ವರ್ಷದ ಪ್ರೇಮ, 5 ಅಡಿ ಎತ್ತರ, ಎಣ್ಣೆಗೆಂಪು ಮೈಬಣ್ಣ, ದುಂಡು ಮುಖ, ಸಾಧಾರಣ ಮೈಕಟ್ಟು ಹೊಂದಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ಹಸಿರು ಬಣ್ಣದ ಟಾಪ್ ಮತ್ತು ಹಸಿರು ಬಣ್ಣದ ಪ್ಯಾಂಟ್ ಧರಿಸಿದ್ದರು.

ಸುಳಿವು ದೊರೆತಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರು ದೂ.ಸಂ.08226–222243, ಪೂರ್ವ ಪೊಲೀಸ್ ಠಾಣೆ ದೂ.ಸಂ.08226–222058, ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ 08226–222383, ಪೂರ್ವ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಮೊ.ಸಂ 9480804648 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಪುರುಷ: ತಾಲೂಕಿನ ದೇವಲಾಪುರ ಗ್ರಾಮದ ನಿವಾಸಿ ಸುರೇಶ ಎಂಬುವವರು ಕಾಣೆಯಾಗಿದ್ದಾರೆ. 35 ವರ್ಷದ ಸುರೇಶ, 5.5 ಅಡಿ ಎತ್ತರ, ಎಣ್ಣೆಗೆಂಪು ಮೈಬಣ್ಣ, ದುಂಡುಮುಖ, ದೃಢವಾದ ಮೈಕಟ್ಟು ಹೊಂದಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ಕಪ್ಪು ಬಣ್ಣದ ಪ್ಯಾಂಟ್, ನೀಲಿ ಬಿಳಿ ಚೆಕ್ಸ್ ಶರ್ಟ್ ಧರಿಸಿದ್ದರು. ಸುಳಿವು ದೊರೆತಲ್ಲಿ ತೆರಕಣಾಂಬಿ ಪೊಲೀಸ್ ಠಾಣೆ ಮೊ.ಸಂ 9480804652, ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ 08226–222383 ಸಂಪರ್ಕಿಸುವಂತೆ ತೆರಕಣಾಂಬಿ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ
0821–
2496522/23

WANTED
1. Graphic designer (fresher or experienced)
2. Tata ace driver
3. Helper boys
4. Ctp machine operator
9448067939 | 9739569260

SITE FOR SALE
30x60 E/F
BEML 3rd Stage
JP nagara
Ready for construction
7676830832

DTCP SITES FOR SALE
ಹುಣಸೂರಿನ ಕೋಟೆ ರಸ್ತೆಯ "VCR ದೇವಗಿರಿ" ಬಡಾವಣೆ ನಿವೇಶನಗಳು ಮಾರಾಟಕ್ಕಿವೆ.
9886048471, 9036291192

ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆಯ ರೈತ ಬಾಂಧವರಿಗೆ ಒಂದು ಸದಾವಕಾಶ
ತೆಂಗು ಸಸಿಗಳನ್ನು ಬೆಳೆಸಿಕೊಡುವವರಿಗೆ ನಾವು ಬ್ಯಾಂಕಿನ ಸಾಲ ಸೌಲಭ್ಯ ಒದಗಿಸಿ ಸಸಿಗಳನ್ನು ಮಾರಾಟ ಮಾಡಿಕೊಡಲಾಗುವುದು. ಕೂಡಲೇ ಸಂಪರ್ಕಿಸಿ:
Mob: 9448022967

Industrial Shed for Rent
3000 sq.ft. (Near Preethi Granite), JCK Indl. Park, Mysuru.
Mob: 9902612182

HOUSE FOR SALE
Vijayanagar 3rd Stage (East Face) Ground Floor, Parking & Office Space
1st Floor - 2BHK Home
2nd Floor - Duplex 3BHK House
B-Register Available
9972268624
9844401228

WANTED
Female - 5 Nos.
For Office Work & Telecalling Work
Qualification: Any Degree Pass or Fail
Call: 8147034927

NEW HOUSE FOR SALE 72 LAKS
20X30 Ground & First Floor House for Sale fully Furnished House Near Rastrothana School Abyudaya layout Sri Nagara 'D' Block, J.P.Nagar, Mysuru
9008380934
7892381659

CORNER COMMERCIAL SHOP FOR RENT
Size : 8ft x5ft
Address: No 79, Sahukar Chennaiah Road, 4th Stage, T.K Layout, Saraswathipuram, Landmark: Maruthi Temple, Mysore
9448322719

Admission Open
Govt. of Karnataka, Dept. of Tourism
Food Craft Institute - Mysuru
Exhibition Ground, Ittigegud
Hotel Management
10% job placements / Govt. College / 80% Practical classes
www.fcimysuru.com
Mob: 6362018821

Properties for Sale
1) 820 sq.ft. commercial for Clinic, Office in Saraswathipuram @ 55 Lakhs.
2) 2 acres farm land 26 kms from Mysuru near Ooty NH. @ 42 Lakhs / acre.
Mob: 6366384851

SKANDA PROPERTIES
JOB VACANCY
Post: Marketing Manager
Gender: Female. Exp: Min. 2 years in Construction Industry.
skandapropertiesmys@gmail.com
Mob: 9379888558

HOUSE FOR LEASE
25x35, (1) Ground floor 2 BHK, Duplex. (2) First Floor 1 BHK. Gayathripuram 2nd Stage, Mysore.
Contact: Nazeema
Mob: 7338484382
Brokers are welcome

Electrical Work
ಎಲ್ಲಾ ರೀತಿಯ ಎಲೆಕ್ಟ್ರಿಕಲ್ ಕೆಲಸವನ್ನು ಜೊತೆಗೆ ಇಂಡಸ್ಟ್ರಿಯಲ್ ಪ್ಯಾನೆಲ್ ಬೋರ್ಡ್ ರಿಪೇರಿ ಕೆಲಸ ಸಹ ಮಾಡಿಕೊಡಲಾಗುವುದು.
Mob: 8088006558

ಬೇಕಾಗಿದ್ದಾರೆ
ಮೆಡಿಕಲ್ ಸ್ಟೋರ್‌ಗಳಲ್ಲಿ ಕೆಲಸ ಮಾಡಿ ಅನುಭವ ಇರುವ ಹುಡುಗರು, Sales Man ಕೆಲಸಕ್ಕೆ ಬೇಕಾಗಿದ್ದಾರೆ.
Full time / Part time
8310848018

ಪ್ರಣತಿ ವಿದ್ಯಾ ಸಂಸ್ಥೆ
ಕ್ಯಾತನಹಳ್ಳಿ, ಹಂಪಾಪುರ ಹೋಬಳಿ, ಹೆಚ್.ಡಿ.ಕೋಟೆ ತಾಲ್ಲೂಕು
ಶಿಕ್ಷಕರು ಬೇಕಾಗಿದ್ದಾರೆ
NST, D.Ed, BA, BSc, BEd, CPEd or BPEd,
9113269611
9964253209

ಬಾಡಿಗೆಗಾಗಿ
2100sqft
1&2ನೇ ಮಹಡಿ
ವಾಣಿಜ್ಯ ಮಳಿಗೆ
ನಂಜುಮಳಿಗೆ ಹತ್ತಿರ, ಮಧ್ವಾಚಾರ್ ರಸ್ತೆ, ಮುತ್ತೂಟ್ ಮನಿ
ಕೆ.ಆರ್.ಮೊಹಲ್ಲಾ, ಮೈಸೂರು
9448787351

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬಸವಮಾರ್ಗ ವ್ಯಸನಮುಕ್ತ ದೇವಸ್ಥಾನ
10 ದಿನಗಳ ಸಂಪೂರ್ಣ ಉಚಿತ ಕುಡಿತ ಬಿಡಿಸುವ ಶಿಬಿರ ಜೂ.1 ರಿಂದ 10ರ ವರೆಗೆ
88033-44999
97429-19191

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

ಸುವರ್ಣಯಾತ್ರಾ
7 ದಿನಗಳ ಕಾಶಿ, ಬಾಬಾ ವೈದ್ಯನಾಥ, ನೈಮಿಷಾರಣ್ಯ, ಅಯೋಧ್ಯಾ ಪ್ರವಾಸ 23/6/25.
10 ದಿನಗಳ ಅಯೋಧ್ಯಾ, ಗೋರಕ್‌ಪುರ, ಚಿತ್ವಾನ್, ಪೋಕ್ರ, ಮುಕ್ತಿನಾಥ, ಮನೋಕಾಮನ, ಕಠ್ಮಂಡು ಜನಕಪುರ ಪ್ರವಾಸ 18/6/25 ಎಲ್ಲಾ ರೀತಿಯ ಶುಲ್ಕಗಳು ಒಳಗೊಂಡಿರುತ್ತವೆ.
8660233673
9019462508

ಮನೆ ಮಾರಾಟಕ್ಕಿದೆ
New 40x63 GF 3BHK Teak & Granite, Parking Harividyalaya-Christ School Road, Bogadi-Mysore
9482883566

Mysore Diagnostic Centre Pvt Ltd
WANTED
Reception Staff with Computer Knowledge.
Staff Nurse
9243781906

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

GHANASHREE ENTERPRISES
Shell, Najangud - Ooti Road
REQUIRED MEN/ WOMEN STAFF
FOR SHELL PETROL BUNK
Attractive Salary ESI/PF, Food Facilities and Room Services
FOR MORE DETAILS PLEASE CONTACT
8248380195 / 8088446601



ಸ್ಕೂಲ್ ಯೂನಿಫಾರಂ ಹೋಲ್‌ಸೇಲ್ ಬೆಲೆಯಲ್ಲಿ
ಸದ್ವಿದ್ಯ, ಅಮೃತಮಯಿ ನಟರಾಜ ಕಾನ್ವೆಂಟ್ ನಳಂದ, ಮರಿಮಲ್ಲಪ್ಪ ಅವಿಲ, ರೋಟರಿವೆಸ್ಟ್ ಆದರ್ಶ, ಸೇಂಟ್‌ಮೇರೀಸ್ ಸೇಂಟ್ ರೋಸೆಲೋ
ಭಾವಸಾರ್ **ಶ್ರೀಗಣೇಶ್**
ಅಗ್ರಹಾರ, ಬಸವೇಶ್ವರ ರಸ್ತೆ 5ನೇ ಕ್ರಾಸ್, ಮೈಸೂರು

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7996497954

ಅನುಬಂಧ ಮ್ಯಾರೇಜಸ್
ವಧು-ವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆಮಾಡಿ
63617 40552
94494 08551

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ತಮಿಳುನಾಡು ಯಾತ್ರೆ
9 ನವಗ್ರಹಗಳು, ಕನ್ಯಾಕುಮಾರಿ ರಾಮೇಶ್ವರಂ, ಮಧುರೈ ಸೇರಿದಂತೆ ಇನ್ನೂ ಹಲವಾರು ಸ್ಥಳಗಳು 4 ದಿನ ಪ್ರವಾಸ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
8151952944

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ Rs. 9,000 (24 CT)
Mob: 9108146123

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

WANTED
1. Helpers, 2. ITI fitters, turners, mechatronics, 3. Office Accountants (Bcom Graduates with tally skills
Address: - Mystech Machines
#Q113, 4th Cross, 8th Main, Hebbal Industrial Estate, Mysore - 570016
Email: - mystechmachines@gmail.com
0821-2582668
7204445679

SITE FOR SALE
ಮುಡಾ ಅನುಮೋದಿತ ಇ-ಖಾತೆಯನ್ನು ಹೊಂದಿರುವ 30x50 ಅಳತೆಯ ಪೂರ್ವದಿಕ್ಕಿನ ನಿವೇಶನ ಟಿ.ಎಸ್.ಕೆ. ಲೇಔಟ್‌ನಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ: ಮಧ್ಯಾಹ್ನ 2 ಗಂಟೆ ನಂತರ.
ಬೆಲೆ : 4250/– ಚದರ ಅಡಿಗೆ
9632902447
9844297108

House For Sale
20/40 EAST
Ground 2 BHK + 1st floor Room
MUDA with Clear Documents
Own Borewell & Vastu
Police layout 2nd Stage
9380284276

ಬೇಕಾಗಿದ್ದಾರೆ
ಸ್ಕೂಟರ್‌ನಲ್ಲಿ ಆಹಾರ ಪದಾರ್ಥಗಳನ್ನು ಮನೆ ಮನೆಗೂ ಡೆಲಿವರಿ ಕೊಡಲು DL ಉಳ್ಳ ಹುಡುಗರು ಬೇಕಾಗಿದ್ದಾರೆ. ಸಂಬಳ: 15000
ಇಚ್ಛೆ ಉಳ್ಳವರು ಸಂಪರ್ಕಿಸಿ
ನಜರ್‌ಬಾದ್, ಮೈಸೂರು
9739816440

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9008711654

ಉದ್ಯೋಗ ಅವಕಾಶ
ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/ PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 - 86000.
Mob: 7892046990

PRAKRUTHI PROPERTIES
FOR SALE
30x40 @ 20 lakhs
Near RT Nagar
Including Registration
30x40 MUDA Approved Sites@ KHB Kenchalgud
Residential & Commercial Plots in & around Mysore
20x30 New 2BHK House, As Per your Plan With Interiors @ Just 37 Lakh in Bogadi Including Registration
95386 90359, 90359 90359

ಬೇಕಾಗಿದ್ದಾರೆ
ಮೈಸೂರಿನ ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ ಬೆಳಿಗ್ಗೆ 7 ಗಂಟೆಯಿಂದ ಸಂಜೆ 7 ಗಂಟೆವರೆಗೆ 12 ಗಂಟೆ ಕೆಲಸ (ಹಗಲು ಮಾತ್ರ) ವಿದ್ಯಾವಂತ 55 ವರ್ಷ ಒಳಗಿನ ಪುರುಷ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
ವೇತನ ತಿಂಗಳಿಗೆ 15,000/–ಗಳು ಸಂಪರ್ಕಿಸಿ:
9731259328

ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ
DEd-02
Spoken English-02
BSc, BEd - 02
PET Teachers-01
8147472526
9845116462



Solar Water Heater
SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಲೇಡಿ ಆಫೀಸ್ ಅಸಿಸ್ಟೆಂಟ್
ಪಿಯುಸಿ / ಯಾವುದೇ ಪದವಿ
ಬೇಸಿಕ್ ಕಂಪ್ಯೂಟರ್ ಜ್ಞಾನ ತಿಳಿದಿರಬೇಕು
ಶಕ್ತಿನಗರದ ಸುತ್ತಮುತ್ತಲಿನವರಿಗೆ ಆದ್ಯತೆ
ಶಕ್ತಿನಗರ, ಮೈಸೂರು
98806 86345

NSE **Nypunya** School of Excellence MYSURU
DATTAGALLI and R.T. NAGAR
ಬೇಕಾಗಿದ್ದಾರೆ
ಶಾಲೆಯಲ್ಲಿ ಕೆಲಸ ಮಾಡಲು ಮಹಿಳಾ ಆಯಾ / ಅಟೆಂಡರ್ ಬೇಕಾಗಿದ್ದಾರೆ.
Mob: 9606959451

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

AFFIDAVIT
That for and on behalf of myself and remitter issue, I wholly renounce / relinquish and abandon the use of my former names / surnames of Sadana, Sadhana Bai, Sadhana and in place thereof, I do hereby assume from this date the name / surname Sadhana Jain, so that I and remitter issue may hereafter be called, known and distinguished not by my former name / surname, but assumed name / surname of Sadhana Jain.
Sd/- Sadhana Jain

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು/ ಹುಡುಗರು ಬೇಕಾಗಿದ್ದಾರೆ.
ಸಂಬಳ: 15,000/–
7899754149

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಮಧ್ಯ ಭಾಗದಲ್ಲಿರುವ ಲಾಡ್ಜ್‌ಗೆ ರೂಂ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. 40 ವರ್ಷದ ಒಳಗಿನವರು
9663991888
9663427888

ಬೇಕಾಗಿದ್ದಾರೆ
ಶಾಲಾ ಬಸ್ ಚಾಲಕರು, ಅನುಭವಸ್ಥರಿಗೆ ಆದ್ಯತೆ, ಉಚಿತ ಊಟ ಹಾಗೂ ವಸತಿ ಸೌಲಭ್ಯವಿರುತ್ತದೆ.
ಸಂಪರ್ಕಿಸಿ
9964586817
9343299998

ನಿವೃತ್ತರಾದವರಿಗೆ ಉದ್ಯೋಗಾವಕಾಶ ಸೆಮಿನಾರ್
ಕೇಂದ್ರ/ರಾಜ್ಯ/ ನಿವೃತ್ತ ಬ್ಯಾಂಕ್ ನೌಕರರಿಗೆ ಆಸಕ್ತ ಮಹಿಳೆಯರಿಗೆ ಉದ್ಯೋಗವಕಾಶಕ್ಕೆ ಸೆಮಿನಾರ್ ಏರ್ಪಡಿಸಲಾಗಿದೆ.
ಸ್ಥಳ: Sharadha Plamtima, 1st Floor, Mysore-01, Near Big Clock Tower
ದಿನಾಂಕ: 26–05–2025, ಸಮಯ: 11 ಗಂಟೆಗೆ. ವಿದ್ಯಾರ್ಹತೆ: SSLC ಮೇಲ್ಪಟ್ಟು
Followed by Lunch
9449068132
7022034200

ನಿಮ್ಮ ಮನೆಯಲ್ಲಿ ನಲ್ಲಿ ಮತ್ತು ಸ್ಯಾನಿಟರಿ ಕೆಲಸ, ಟೈಲ್ಸ್ ಕೆಲಸ, ತರಾಸಿ ಸೋರಿಕೆ, ಬಣ್ಣದ ಕೆಲಸ, ಎಲೆಕ್ಟ್ರಿಕಲ್ ಕೆಲಸ, ಇಂಟೀರಿಯರ್ ಕೆಲಸ, ಹಾಗೂ ಸಿವಿಲ್ ಆಲ್ಟ್ರೇಷನ್ ಕೆಲಸದ ತೊಂದರೆ ಇದ್ದರೆ... ಕರೆ ಮಾಡಿ
VASANTHA BUILDERS
8151035074
9035012579

ಬಾಡಿಗೆಗೆ ಬೇಕಾಗಿದೆ
ಗೂಡ್ಸ್ ಆಟೋ ಕ್ಲೋಸ್ ಬಾಡಿ ಮೈಸೂರಿನ ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾಗೆ ಹೆಸರಾಂತ ಕೊರಿಯರ್ ಸಂಸ್ಥೆಗೆ
9449870898

Ice Cream Parlour ಗೆ Part Time ಗೆ ಹುಡುಗರು ಬೇಕಾಗಿದ್ದಾರೆ.
6 ರಿಂದ 11 P.M
8317386649

ಭೋಗ್ಯಕ್ಕೆ ಇದೆ
ಚಾಮುಂಡಿಪುರಂ 4ನೇ ಮೇನ್ SBI ಬ್ಯಾಂಕ್ ಹಿಂಭಾಗ ಆರ್.ಸಿ.ಸಿ. ಮನೆ 2ನೇ ಮಹಡಿ ಸೀಟ್ ಮನೆ 3ನೇ ಮಹಡಿ (ಸಣ್ಣ ಕುಟುಂಬಕ್ಕೆ ಆದ್ಯತೆ)
8971220695

ಫೀಲ್ಡ್ ಸೇಲ್ಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಹೊಂದಿರಬೇಕು. ಪಿರಿಯಾಪಟ್ಟಣ 2 ಹುದ್ದೆ, ಚಾಮರಾಜನಗರ 2 ಹುದ್ದೆ, ಕೊಳ್ಳೇಗಾಲ 2 ಹುದ್ದೆ, ಹೆಚ್.ಡಿ.ಕೋಟೆ 2 ಹುದ್ದೆ ಮತ್ತು ಮಂಡ್ಯ 2 ಹುದ್ದೆ. ಸಂಬಳ 25,000 ರಿಂದ 30,000ವರೆಗೆ
9901561283

ಪರ್ಮನೆಂಟ್ ಉದ್ಯೋಗ
ಮೈಸೂರಿನಲ್ಲಿರುವ AW Group of ಕಂಪನಿಯಲ್ಲಿ ಖಾಲಿಯಿರುವ ವಿವಿಧ ಪರ್ಮನೆಂಟ್ ಉದ್ದೆಗಳಿಗೆ 224 ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC =114, ITI, DIP =35 Any Degree etc=75, ವಯೋಮಿತಿ: 18-31 Years, ತಿಂಗಳಿಗೆ: 25000–32000, ಗಳಿಸಬಹುದು (ಉಚಿತ ವಸತಿ + ಊಟದ ವ್ಯವಸ್ಥೆ ಇರುತ್ತದೆ.)
ಸೌಂದರ್ಯ: 7349699460
7090212014

ಯುವಕ ಯುವತಿಯರು ಬೇಕಾಗಿದ್ದಾರೆ.
7th, SSLC, PUC, Diploma, in Nursing and Educational Qualification
ಮೈಸೂರು ಮತ್ತು ಮಂಗಳೂರಿನಲ್ಲಿ ಹೋಂ ಕೇರ್ ನರ್ಸಿಂಗ್ ತರಬೇತಿಯೊಂದಿಗೆ ಹೋಂ ನರ್ಸಿಂಗ್ ಉದ್ಯೋಗವನ್ನು ಒದಗಿಸಲಾಗುವುದು ಊಟ ಮತ್ತು ವಸತಿಯೊಂದಿಗೆ ಉತ್ತಮ ಸಂಬಳವನ್ನು ನೀಡಲಾಗುವುದು.
ಸಂಬಳ: 12000 ರಿಂದ 18000
9035324777,7259306665

ತಕ್ಷಣ ಬೇಕಾಗಿದ್ದಾರೆ
Sai Sapthagiri Builders and Developers
Telecallers-2No.
Basic Salary 10K + Incentive Earn upto 15K+
9980524644
9591828444

ಸೈಟುಗಳು ಮಾರಾಟಕ್ಕಿವೆ
30x40, 40x60
ಶ್ರೀರಾಂಪುರ ರಿಂಗ್ ರೋಡ್ ಹಾಗೂ ಶ್ರೀನಗರ ಹಿಂಭಾಗ, ಮೈಸೂರು
8050345574

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಏಜೆನ್ಸಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ಕೆಲಸದಲ್ಲಿ ಅನುಭವ ಇರಬೇಕು. (ಎಸ್‌ಎಸ್‌ಎಲ್‌ಸಿ ಪಾಸ್, ಸ್ಕೂಟರ್ ಇರಬೇಕು, ವಯಸ್ಸು 45ರ ಒಳಗೆ)
8310098788

SITE FOR SALE
30X40 NITYANAND SAGARA (NEAR Acharya Vidyakula & Central St.Joseph School) Mys-Hunsur Highway
Ready to Build 28 Lacs
95388-39926

SITE FOR SALE
40x60 North Facing Near Nirmala Hospital 50 Mtrs to Ring Road (Service Road) Attached to Police layout.
9035566773

ವರ ಬೇಕಾಗಿದ್ದಾರೆ
(ಲಿಂಗಾಯತ) ವಧು, ವಯಸ್ಸು25, SSLC ಕಲಿತಿರುವ /(ಲಿಂಗಾಯತ) ವಧು, ವಯಸ್ಸು30, MBA /(ಲಿಂಗಾಯತ ವಧು) ವಯಸ್ಸು, 24, MSC /ಒಕ್ಕಲಿಗಗೌಡ ವಧುವಿನ ವಯಸ್ಸು 30, MBA ಉದ್ಯೋಗದಲ್ಲಿರುವ ರೂಪವತಿ ವಧುವಿಗೆ ಸೂಕ್ತವಾದ ವರ ಬೇಕಾಗಿದೆ. ಶೀಘ್ರ ವಿವಾಹಕ್ಕಾಗಿ ಎಲ್ಲಾ ಜಾತಿಯ ವಧೂವರರಿಗಾಗಿ ಸಂಪರ್ಕಿಸಿ
8904834199

WANTED
Compter Teacher for a Reputed CBSE School (Urgent Requirement)
* Must have Experience with SATS and UDISE data Systems
* Relevent Qualification and Good
* Communication Skill Required
* Apply immediatly kindly
8495983613

WANTED
PU COLLEGE LECTURER
QUALIFICATION: MASTER DEGREE WITH BEd
SUBJECT: Physics,
Experience 2 to 5 Years
9845192283

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಮನೆಗೆ ಹೆಂಗಸು ಅಡುಗೆಯವರು ಬೇಕಾಗಿದ್ದಾರೆ
9632376176

30x50, 11 ``A''
ರೇರಾ ಅಪ್ರೂವ್ಡ್
ಸೈಟು ಮಾರಾಟಕ್ಕಿದೆ 26 ಲಕ್ಷಗಳು (80 ಅಡಿ ಬಸ್ ರೋಡ್‌ಗೆ ಹತ್ತಿರ ಇದೆ) ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
9742198093

ಕೆಲಸಕ್ಕೆ ಬೇಕಾಗಿದ್ದಾರೆ
SSLC, PUC any degree
ಓದಿರುವವರು ನಮ್ಮ ಸಂಸ್ಥೆಯಲ್ಲಿ ಹೋಮ್ ನರ್ಸ್ ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ
ವಯಸ್ಸು 18ರಿಂದ 50 ವರ್ಷ ಒಳಗೆ
ಸಂಬಳ : 15000 –23000
9739292222
9513203333

ನಿವೇಶನ ಮಾರಾಟಕ್ಕಿವೆ
* 30x40 ಗಾಣಿಗರಹುಂಡಿ, ಬೋಗಾದಿ, ಗದ್ದಿಗೆ ರಸ್ತೆ
* 24x40 KNS Calisto ಹತ್ತಿರ ಕೇರ್ಗಳ್ಳಿ, ದಟ್ಟಗಳ್ಳಿ
Call: ಮಾಲೀಕರು
8660726140

ಕಂಕಣ ಭಾಗ್ಯ
ವಧು–ವರರಿಗೆ ಕೂಡಲೇ ಸಂಪರ್ಕಿಸಿ
ಕುರುಬ, ಒಕ್ಕಲಿಗ, ಲಿಂಗಾಯತ, ಈಡಿಗ, ಆಚಾರ್ಯ, ನಾಯಕ, SC ಎಲ್ಲಾ ಜಾತಿಯ ವಧು–ವರರು ವಿಚ್ಛೇದಿತರು, ವಿಧುರ–ವಿಧವೆಯರು ಸಂಪರ್ಕಿಸಿ
9071577131

ಕಾವೇರಿ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್‌ಕೇರ್ ಅಸಿಸ್ಟೆಂಟ್ (ನರ್ಸಿಂಗ್)
8ನೇ ಕ್ರಾಸ್, ಆಸರೆ ಕಾನ್ವೆಂಟ್ ರಸ್ತೆ ಬೆಳವಾಡಿ, ಮೈಸೂರು
ಎಸ್.ಎಸ್.ಎಲ್.ಸಿ, ಪಿಯುಸಿ ಆದ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಒಂದು ಸುವರ್ಣವಕಾಶ ಇಲ್ಲಿ 2 ವರ್ಷಗಳ ತರಬೇತಿಯನ್ನು ಕೊಡಲಾಗುವುದು. ಡೊನೇಷನ್ ಇಲ್ಲ, ಫೀಸ್ ಮಾತ್ರ ತರಬೇತಿ ಸಮಯದಲ್ಲಿ ವೇತನ ಇದೆ. ಇಲ್ಲಿ ಕಳೆದ 20 ವರ್ಷಗಳಿಂದ ತರಬೇತಿ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಪ್ರಖ್ಯಾತ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಸ್ಟೆಲ್ ವ್ಯವಸ್ಥೆ ಇದೆ. ಕೆಲವೇ ಸೀಟುಗಳು ಬಾಕಿ ಇದೆ.
9845331087,9535524464

ಜಾಗ ಬಾಡಿಗೆಗೆ ಇದೆ
ಮೈಸೂರು–ತಿ.ನರಸೀಪುರ ಮುಖ್ಯ ರಸ್ತೆಯ ಎಂ. ಸಿ. ಹುಂಡಿ ಸಮೀಪ, ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲು ಸೂಕ್ತ ಜಾಗದ ಸೌಲಭ್ಯವಿದ್ದು, ಬಾಡಿಗೆಗೆ ದೊರೆಯುತ್ತದೆ, ಬಾರ್ ಲೈಸೆನ್ಸ್ ಉಳ್ಳ ಸನ್ನದ್ದು ದಾರರು ಸಂಪರ್ಕಿಸಿ :
9880689535

ROOM BOY ಬೇಕಾಗಿದ್ದಾರೆ
ಲಾಡ್ಜ್ ಕೆಲಸಕ್ಕೆ ರೂಂ ಬಾಯ್ಸ್ ಬೇಕಾಗಿದ್ದಾರೆ. ಊಟ/ವಸತಿ ಸೌಲಭ್ಯವಿರುತ್ತದೆ.
ಹೋಟೆಲ್ ದಿವಾನ್ ರೆಸಿಡೆನ್ಸಿ ದಿವಾನ್ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು (ಶೃಂಗಾರ್ ಹೋಟೆಲ್ ಎದುರು)
9845155940

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ಕಾಡಾನೆ ದಾಳಿಗೆ ಆದಿವಾಸಿ ಮಹಿಳೆ ಸಾವು

ಮತ್ತೋರ್ವನಿಗೆ ತೀವ್ರ ಗಾಯ, ಶಾಸಕರಿಂದ ಮೃತರ ಕುಟುಂಬಕ್ಕೆ ಸಾಂತ್ವನ



ಸೀತಾ

ಹೆಚ್.ಡಿ.ಕೋಟೆ, ಮೇ 21– ಕಾಡಾನೆ ದಾಳಿಗೆ ಜೇನು ಕುರುಬ ಜನಾಂಗದ ಆದಿವಾಸಿ ಮಹಿಳೆ ಸಾವನ್ನಪ್ಪಿ, ಮತ್ತೋರ್ವ ವ್ಯಕ್ತಿ ಗಾಯಗೊಂಡಿರುವ ಘಟನೆ ಮಂಗಳವಾರ ಸಂಜೆ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಬಳ್ಳೆ ಅರಣ್ಯದಲ್ಲಿ ನಡೆದಿದೆ.

ಬಳ್ಳೆ ಹಾಡಿ ನಿವಾಸಿ ರಾಜು ಅವರ ಪತ್ನಿ ಸೀತಾ (46) ಸಾವನ್ನಪ್ಪಿದವರು. ಇದೇ ಹಾಡಿಯ ಸುದೀಪ್ ಗಾಯಗೊಂಡವರು.

ವಿವರ: ಆದಿವಾಸಿ ಮಹಿಳೆ ಸೀತಾ ಅವರು ತಮ್ಮ ಪತಿ ರಾಜು, ಪುತ್ರ ರಾಜೇಶ್ ಹಾಗೂ ಸಂಬಂಧಿಕರಾದ ಸುದೀಪ್ ಅವರೊಂದಿಗೆ ಮಂಗಳವಾರ ಬೆಳಗ್ಗೆ ಬಳ್ಳೆ ಅರಣ್ಯಕ್ಕೆ ಜೇನು ಸಂಗ್ರಹಿಸಲು ತೆರಳಿದ್ದರು. ಸಂಜೆ 5 ಗಂಟೆಗೆ ಹಾಡಿಗೆ ವಾಪಸ್ಸಾಗುತ್ತಿದ್ದ ವೇಳೆ ಮಾರ್ಗಮಧ್ಯೆ ಕಾಡಾನೆ ದಾಳಿ ನಡೆಸಿ ಸೀತಾ ಹಾಗೂ ಸುದೀಪ್ ಅವರನ್ನು ಗಾಯಗೊಳಿಸಿದೆ. ಈ ವೇಳೆ ಪತಿ ರಾಜು ಹಾಗೂ ಪುತ್ರ ರಾಜೇಶ್ ಗಾಯಗೊಂಡವರನ್ನು ಹೊತ್ತು ಹಾಡಿಗೆ ಕರೆದೊಯ್ಯುವ ಮಾರ್ಗಮಧ್ಯೆ ಸೀತಾ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ.



ಮೃತರ ಕುಟುಂಬಕ್ಕೆ ಶಾಸಕ ಅನಿಲ್ ಸಾಂತ್ವನ ಹೇಳಿದರು.

ತಾಲೂಕು ಪ.ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಮಹೇಶ್, ಡಿ.ಬಿ. ಕುಪ್ಪೆ ಗ್ರಾಪಂ ಅಧ್ಯಕ್ಷ ಸುಬ್ರಮಣಿ ಘಟನೆ ಬಗ್ಗೆ ಮಾಹಿತಿ ಪಡೆದು ಅಂತರಸಂತೆ ಠಾಣೆ ಕ್ರೈಂ ಸಬ್ ಇನ್ಸ್‌ಪೆಕ್ಟರ್ ಕುಮಾರ್ ಅವರಿಗೆ ಫೋನ್ ಮೂಲಕ ವಿಷಯ ತಿಳಿಸಿದರು. ಈ ವೇಳೆ ಪೊಲೀಸರು ಹಾಡಿಗೆ ಭೇಟಿ ನೀಡಿ ಆಂಬುಲೆನ್ಸ್‌ನಲ್ಲಿ ಕಾಲು ಮುರಿದು ಗಾಯಗೊಂಡಿದ್ದ ಸುದೀಪ್‌ನನ್ನು ಚಿಕಿತ್ಸೆಗಾಗಿ ಹಾಗೂ ಸೀತಾ ಶವವನ್ನು ಮರಣೋತ್ತರ ಪರೀಕ್ಷೆಗೆ ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು.

ಶಾಸಕರ ಭೇಟಿ, ಸಾಂತ್ವನ: ವಿಷಯ ತಿಳಿದು ಪಟ್ಟಣದ ಆಸ್ಪತ್ರೆಗೆ ಭೇಟಿ ನೀಡಿ ಶವದ ಅಂತಿಮ ದರ್ಶನ ಪಡೆದ ಶಾಸಕ ಅನಿಲ್, ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿ ವೈಯುಕ್ತಿಕ ಧನ ಸಹಾಯ ಮಾಡಿದರು.

ಬಳಿಕ ಮಾತನಾಡಿದ ಅವರು ಅರಣ್ಯ ಹಕ್ಕು ಕಾಯಿದೆ ಅನ್ವಯ ಆದಿವಾಸಿಗಳು ಅರಣ್ಯಕ್ಕೆ ಹೋಗಿ ಜೇನುತುಪ್ಪ ಸಂಗ್ರಹಿಸಲು ತೆರಳಿದ ವೇಳೆ, ಕಾಡಾನೆ ದಾಳಿ ನಡೆಸಿದ್ದು ಓರ್ವ ಮಹಿಳೆ ಮೃತಪಟ್ಟು, ಮತ್ತೋರ್ವವ್ಯಕ್ತಿ ಗಾಯಗೊಂಡಿದ್ದಾನೆ. ಅರಣ್ಯ ಇಲಾಖೆ ಮೃತ ಮಹಿಳೆ ಕುಟುಂಬದವರಿಗೆ ಸೂಕ್ತ ಪರಿಹಾರ ನೀಡಬೇಕು. ಅಲ್ಲದೇ ಗಾಯಾಳು ಚಿಕಿತ್ಸೆಗೆ ನೆರವಾಗಬೇಕು. ಅಲ್ಲದೇ ಮೃತ ಮಹಿಳೆ ಕುಟುಂಬದ ಸದಸ್ಯರೊಬ್ಬರಿಗೆ ಉದ್ಯೋಗ ಕೊಡಿಸಲು ಕ್ರಮ ವಹಿಸುವುದಾಗಿ ತಿಳಿಸಿದರು.

ಕರ್ನಾಟಕ ರಾಜ್ಯ ವನ್ಯಜೀವಿ ಸಂರಕ್ಷಣಾ ಮಂಡಳಿ ಸದಸ್ಯ ವಡ್ಡರಗುಡಿ ಚಿಕ್ಕಣ್ಣ ಮಾತನಾಡಿ, ಅರಣ್ಯ ಹಕ್ಕು ಕಾಯಿದೆ ಪ್ರಕಾರ ಆದಿವಾಸಿಗಳು ಅರಣ್ಯದಲ್ಲಿ ಕಿರು ಉತ್ಪನ್ನ ಸಂಗ್ರಹಿಸಲು ಅವಕಾಶ ಇದೆ. ಅದರಂತೆ ಮಂಗಳವಾರ ಬಳ್ಳೆ ಹಾಡಿಯ ಸೀತಾ ಜೇನು ಸಂಗ್ರಹಕ್ಕೆ ಅರಣ್ಯಕ್ಕೆ ತೆರಳಿದ್ದ ವೇಳೆ ಕಾಡಾನೆ ದಾಳಿ ಸಿಲುಕಿ ಸಾವನ್ನಪ್ಪಿದ್ದಾಳೆ. ಆದರೆ ಅರಣ್ಯ ಇಲಾಖೆ ಅಧಿಕಾರಿಗಳು ಅರಣ್ಯದೊಳಗೆ ಘಟನೆ ನಡೆದಿದ್ದರೂ ಪರಿಹಾರ ನೀಡಲು ಸಾಧ್ಯವಿಲ್ಲ ಎನ್ನುತ್ತಾರೆ. ಅರಣ್ಯದೊಳಗೆ ವಾಸಿಸುವ ಆದಿವಾಸಿಗಳಿಗೆ ವೈಯುಕ್ತಿಕ ಹಾಗೂ ಸಮುದಾಯಿಕ ಹಕ್ಕು ನೀಡಿರುತ್ತಾರೆ. ಹಾಗಾಗಿ ಮೃತ ಕುಟುಂಬಕ್ಕೆ ಪರಿಹಾರ ಹಾಗೂ ಉದ್ಯೋಗ ನೀಡಲು ಕ್ರಮ ವಹಿಸಬೇಕು ಎಂದರು.

ದುಗ್ಗಹಳ್ಳಿ ಗ್ರಾಪಂಗೆ ಬಿ.ಶಂಕರ್ ಅಧ್ಯಕ್ಷ

ಮಲ್ಲುಂಡಿ, ಮೇ 21– ನಂಜನಗೂಡು ತಾಲೂಕಿನ ದುಗ್ಗಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕೊಂಗಹಳ್ಳಿ ಬಿ.ಶಂಕರ್ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷ ಶಿವನಾಗಪ್ಪ ಅವರು ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಸ್ಪಂದಿಸಿಲ್ಲ ಹಾಗೂ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು ಆರೋಪಿಸಿ 13 ಸದಸ್ಯರು ಅವಿಶ್ವಾಸ ಮಂಡಿಸಿ ಅವರನ್ನು ಪದಚ್ಯುತಿಗೊಳಿಸಿದ್ದರು. ಈ ಹಿನ್ನೆಲೆಯಲ್ಲಿ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಬಿ.ಶಂಕರ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಕೃಷ್ಣ ಘೋಷಿಸಿದರು.

ಈ ವೇಳೆ ಗ್ರಾಪಂ ಉಪಾಧ್ಯಕ್ಷೆ ಪದ್ಮ, ಸದಸ್ಯರಾದ ಸುಮಲಾಂಬಿಕಾ, ವೃಷಭೇಂದ್ರ, ಚಿನ್ನಸ್ವಾಮಿನಾಯಕ, ಕಮಲಮ್ಮ, ಕೂಸಮ್ಮ, ಸುಧಾಮಣಿ, ಗುರುಪ್ರಸಾದ್, ಕೃಷ್ಣ, ಲಕ್ಷ್ಮಿ, ಜಯಮ್ಮ, ಪಿಡಿಓ ಹೇಮಾವತಿ, ಕಾರ್ಯದರ್ಶಿ ಬಸವಣ್ಣ ಸೇರಿದಂತೆ ಇತರರು ಚುನಾವಣೆಯಲ್ಲಿ ಭಾಗವಹಿಸಿದ್ದರು. ನೂತನ ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆ ಗ್ರಾಪಂ ಆವರಣದಲ್ಲಿ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.



ದುಗ್ಗಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಬಿ.ಶಂಕರ್ ಅವಿರೋಧವಾಗಿ ಆಯ್ಕೆಯಾದರು.

ನೂತನ ಅಧ್ಯಕ್ಷ ಬಿ.ಶಂಕರ್ ಮಾತನಾಡಿ, ನನ್ನನ್ನು ನೂತನ ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆ ಮಾಡಿದ ಸದಸ್ಯರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಅಲ್ಲದೇ ಮುಂದಿನ ದಿನಗಳಲ್ಲಿ ಎಲ್ಲಾ ಸದಸ್ಯರ ಸಹಕಾರ ಪಡೆದು ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಕುಡಿಯುವ ನೀರು, ಬೀದಿ ದೀಪ, ಚರಂಡಿ ನಿರ್ಮಾಣ ಸೇರಿದಂತೆ ಅಗತ್ಯ ಮೂಲ ಸೌಕರ್ಯ ಒದಗಿಸುವ ಜೊತೆಗೆ ಸ್ವಚ್ಛತೆಗೆ ಆದ್ಯತೆ ನೀಡಲಾಗುವುದು ಎಂದರು.

ನನ್ನ ಅವಧಿಯಲ್ಲಿ ದುಗ್ಗಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಯಾವುದೇ ಸಮಸ್ಯೆ ಕಂಡು ಬಂದಲ್ಲಿ ನನ್ನ ಗಮನಕ್ಕೆ ತಂದರೆ ತಕ್ಷಣ ಪರಿಹರಿಸಲು ಮುಂದಾಗುತ್ತೇನೆ ಎಂದರು.

ಜಿಲ್ಲಾ ಕನಕದಾಸ ನೌಕರರ ಸಂಘದ ಅಧ್ಯಕ್ಷ ಜವರೇಗೌಡ, ತಾಪಂ ಮಾಜಿ ಅಧ್ಯಕ್ಷ ತಮ್ಮಣ್ಣೇಗೌಡ, ಎಂ.ಬಿ.ಆನಂದ, ಶಿವಕುಮಾರ್, ಎಂ.ಎನ್. ಡೆವಲಪರ್ಸ್‌ನ ಎನ್.ಮಂಜು, ಶಿವಪ್ರಸಾದ್, ಕಾಂಗ್ರೆಸ್ ಮುಖಂಡ ಸಂದೇಶ್, ಗುರುಸಿದ್ದಪ್ಪ, ಸಂತೋಷ್, ನಿಂಗಪ್ಪ ರವಿ, ನಂಜೇಗೌಡ, ರೈತ ಸಂಘದ ಹೋಬಳಿ ಘಟಕದ ಪುಟ್ಟಸ್ವಾಮಿಗೌಡ, ಕೆಎಸ್‌ಆರ್‌ಟಿಸಿ ಸುರೇಶ್, ಶಿವಣ್ಣಗೌಡ, ಮಾದೇಗೌಡ, ಶಿವಪ್ಪ, ಶಿವರುದ್ರಗೌಡ, ಕೂಸಣ್ಣ, ಸಿದ್ದರಾಜು ಸೇರಿದಂತೆ ಇತರರಿದ್ದರು.

ಅಂಬೇಡ್ಕರ್ ಭವನಗಳಿಗೆ 7.60 ಕೋಟಿ ಮಂಜೂರು

ನಂಜನಗೂಡು, ಮೇ 21– ತಾಲೂಕಿನ ವಿವಿಧ ಗ್ರಾಮಗಳಲ್ಲಿ ಅಂಬೇಡ್ಕರ್ ಭವನಗಳ ನಿರ್ಮಾಣಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ 7 ಕೋಟಿ 60 ಲಕ್ಷ ಅನುದಾನ ಮಂಜೂರಾಗಿದ್ದು, ಈಗಾಗಲೇ 30 ಭವನಗಳ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದು ಶಾಸಕ ದರ್ಶನ್ ಹೇಳಿದರು.

ತಾಲೂಕಿನ ಉಪ್ಪಿನಹಳ್ಳಿ ಹಾಗೂ ಮಾದ್ರಳ್ಳಿ ಗ್ರಾಮದಲ್ಲಿ ತಲಾ 20 ಲಕ್ಷ ರೂ. ವೆಚ್ಚದ ಅಂಬೇಡ್ಕರ್ ಭವನ, ಶ್ರೀನಗರ ಗ್ರಾಮದಲ್ಲಿ 15 ಲಕ್ಷ ರೂ. ವೆಚ್ಚದಲ್ಲಿ ಪ.ಜಾತಿ ಬೀದಿಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ ಸೇರಿದಂತೆ ಒಟ್ಟು 55 ಲಕ್ಷ ರೂ. ವೆಚ್ಚದ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.



55 ಲಕ್ಷ ವೆಚ್ಚದ ಕಾಮಗಾರಿಗೆ ಶಾಸಕ ದರ್ಶನ್ ಚಾಲನೆ ನೀಡಿದರು.

ಚುನಾವಣಾ ಪೂರ್ವ ನೀಡಿದ್ದ ಭರವಸೆಯಂತೆ ಎಲ್ಲಾ ಅಂಬೇಡ್ಕರ್ ಸಮುದಾಯ ಭವನಗಳ ಕಾಮಗಾರಿ ಪೂರ್ಣಗೊಳಿಸುವ ಜೊತೆಗೆ ಹೊಸದಾಗಿ ಸಮುದಾಯ ಭವನ ನಿರ್ಮಾಣಕ್ಕೆ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ 7.60 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದಾರೆ. ಈಗಾಗಲೇ 30 ಗ್ರಾಮಗಳಲ್ಲಿ ಹೊಸದಾಗಿ ಅಂಬೇಡ್ಕರ್ ಸಮುದಾಯ ಭವನಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಉಳಿದ ಸಮುದಾಯ ಭವನಗಳಿಗೆ ಶೀಘ್ರ ಗುದ್ದಲಿ ಪೂಜೆ ನೆರವೇರಿಸಲಾಗುವುದು. ಜೊತೆಗೆ ಪ.ಜಾತಿ ಬೀದಿಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಿಸಲು ಪ್ರಗತಿ ಕಾಲೋನಿ ಎಂಬ ಹೊಸ ಯೋಜನೆ ಜಾರಿಗೊಳಿಸಿ 5 ಕೋಟಿ ಅನುದಾನ ನೀಡಿದ್ದಾರೆ. ಬಹುದಿನದ ಬೇಡಿಕೆಯಾಗಿದ್ದ ನಂಜನಗೂಡಿನಿಂದ ಉಪ್ಪಿನಹಳ್ಳಿ ಮುಖ್ಯರಸ್ತೆ ಅಭಿವೃದ್ಧಿಗೆ 10 ಕೋಟಿ ವೆಚ್ಚದಲ್ಲಿ ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಲಾಗಿದ್ದು, ರಸ್ತೆ ಕಾಮಗಾರಿ ಪ್ರಗತಿಯಲ್ಲಿದೆ. ಆ ಮೂಲಕ ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿಗೂ ಹೆಚ್ಚು ಒತ್ತು ನೀಡಲಾಗಿದೆ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಮಹೇಶ್, ಎಸ್ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ, ಗ್ರಾಪಂ ಉಪಾಧ್ಯಕ್ಷ ನಂಜಪ್ಪ, ಗ್ರಾಪಂ ಸದಸ್ಯರಾದ ಮುದ್ದುಮಾದಶೆಟ್ಟಿ, ನಾರಾಯಣಸ್ವಾಮಿ, ದಸಂಸ ಸಂಚಾಲಕ ನಾರಾಯಣ, ಮುಖಂಡರಾದ ಬಸವಣ್ಣ, ನಿಂಗರಾಜು, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಚಂದನ್‌ಗೌಡ ಸೇರಿದಂತೆ ಇತರರಿದ್ದರು.

ನೂತನ ಕೆಡಿಪಿ ಸದಸ್ಯರಿಗೆ ಅಭಿನಂದನೆ

ತಿ.ನರಸೀಪುರ, ಮೇ 21– ತಾಲೂಕು ಮಟ್ಟದ ತ್ರೈಮಾಸಿಕ ಕೆಡಿಪಿ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ಮುದ್ದುಬೀರನಹುಂಡಿ ಎಲ್‌ಐಸಿ ಲಿಂಗರಾಜು ಅವರನ್ನು ಸರ್ಕಾರ ನಾಮ ನಿರ್ದೇಶನಗೊಳಿಸಿರುವ ಹಿನ್ನೆಲೆಯಲ್ಲಿ ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಕಾರ್ಯದರ್ಶಿ ಎಂ.ರಮೇಶ್ ಹಾಗೂ ಅಭಿಮಾನಿಗಳು ಅಭಿನಂದಿಸಿದರು.



ನೂತನ ಕೆಡಿಪಿ ಸದಸ್ಯ ಲಿಂಗರಾಜು ಅವರನ್ನು ಅಭಿನಂದಿಸಲಾಯಿತು.

ಪಟ್ಟಣದ ಕಬಿನಿ ಅತಿಥಿ ಗೃಹದ ಆವರಣದಲ್ಲಿ ಸದಸ್ಯ ಲಿಂಗರಾಜು ಅವರನ್ನು ಅಭಿನಂದಿಸಿ ಮಾತನಾಡಿದ ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಕಾರ್ಯದರ್ಶಿ ಎಂ.ರಮೇಶ್, ಕೆಡಿಪಿ ಸಮಿತಿ ಹುದ್ದೆ ಜವಾಬ್ದಾರಿಯುತವಾಗಿದ್ದು ತಾವು ಉತ್ತಮ ಕೆಲಸ ಮಾಡುವ ಮೂಲಕ ಕಾಂಗ್ರೆಸ್ ಪಕ್ಷ ಮತ್ತು ವರಿಷ್ಠರಿಗೆ ಗೌರವ ತರಬೇಕೆಂದರು.

ನೂತನ ಕೆಡಿಪಿ ಸದಸ್ಯ ಲಿಂಗರಾಜು ಮಾತನಾಡಿ, ಕಾಂಗ್ರೆಸ್ ಪಕ್ಷದಲ್ಲಿ ಸಾಮಾನ್ಯ ಕಾರ್ಯಕರ್ತನಾಗಿ ಪ್ರಾಮಾಣಿಕವಾಗಿ ಪಕ್ಷದ ಪರ ಕೆಲಸ ಮಾಡಿದ ಪರಿಣಾಮ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಂಸದ ಸುನೀಲ್ ಬೋಸ್ ಹಾಗೂ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಅವರು ನನ್ನನ್ನು ಕೆಡಿಸಿ ಸದಸ್ಯನನ್ನಾಗಿ ನಾಮ ನಿರ್ದೇಶನ ಮಾಡಿದ್ದಾರೆ. ವರಿಷ್ಠರು ನನ್ನ ಮೇಲೆ ಇಟ್ಟಿರುವ ನಂಬಿಕೆ, ವಿಶ್ವಾಸಕ್ಕೆ ಧಕ್ಕೆ ಬಾರದಂತೆ ಹಿರಿಯರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತೇನೆ ಎಂದರು.

ಈ ವೇಳೆ ವರುಣ ಕ್ಷೇತ್ರ ಕಾರ್ಮಿಕ ವಿಭಾಗದ ಅಧ್ಯಕ್ಷ ಬಣ್ಣ ಬಸವರಾಜು, ಮುದ್ದುಬೀರನಹುಂಡಿ ನಾಗರಾಜ್, ಕುರುಬರ ಸಂಘದ ನಿರ್ದೇಶಕ ಮಹೇಶ್, ಬೀರೇಶ್, ಶಂಕರ್, ಗೋಪಾಲ್, ಮರದ ನಾಗರಾಜು, ಕಾರ್ಮಿಕ ವಿಭಾಗದ ಉಪಾಧ್ಯಕ್ಷ ಅಶ್ವತ್ಥಾಮ, ಬಿರೇಶ್, ಮಹೇಶ್, ಶಂಕರ್, ರವಿ, ಮೋಹನ್ ಕುಮಾರ್, ಮಂಜುನಾಥ, ಅಂಗಡಿ ಬಸವರಾಜ್, ನಿರಂಜನ್, ಪ್ರದೀಪ್, ಶಶಿಕುಮಾರ್, ಕೂಡ್ಲೂರು ದೇವರಾಜ್, ರಾಜೇಂದ್ರ, ಶಿವಶಂಕರ್ ಮತ್ತಿತರರಿದ್ದರು.

ಯಕ್ಷಗಾನ ನಾಟ್ಯ ತರಗತಿ

ಮೈಸೂರು, ಮೇ 21– ಮೈಸೂರಿನ ಕರಾವಳಿ ಯಕ್ಷಗಾನ ಕೇಂದ್ರದಿಂದ ಸರಸ್ವತಿಪುರಂನ ವಿಜಯ ವಿಠ್ಠಲ ಶಾಲೆ ಆವರಣದಲ್ಲಿ ಜೂ. 1 ರಂದು ಸಂಜೆ 4 ಗಂಟೆಗೆ ತೆಂಕು–ಬಡಗು ಯಕ್ಷಗಾನ ನಾಟ್ಯ ತರಗತಿಗಳು ಪ್ರಾರಂಭವಾಗಲಿದೆ. ಹೆಚ್ಚಿನ ಮಾಹಿತಿಗೆ ಮೊ. 9008181172, 9844161748 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸೈಕಲ್‌ಗೆ ಟಿಪ್ಪರ್ ಡಿಕ್ಕಿ: ವೃದ್ಧ ಸಾವು

ಬನ್ನೂರು, ಮೇ 21– ಸೈಕಲ್‌ಗೆ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ವೃದ್ಧ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಟ್ಟಣದ ಮಾದಿಗಹಳ್ಳಿ ಬಳಿ ಬುಧವಾರ ನಡೆದಿದೆ.



ಫತ್ತೆಖಾನ್(75) ಸಾವನ್ನಪ್ಪಿದವರು. ಈತ ನಿತ್ಯ ಬಿಂದಿಗೆ, ಟಬ್ಬು ಸೇರಿದಂತೆ ವಿವಿಧ ಬಗೆಯ ಪ್ಲಾಸ್ಟಿಕ್ ವಸ್ತುಗಳನ್ನು ತಮ್ಮ ಸೈಕಲ್‌ಗೆ ಹಾಕಿಕೊಂಡು ಊರು ಊರುಗಳಿಗೆ ತಿರುಗಿ ವ್ಯಾಪಾರ ಮಾಡಿ ಜೀವನ ಸಾಗಿಸುತ್ತಿದ್ದರು. ಬುಧವಾರ ಎಂದಿನಂತೆ ವ್ಯಾಪಾರ ಮಾಡಲು ಸೈಕಲ್‌ನಲ್ಲಿ ಎಸ್‌ಆರ್‌ಪಿ ರಸ್ತೆಯಲ್ಲಿ ತೆರಳುತ್ತಿದ್ದ ವೇಳೆ ಮಾದಿಗಹಳ್ಳಿ ಬಳಿ ಬಂದ ಟಿಪ್ಪರ್ (ಕೆ.ಎ. ಎ.ಎಫ್. 8542) ಸೈಕಲ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಕೆಳಗೆ ಬಿದ್ದ ಫತ್ತೆ ಖಾನ್ ಅವರ ಮೇಲೆ ಹರಿದ ಪರಿಣಾಮ ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬನ್ನೂರು ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಭಗೀರಥ ಉಪ್ಪಾರ ಸವಿತಾ ಸಮುದಾಯ ಭವನ ನಿರ್ಮಾಣ

ನಂಜನಗೂಡು, ಮೇ 21– ನಗರದಲ್ಲಿ 5 ಕೋಟಿ ವೆಚ್ಚದಲ್ಲಿ ಭಗೀರಥ ಉಪ್ಪಾರ ಸವಿತಾ ಸಮುದಾಯ ಭವನ ನಿರ್ಮಿಸಲಾಗುವುದು ಎಂದು ಶಾಸಕ ದರ್ಶನ್ ಭರವಸೆ ನೀಡಿದರು.



ಪ್ರವಾಸಿ ಮಂದಿರದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಶ್ರೀಭಗೀರಥ ಮಹರ್ಷಿ ಜಯಂತಿ ಹಿನ್ನೆಲೆಯಲ್ಲಿ ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಉಪ್ಪಾರ ಸಮುದಾಯ ಭವನ ನಿರ್ಮಾಣಕ್ಕೆ 5 ಕೋಟಿ ವೆಚ್ಚದಲ್ಲಿ ಯೋಜನೆ ಸಿದ್ಧಪಡಿಸಲಾಗಿದೆ. ಮುಖ್ಯಮಂತ್ರಿಗಳ ಮನವೊಲಿಸಿ ಶೀಘ್ರ ಒಂದೇ ಬಾರಿಗೆ 3 ಕೋಟಿ ಅನುದಾನ ಬಿಡುಗಡೆ ಮಾಡಿಸಿ ಗುದ್ದಲಿ ಪೂಜೆ ನೆರವೇರಿಸಲಾಗುವುದು. ಉಪ್ಪಾರ ಸಮುದಾಯಕ್ಕೆ ರಾಜಕೀಯ ಸ್ಥಾನಮಾನ ಒದಗಿಸಲು ನಾನು ಬದ್ಧನಾಗಿದ್ದು, ಅತೀ ಶೀಘ್ರ ಸಮುದಾಯದ ಒಬ್ಬರಿಗೆ ಶ್ರೀಕಂಠೇಶ್ವರ ದೇವಾಲಯದ ಅಭಿವೃದ್ಧಿ ಸಮಿತಿಯಲ್ಲಿ ಸ್ಥಾನಮಾನ ನೀಡಲಾಗುವುದು. ಅಲ್ಲದೇ ಸಮುದಾಯದವರು ವಾಸಿಸುವ ಗ್ರಾಮಗಳಲ್ಲಿ ಅವಶ್ಯವಿರುವ ಸೌಕರ್ಯ ಕಲ್ಪಿಸಲು ಶ್ರಮಿಸುತ್ತೇನೆ ಎಂದರು.

ಅದ್ಧೂರಿ ಉಪ್ಪಾರ ಜಯಂತಿ ಆಚರಣೆಗೆ ತೀರ್ಮಾನ: ತಾಲೂಕಿನಲ್ಲಿ ಭಗಿರಥ ಮಹರ್ಷಿ ಜಯಂತಿಯನ್ನು ಸಿಎಂ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಅದ್ಧೂರಿಯಾಗಿ ಆಚರಿಸಲು ತೀರ್ಮಾನಿಸಲಾಗಿದೆ. ಮುಖ್ಯಮಂತ್ರಿಗಳ ದಿನಾಂಕ ನಿಗದಿಪಡಿಸಿ ಅದ್ಧೂರಿಯಾಗಿ ಜಯಂತಿ ಆಚರಿಸಲು ನಿರ್ಧರಿಸಲಾಗಿದೆ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ನಾಗರಾಜ್, ತಾಪಂ ಮಾಜಿ ಸದಸ್ಯ ಮೂಗಶೆಟ್ಟಿ, ಮುಖಂಡರಾದ ಮಹದೇವು, ಸಿದ್ದಶೆಟ್ಟಿ, ಮುದ್ದುಮಾದಶೆಟ್ಟಿ, ರಾಜು, ಮಹದೇವಸ್ವಾಮಿ, ಗೋವಿಂದರಾಜು, ಶ್ರೀನಿವಾಸ್, ಸತೀಶ್, ರಾಜು, ಮಹದೇವು, ಸೋಮಣ್ಣ, ಗ್ರಾಪಂ ಸದಸ್ಯ ಗೋಳೂರು ಮುದ್ದುಮಾದಶೆಟ್ಟಿ, ವಿಜಯ್ ಕುಮಾರ್ ಸೇರಿದಂತೆ ಸಮಾಜದ ಮುಖಂಡರಿದ್ದರು.

ಸಾರ್ವಜನಿಕರೊಂದಿಗೆ ಇನ್ಸ್‌ಪೆಕ್ಟರ್ ಗಂಗಾಧರ್ ವರ್ತನೆ ಖಂಡಿಸಿ

ಜೆಡಿಎಸ್, ಬಿಜೆಪಿ ಮುಖಂಡರಿಂದ ಠಾಣೆಗೆ ಮುತ್ತಿಗೆ

ಹೆಚ್.ಡಿ.ಕೋಟೆ, ಮೇ 21– ಠಾಣೆಗೆ ಬರುವ ಸಾರ್ವಜನಿಕರೊಂದಿಗೆ ಸರ್ಕಲ್ ಇನ್ಸ್‌ಪೆಕ್ಟರ್ ಗಂಗಾಧರ್ ಉಡಾಫೆಯಿಂದ ನಡೆದುಕೊಳ್ಳುತ್ತಾರೆ ಎಂದು ಆರೋಪಿಸಿ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ನೇತೃತ್ವದಲ್ಲಿ ನೂರಾರು ಜೆಡಿಎಸ್, ಬಿಜೆಪಿ ಮುಖಂಡರು ಬುಧವಾರ ಪಟ್ಟಣದ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.



ಇನ್ಸ್‌ಪೆಕ್ಟರ್ ನಡೆ ಖಂಡಿಸಿ ಬಿಜೆಪಿ, ಜೆಡಿಎಸ್ ಮುಖಂಡರು ಠಾಣೆಗೆ ಮುತ್ತಿಗೆ ಹಾಕಿದರು.

3 ದಿನಗಳ ಹಿಂದೆ ಜೆಡಿಎಸ್ ತಾಲೂಕು ಅಧ್ಯಕ್ಷ ರಾಜೇಂದ್ರ, ಮಾಜಿ ಅಧ್ಯಕ್ಷ ನರಸಿಂಹೇಗೌಡ, ಪ್ರಕಾಶ್ ಮತ್ತಿತರರು ತಾಲೂಕಿನ ಜಿ.ಬಿ.ಸರಗೂರಿನ ಜಮೀನಿನ ವಿಚಾರವಾಗಿ ಪೊಲೀಸ್ ಠಾಣೆಗೆ ದೂರು ನೀಡಲು ಬಂದಾಗ ಇನ್ಸ್‌ಪೆಕ್ಟರ್ ಗಂಗಾಧರ್ ಅಗೌರವದಿಂದ ನಡೆದುಕೊಂಡು ಉಡಾಫೆಯಿಂದ ಮಾತನಾಡಿ ಹೊರಗೆ ಕಳುಹಿಸಿದ್ದರಿಂದ ಇಂದು ಠಾಣೆಗೆ ಮುತ್ತಿಗೆ ಹಾಕಿ ಇನ್ಸ್‌ಪೆಕ್ಟರ್ ಅವರನ್ನು ತೀವ್ರ ತರಾಟೆ ತೆಗೆದು ಕೊಂಡರು.

ಈ ವೇಳೆ ಇನ್ಸ್‌ಪೆಕ್ಟರ್ ಗಂಗಾಧರ್ ಮಾತನಾಡಿ, ನಾನು ಯಾರೊಂದಿಗೂ ಅಗೌರವದಿಂದ ನಡೆದುಕೊಂಡಿಲ್ಲ. ಉಡಾಫೆಯಿಂದ ಮಾತನಾಡಿಲ್ಲ ಎಂದಾಗ ಮುಖಂಡರು ಕೆಲ ಸಾಕ್ಷಿ ಆಧಾರದ ಮೇಲೆ ಮಾತನಾಡಿದರು. ಈ ವೇಳೆ ಗಂಗಾಧರ್ ನಾನು ಆ ರೀತಿ ಮಾತನಾಡಿದ್ದರೆ ಕ್ಷಮೆ ಇರಲಿ. ಇನ್ನು ಮುಂದೆ ನಮ್ಮ ಠಾಣೆಯಲ್ಲಿ ಇಂತಹ ಘಟನೆ ಮರುಕಳಿಸದ ರೀತಿ ನೋಡಿಕೊಳ್ಳುವ ಜೊತೆಗೆ ಎಲ್ಲರ ಸಮಸ್ಯೆಗಳಿಗೂ ಸ್ಪಂದಿಸುತ್ತೇನೆ ಎಂದು ಭರವಸೆ ನೀಡಿದ ಹಿನ್ನಲೆಯಲ್ಲಿ ಜೆಡಿಎಸ್, ಬಿಜೆಪಿ ಕಾರ್ಯಕರ್ತರು ಠಾಣೆಯಿಂದ ಹೊರ ನಡೆದರು.

ಈ ವೇಳೆ ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ರಾಜೇಂದ್ರ, ಬಿಜೆಪಿ ಅಧ್ಯಕ್ಷ ಶಂಭೇಗೌಡ, ನರಸಿಂಹೇಗೌಡ, ವೆಂಕಟಸ್ವಾಮಿ, ಎಂ.ಸಿ.ದೊಡ್ಡನಾಯಕ, ಸಿ.ವಿ.ನಾಗರಾಜು, ಮೊತ್ತ ಬಸವರಾಜಪ್ಪ, ಯೋಗನರಸಿಂಹೇಗೌಡ, ಶಾಂತಕುಮಾರ್, ಪುರಸಭಾ ಸದಸ್ಯರಾದ ನಾಗರಾಜು, ನಂಜಪ್ಪ, ಮೆಕಾನಿಕ್ ಸೂರಿ, ವಿವೇಕ್, ಜಿಮ್ ಯಶ್ವಂತ್, ಎಂ.ಡಿ.ಮಂಚಯ್ಯ, ಶಿವಕುಮಾರ್, ರಾಜಣ್ಣ, ನಾಗನಾಯಕ, ನಿಂಗೇಗೌಡ, ರಂಗಪ್ಪ, ಡಿ.ಆರ್.ಮಹೇಶ್, ರಾಜೇಶ್, ನಾಗಣ್ಣ, ರಾಮಚಂದ್ರ, ದಿನೇಶ, ಅಂಕಪ್ಪ, ನಟರಾಜ್, ಜಯರಾಮ್, ಮಂಜು, ಕೃಷ್ಣ, ಅನುಷಾ ಕೋಟೆ, ಮಂಜುಶೆಟ್ಟಿ, ಮಹೇಂದ್ರ, ದಿನೇಶ್, ಸೋಮಚಾರಿ, ರಾಜಪ್ಪ ಇದ್ದರು.

ಮುತ್ತತ್ತಿಯಲ್ಲಿ ಸ್ಮಾರ್ಟ್ ಕ್ಲಾಸ್ ಯೋಜನೆ ಉದ್ಘಾಟನೆ

ವಿವಿಧ ಅಭಿವೃದ್ಧಿ ಕಾಮಗಾರಿಗೆ ಎಂಎಲ್‌ಸಿ ಡಾ.ಯತೀಂದ್ರ ಚಾಲನೆ

ತಿ.ನರಸೀಪುರ, ಮೇ 21– ಹಳ್ಳಿ ಮಕ್ಕಳಿಗೆ ಸ್ಮಾರ್ಟ್ ಶಿಕ್ಷಣ ನೀಡಿದರೆ ಅವರ ಪ್ರತಿಭೆ ಜಾಗತಿಕ ಮಟ್ಟದಲ್ಲಿ ಬೆಳಗಲಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ತಿಳಿಸಿದರು.

ತಾಲೂಕಿನ ಮುತ್ತತ್ತಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ 13.90 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಸ್ಮಾರ್ಟ್ ಕ್ಲಾಸ್ ಯೋಜನೆ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣಕ್ಕೆ ಹೊಸ ಚೈತನ್ಯ ನೀಡಬೇಕಿದೆ. ಹೀಗಾಗಿ ಸರ್ಕಾರಿ ಶಾಲೆಗಳನ್ನು ಸ್ಮಾರ್ಟ್ ಶಾಲೆಗಳನ್ನಾಗಿ ಪರಿವರ್ತಿಸಲಾಗುತ್ತಿದ್ದು, ಇದರಿಂದ ಸಾವಿರಾರು ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ದಾನಿಗಳು, ವಿವಿಧ ಸಂಸ್ಥೆಗಳ ಸಹಭಾಗಿತ್ವ ಪಡೆದು ಇಂತಹ ಶೈಕ್ಷಣಿಕ ಸೌಲಭ್ಯಗಳನ್ನು ಹಳ್ಳಿ ಮಕ್ಕಳಿಗೆ ನೀಡುವ ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಬೇಕಿದೆ ಎಂದರು.

ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಶಾಲೆ ಕಟ್ಟಡ ನಿರ್ಮಾಣವಾಗಿದ್ದು, ಐಟಿಸಿ ಕಂಪನಿ 80 ಸಾವಿರ ರೂ. ವೆಚ್ಚದ ಕಂಪ್ಯೂಟರ್ ಅನ್ನು ಶಾಲೆಗೆ ಕೊಡುಗೆ ನೀಡಿದೆ. ಮಕ್ಕಳು ಇದರ ಸದುಪಯೋಗ ಪಡೆದು ತಮ್ಮ ಶಿಕ್ಷಣ ಮಟ್ಟವನ್ನು ಉತ್ತಮ ಪಡಿಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ವಿವಿಧ ಕಾಮಗಾರಿಗೆ ಭೂಮಿ ಪೂಜೆ: ವರುಣ ಕ್ಷೇತ್ರ ವ್ಯಾಪ್ತಿಯ ಮುತ್ತತ್ತಿ, ಕುರಿಸಿದ್ದನಹುಂಡಿ, ಯಡದೊರೆ ಹಾಗೂ ಗರ್ಗೇಶ್ವರಿ ಗ್ರಾಮದಲ್ಲಿ 5.44 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ನಿರ್ಮಾಣ ಹಾಗೂ ದೇವಸ್ಥಾನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಎಂಎಲ್‌ಸಿ ಡಾ.ಯತೀಂದ್ರ ಕ್ಷೇತ್ರದಲ್ಲಿ ಈಗಾಗಲೇ ನೂರಾರು ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿ ನಡೆದಿವೆ. ಮತ್ತೆ ಕೆಲ ಕಾಮಗಾರಿ ನಡೆಯುತ್ತಿವೆ. ನಮ್ಮ ತಂದೆ ಸಿದ್ದರಾಮಯ್ಯ ಹಾಗೂ ನನಗೆ ಕ್ಷೇತ್ರದ ಜನತೆ ಪ್ರೀತಿಯಿಂದ ಹರಸಿ ಅಧಿಕಾರ ಕೊಟ್ಟಿದ್ದೀರಿ. ಹಾಗಾಗಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿ ನಡೆದಿದ್ದು, ಮತ್ತಷ್ಟು ಅಭಿವೃದ್ಧಿ ಕಾಮಗಾರಿಗಳು ಮಾಡಬೇಕಿರುವುದು ನಮ್ಮ ಕರ್ತವ್ಯ. ಅಲ್ಲದೇ ಆಗಬೇಕಾದ ಅಭಿವೃದ್ಧಿ ಕೆಲಸಗಳ ಬಗ್ಗೆ ಗ್ರಾಮಸ್ಥರು ಪಟ್ಟಿ ನೀಡಿದರೆ ಅದಕ್ಕೂ ಹಣ ಬಿಡುಗಡೆ ಮಾಡಿ ಎಲ್ಲಾ ಕೆಲಸಗಳನ್ನು ಮಾಡಿಕೊಡಲು ನಾವು ಯಾವಾಗಲೂ ಸಿದ್ಧರಾಗಿದ್ದು, ಕ್ಷೇತ್ರದ ಜನತೆ ಆಶೀರ್ವಾದ ನಮ್ಮ ಮೇಲೆ ಸದಾ ಕಾಲ ಹೀಗೆ ಇರಲಿ ಎಂದರು.



ಸ್ಮಾರ್ಟ್ ಕ್ಲಾಸ್ ಯೋಜನೆಯನ್ನು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಉದ್ಘಾಟಿಸಿದರು.

ಹಾರ, ತುರಾಯಿ ಬೇಡ: ಕಾರ್ಯಕ್ರಮಗಳಲ್ಲಿ ಹಾರ ತುರಾಯಿ, ಪೇಟಾ ಯಾವುದನ್ನು ಹಾಕಕೂಡದು ಎಂದು ಖಡಕ್ಕಾಗಿ ಎಂಎಲ್ಸಿ ಡಾ.ಯತೀಂದ್ರ ಹೇಳಿದರು. ಯಡದೊರೆ ಗ್ರಾಮದಲ್ಲಿ ಹಾರ ತುರಾಯಿ ಹಾಕಲು ಮುಗಿ ಬೀಳುತ್ತಿದ್ದ ಕಾರ್ಯಕರ್ತರಲ್ಲಿ ಅವರು ಯಾವುದೇ ಕಾರ್ಯಕ್ರಮಗಳಲ್ಲಿ ಹಾರಾ ತುರಾಯಿ ಬದಲು ಅಂಬೇಡ್ಕರ್ ಸಂವಿಧಾನ ಪುಸ್ತಕ ನೀಡಿ ಗೌರವಿಸಿ ಅಷ್ಟೇ ಸಾಕು ಎಂದು ಮನವಿ ಮಾಡಿದರು.

ಜಿಪಂ ಮಾಜಿ ಸದಸ್ಯ ಕೆ.ಮಹದೇವ್ ಮಾತನಾಡಿ, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗುವ ಮೊದಲು ಗ್ರಾಮ ಹೇಗಿತ್ತು ಈಗ ಹೇಗಿದೆ ಎಂದು ಗ್ರಾಮಸ್ಥರು ಅವಲೋಕನ ಮಾಡಿ ನೋಡಿ. ಗ್ರಾಮದ ಶೇ.95ರಷ್ಟು ರಸ್ತೆ ಅಭಿವೃದ್ಧಿ ಕಂಡಿದೆ. ಯಡದೊರೆ ದೊಡ್ಡ ಗ್ರಾಮವಾದರೂ ಕುಡಿಯಲು ಒಂದೇ ನೀರಿನ ಟ್ಯಾಂಕ್ ಇತ್ತು. ಹೆಚ್ಚುವರಿಯಾಗಿ ಕುರಿಸಿದ್ದನಹುಂಡಿಗೆ ಟ್ಯಾಂಕ್ ನಿರ್ಮಾಣ ಮಾಡಲಾಗಿದೆ. ಇದೀಗ ಯಡದೊರೆ ಕೊನೆ ಭಾಗದ ಜನರಿಗೂ ಕುಡಿಯುವ ನೀರು ದೊರಕುವಂತಾಗಿದೆ. ಪ್ರಾಥಮಿಕ ಮತ್ತು ಪ್ರೌಢಶಾಲೆಗೆ ಹೆಚ್ಚುವರಿ ಕೊಠಡಿಗೆ ಅನುದಾನ ನೀಡಿದ್ದಾರೆ. ಸ್ಥಗಿತಗೊಂಡಿದ್ದ 3 ಕೋಟಿ ವೆಚ್ಚದ ಡಕ್ ಮತ್ತು ಚರಂಡಿ ನಿರ್ಮಾಣ ಕಾರ್ಯ ಆರಂಭಗೊಳ್ಳಲಿದೆ. ಯಡದೊರೆ ಗ್ರಾಮದ 2 ಕಡೆ ಹೈಮಾಸ್ಟ್ ದೀಪ ಅಳವಡಿಸಲಾಗಿದೆ ಸರ್ಕಾರಿ ಪ್ರೌಢಶಾಲೆ ಸಭಾಂಗಣ ಹಾಗೂ ಶಾಲೆ ಮೇಲ್ದರ್ಜೆಗೇರಿಸಲು 30 ಲಕ್ಷ ನೀಡಲಾಗಿದೆ ಎಂದು ವಿವರಿಸಿದರು.

> ಯಡದೊರೆ ಗ್ರಾಮದಲ್ಲಿ ನಮಗೆ ಹೆಚ್ಚಿನ ಬೆಂಬಲ ದೊರಕಿದೆ. ಕಳೆದ ಚುನಾವಣೆಯಲ್ಲಿ ಇಡೀ ಗ್ರಾಮದಲ್ಲಿ ಶೇ.99ರಷ್ಟು ಮತ ನೀಡಿದ್ದೀರಿ. ಹಾಗಾಗಿ ಯಡದೊರೆ ಗ್ರಾಮ ನಮಗೆ ಪ್ರೀತಿ ಪಾತ್ರವಾಗಿದ್ದು, ಗ್ರಾಮಕ್ಕೆ ಆಗಬೇಕಾದ ಯಾವುದೇ ಕೆಲಸ ಇದ್ದರೂ ಅದನ್ನು ಆದ್ಯತೆ ಮೇಲೆ ಮಾಡಿಕೊಡುತ್ತೇವೆ. ಅದು ನಮ್ಮ ಜವಾಬ್ದಾರಿ ಕೂಡ. ಗ್ರಾಮಕ್ಕೆ ಎಲ್ಲಾ ಕೆಲಸ ಆಗಿದ್ದರೂ ಗ್ರಾಮಸ್ಥರು ಅಂಬೇಡ್ಕರ್ ಭವನ, ರಸ್ತೆ ಹಾಗೂ ಬಸ್ ನಿಲ್ದಾಣ ನಿರ್ಮಿಸುವಂತೆ ಮನವಿ ಮಾಡಿದ್ದು, ಆದಷ್ಟು ಬೇಗ ಕೆಲಸ ಆರಂಭಿಸಲು ಕ್ರಮ ಕೈಗೊಳ್ಳುತ್ತೇನೆ. – ಡಾ.ಯತೀಂದ್ರ, ಎಂಎಲ್‌ಸಿ.

ಈ ವೇಳೆ ಗ್ರಾಮಸ್ಥರು ವಿವಿಧ ಸಮಸ್ಯೆಗಳ ಕುರಿತು ಅಹವಾಲು ಸಲ್ಲಿಸಿದರು. ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ನಿರ್ದೇಶಕ ಎನ್.ಅನಿಲ್ ಕುಮಾರ್, ಘಜನಿ ಮಹಾದೇವಸ್ವಾಮಿ, ಹಾಳೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೇಗೌಡ, ಯಡದೊರೆ ಡೈರಿ ಅಧ್ಯಕ್ಷ ಮರಯ್ಯ, ಮಸೂರ್ ಅಹಮದ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮಹೇಶ್, ಮಾಜಿ ಅಧ್ಯಕ್ಷ ಪ್ರಶಾಂತ್ ಬಾಬು, ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್, ಸದಸ್ಯರಾದ ಎನ್.ಸೋಮು, ಸೈಯದ್ ಅಹಮದ್, ಮುದ್ದಬೀರನಹುಂಡಿ ಗುರುಸ್ವಾಮಿ, ಕೆ.ಗಣೇಶ್, ಚೇತನ್, ಮಿಥುನ್, ತುಂಬಲ ಗ್ರಾಪಂ ಅಧ್ಯಕ್ಷ ರಾಮನಂಜಯ್ಯ, ಮಾಜಿ ಉಪಾಧ್ಯಕ್ಷ ಗುಂಡ, ಸದಸ್ಯ ಕಂಬಯ್ಯ, ಆರ್.ಪಿ.ಹುಂಡಿ ನಾಗರಾಜು, ಮುಖ್ಯ ಶಿಕ್ಷಕ ಮಹೇಶ್, ಹಿಂದುಳಿದ ವರ್ಗಗಳ ರಾಜ್ಯ ಕಾರ್ಯದರ್ಶಿ ಎಂ.ರಮೇಶ್, ಗ್ರಾಪಂ ಮಾಜಿ ಸದಸ್ಯ ಹೇಮಂತ್, ಸ್ವಾಮಿ, ಗರ್ಗೇಶ್ವರಿ ಗೋಪಾಲರಾಜು ಸೇರಿದಂತೆ ಕಾರ್ಯಕರ್ತರು, ಗ್ರಾಮಸ್ಥರು ಹಾಜರಿದ್ದರು.

ವಿಜೃಂಭಣೆಯ ಶ್ರೀಚೌಡೇಶ್ವರಿ ಅಮ್ಮನವರ ತೆಪ್ಪೋತ್ಸವ



ಚೌಡೇಶ್ವರಿ ಅಮ್ಮನವರ ತೆಪ್ಪೋತ್ಸವ ನಡೆಯಿತು.

ಸರಗೂರು, ಮೇ 21– ಪಟ್ಟಣದ ನೇಕಾರ ತೊಗಟವೀರ ಕ್ಷತ್ರಿಯ ಸಮಾಜದಿಂದ ಚೌಡೇಶ್ವರಿ ಅಮ್ಮನವರ ವರ್ಧಂತಿ ಹಾಗೂ 85ನೇ ಜ್ಯೋತಿ ಪೂಜಾ ಮಹೋತ್ಸವದ ಅಂಗವಾಗಿ ಕಪಿಲಾ ನದಿಯಲ್ಲಿ ಚೌಡೇಶ್ವರಿ ಅಮ್ಮನವರ ತೆಪ್ಪೋತ್ಸವ ವಿಜೃಂಭಣೆಯಿಂದ ನಡೆಯಿತು.

ಬೆಳಗ್ಗೆ ದೇವಾಲಯದಲ್ಲಿ ಅಭಿಷೇಕ, ಕುಂಕುಮಾರ್ಚನೆ ಹಾಗೂ ಮಧ್ಯಾಹ್ನ 1.30ಕ್ಕೆ ಮಹಾ ಮಂಗಳಾರತಿ ಮಾಡಿ ಪ್ರಸಾದ ವಿತರಿಸಲಾಯಿತು. ಸಂಜೆ 4 ಗಂಟೆಗೆ ಬಣ್ಣದೊಕುಳಿ ಕಾರ್ಯಕ್ರಮ ನೆರವೇರಿತು. 5.30ಕ್ಕೆ ಕಪಿಲಾ ನದಿಯಲ್ಲಿ ಶ್ರೀಚೌಡೇಶ್ವರಿ ಅಮ್ಮನವರ ತೆಪ್ಪೋತ್ಸವ ಭಕ್ತರ ಸಮ್ಮುಖದಲ್ಲಿ ನಡೆಯಿತು.

ಇಂದಿನಿಂದ ಪಟ್ಟಲದಮ್ಮನವರ ಪೂಜಾ ಮಹೋತ್ಸವ

ತಿ.ನರಸೀಪುರ, ಮೇ 21– ಪಟ್ಟಣದ ಪೌರ ಕಾರ್ಮಿಕರ ಕಾಲೋನಿಯಲ್ಲಿ ಶ್ರೀ ಆದಿಪರಾಶಕ್ತಿ ಪಟ್ಟಲದಮ್ಮನವರ ಪೂಜಾ ಮಹೋತ್ಸವ ಮತ್ತು ಕುಂಭಾಭಿಷೇಕ ಹಾಗೂ ಸಪ್ತಮಾತೃಕೆ ಪ್ರತಿಷ್ಠಾಪನೆ ನಡೆಯಲಿದೆ 2 ದಿನಗಳ ಕಾಲ ನಡೆಯಲಿದೆ.

ಮೇ 22 ರಂದು ಸಂಜೆ 5 ಗಂಟೆಗೆ ಶ್ರೀಗುಂಜಾನರಸಿಂಹಸ್ವಾಮಿ ದೇವಸ್ಥಾನ ಬಳಿಯಿಂದ ಕಾವೇರಿ, ಕಪಿಲ ತೀರ್ಥ ಮತ್ತು ಶ್ರೀಆದಿಪರಾಶಕ್ತಿ ಪಟ್ಟಲದಮ್ಮನವರ ಉತ್ಸವ ಮೂರ್ತಿಯನ್ನು ಅಲಂಕೃತ ರಥದಲ್ಲಿ ಪ್ರತಿಷ್ಠಾಪಿಸಿ ನಗಾರಿ, ವಾದ್ಯ ಮೇಳ, ವಿವಿಧ ಕಲಾ ತಂಡಗಳೊಂದಿಗೆ ಶ್ರೀಆದಿಪರಾಶಕ್ತಿ ಪಟ್ಟಲದಮ್ಮ ದೇವಸ್ಥಾನದವರೆಗೆ ಮೆರವಣಿಗೆ ಮಾಡಲಾಗುವುದು. ಮೇ 23ರಂದು ಶ್ರೀಆದಿಪರಾಶಕ್ತಿ ಪಟ್ಟಲದಮ್ಮನವರ ವಿಶೇಷ ಪೂಜೆ ಹಾಗೂ ಸಪ್ತಮಾತೃಕೆಯರ ಪ್ರತಿಷ್ಠಾಪನೆ ಕಾರ್ಯಕ್ರಮ ನಡೆಯಲಿದೆ.

ಮೈಸೂರು ಮಿತ್ರ



ಡೆಲ್ಲಿ ಔಟ್: ಪ್ಲೇಆಫ್ ಪ್ರವೇಶಿಸಿದ ಮುಂಬೈ



ಮುಂಬೈ, ಮೇ 21– ಸೂರ್ಯ ಕುಮಾರ್ ಯಾದವ್ ಅವರ ಅರ್ಧಶತಕ ಹಾಗೂ ಜಸ್ಪ್ರೀತ್ ಬೂಮ್ರಾ, ಮಿಚೆಲ್ ಸ್ಯಾಂಟ್ನರ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಮುಂಬೈ ಇಂಡಿಯನ್ಸ್, ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 59 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಇದರೊಂದಿಗೆ ಆಡಿರುವ 13 ಪಂದ್ಯಗಳ ಪೈಕಿ 8ರಲ್ಲಿ ಗೆಲುವು, 5ರಲ್ಲಿ ಸೋಲು ಕಾಣುವ ಮೂಲಕ 16 ಅಂಕಗಳೊಂದಿಗೆ ಪ್ರಸಕ್ತ ಸಾಲಿನ ಐಪಿಎಲ್ ಪಂದ್ಯಾವಳಿಯ 4ನೇ ತಂಡವಾಗಿ ಮುಂಬೈ ಪ್ಲೇ ಆಫ್‌ಗೆ ಲಗ್ಗೆ ಹಾಕಿತು. ಮತ್ತೊಂದೆಡೆ ಹೀನಾಯ ಸೋಲು ಅನುಭವಿಸಿದ ಡೆಲ್ಲಿ ಕ್ಯಾಪಿಟಲ್ಸ್ 13 ಪಂದ್ಯಗಳಲ್ಲಿ ತಲಾ 6 ಸೋಲು, ಗೆಲುವು ಹಾಗೂ 1 ಪಂದ್ಯ ಡ್ರಾದೊಂದಿಗೆ 13 ಅಂಕಗಳಿಗೆ ಟೂರ್ನಿಯಿಂದ ಔಟಾಯಿತು.

ಇಲ್ಲಿನ ವಾಂಖೇಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 180ರನ್ ಗಳಿಸಿತು. 181 ರನ್‌ಗಳ ಟಾರ್ಗೆಟ್ ಬೆನ್ನತ್ತಿದ ಡೆಲ್ಲಿ ಬ್ಯಾಟಿಂಗ್ ವೈಫಲ್ಯದಿಂದ 18.2 ಓವರ್‌ಗಳಲ್ಲಿ 121 ರನ್‌ಗಳಿಗೆ ಆಲೌಟ್ ಆಗಿ ಸೋಲೊಪ್ಪಿಕೊಂಡಿತು.

ತಂಡದ ಪರ ಕೆಎಲ್.ರಾಹುಲ್ 11, ಸಮೀರ್ ರಿಜ್ವಿ 39, ವಿಪ್ರಾಜ್ ನಿಗಂ 20, ಆಶುತೋಷ್ ಶರ್ಮಾ 18 ರನ್ ಗಳಿಸಿದ್ದು ಬಿಟ್ಟರೆ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಮುಂಬೈ ಪರ ಮಿಚೆಲ್ ಸ್ಯಾಂಟ್ನರ್ ಮತ್ತು ಜಸ್ಪ್ರಿತ್ ಬುಮ್ರಾ ತಲಾ 3, ಟ್ರೆಂಟ್ ಬೋಲ್ಟ್, ದೀಪಕ್ ಚಹಾರ್, ವಿಲ್ ಜಾಕ್ಸ್ ಮತ್ತು ಕರಣ್ ಶರ್ಮಾ ತಲಾ 1 ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ ಪರ 2 ಸಿಕ್ಸರ್ ಒಳಗೊಂಡ ರಿಯಾನ್ ರಿಕೆಲ್ಟನ್ 25 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ರೋಹಿತ್ ಶರ್ಮಾ 5ರನ್ ಗಳಿಸಿ ಔಟಾಗುವ ಮೂಲಕ ಅಭಿಮಾನಿಗಳಿಗೆ ನಿರಾಸೆ ಮಾಡಿದರು. ನಂತರ ಬಂದ ವಿಲ್ ಜಾಕ್ಸ್ 21, ತಿಲಕ್ ವರ್ಮಾ 27 ರನ್ ಗಳಿಸಿದರೇ, ಪಂದ್ಯದಲ್ಲಿ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶನ ನೀಡಿದ ಸೂರ್ಯಕುಮಾರ್ ಯಾದವ್ 43 ಎಸೆತಗಳಲ್ಲಿ 4 ಸಿಕ್ಸರ್, 7 ಬೌಂಡರಿ ಒಳಗೊಂಡ ಅಜೇಯ 73 ರನ್ ಗಳಿಸಿದರು. ಇವರಿಗೆ ಉತ್ತಮ ಸಾಥ್ ನೀಡಿದ ನಮನ್ ಧೀರ್ (ಔಟಾಗದೇ) 24 ರನ್ ಗಳಿಸಿದರು. ಡೆಲ್ಲಿ ಪರ ಮುಕೇಶ್ ಕುಮಾರ್ 2, ದಶ್‌ಮಂಥಾ ಚಮೀರಾ, ಮುಸ್ತಾಫಿಜುರ್ ರೆಹಮಾನ್, ಕುಲ್ದೀಪ್ ಯಾದವ್ ತಲಾ 1 ವಿಕೆಟ್ ಪಡೆದರು. ಸೂರ್ಯಕುಮಾರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	12	9	3	0	18
ಬೆಂಗಳೂರು	12	8	3	1	17
ಪಂಜಾಬ್	12	8	3	1	17
ಮುಂಬೈ	13	8	5	0	16
ಡೆಲ್ಲಿ	13	6	6	1	13
ಕೊಲ್ಕತ್ತಾ	13	5	6	2	12
ಲಕ್ನೋ	12	5	7	0	10
ಹೈದರಾಬಾದ್	12	4	7	1	9
ರಾಜಸ್ಥಾನ್	14	4	10	0	8
ಚೆನ್ನೈ	13	3	10	0	6

ಇಂದಿನ ಪಂದ್ಯ

ಗುಜರಾತ್ ಟೈಟಾನ್
V/S
ಲಕ್ನೋ ಸೂಪರ್ ಜೈಂಟ್ಸ್

ಸಮಯ: ಸಂಜೆ 7.30

ಸ್ಥಳ : ನರೇಂದ್ರ ಮೋದಿ ಕ್ರೀಡಾಂಗಣ, ಅಹಮದಾಬಾದ್

ಮೇ 25 ರಂದು ಪಠ್ಯ ಪುಸ್ತಕ ಉಚಿತ ವಿತರಣೆ

ಮೈಸೂರು, ಮೇ 21– ಮೈಸೂರಿನ ಭಾರತೀಯ ಜೈನ್ ಸಂಘಟನೆ ಮೈಸೂರು ಶಾಖೆ ವತಿಯಿಂದ ವಿದ್ಯಾದಾನ್ ಕಾರ್ಯಕ್ರಮದಡಿಯಲ್ಲಿ ಮೇ 25 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ವಾಣಿ ವಿಲಾಸ ರಸ್ತೆಯಲ್ಲಿರುವ ಶ್ರೀ ತೇರಾಪಂಥ್ ಸಭಾ ಭವನದಲ್ಲಿ ಉಚಿತ ಪಠ್ಯ ಪುಸ್ತಕ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

11 ಮತ್ತು 12ನೇ ತರಗತಿ (ವಿಜ್ಞಾನ ಮತ್ತು ವಾಣಿಜ್ಯಶಾಸ್ತ್ರ), 1ನೇ, 2ನೇ, 3ನೇ ವರ್ಷದ ಪದವಿ (ವಾಣಿಜ್ಯ ಮತ್ತು ಇಂಜಿನಿಯರಿಂಗ್) ಮತ್ತು ಸಿಎ, ಸಿಎಸ್, ಕ್ಯಾಟ್, ನೀಟ್, ಕಾಮೆಡ್–ಕೆ, ವಿದ್ಯಾರ್ಥಿಗಳು ಮೊದಲು ಬಂದವರಿಗೆ ಮೊದಲ ಸೇವೆಯ ಆದ್ಯತೆ ಮೇರೆಗೆ ಪಠ್ಯ ಪುಸ್ತಕಗಳನ್ನು ಉಚಿತವಾಗಿ ಪಡೆಯಬಹುದು. ಹೆಚ್ಚಿನ ಮಾಹಿತಿಗೆ ಪ್ರಾಜೆಕ್ಟ್ ಡೈರೆಕ್ಟರ್ ಅಮಿತ್‌ಜೀ ಚೌಹಾನ್, ಮೊ. 9845112231, 7996335677 ಸಂಪರ್ಕಿಸಬಹುದು.

ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಎರಡು ಜೊತೆ ಉಚಿತ ಸಮವಸ್ತ್ರ ಸರಬರಾಜಿಗೆ ಸೂಚನೆ

ಮೈಸೂರು, ಮೇ 21(ಎಸ್‌ಪಿಎನ್)– 2025–26ನೇ ಸಾಲಿನ ವಿದ್ಯಾವಿಕಾಸ ಯೋಜನೆಯಡಿ ರಾಜ್ಯದ ಎಲ್ಲಾ ಜಿಲ್ಲೆಗಳ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೆ ಎರಡು ಜೊತೆ ಉಚಿತ ಸಮವಸ್ತ್ರ ಸರಬರಾಜು ಮಾಡುವಂತೆ ಶಾಲಾ ಶಿಕ್ಷಣ ಇಲಾಖೆ ಆದೇಶಿಸಿದೆ.

ಬೆಂಗಳೂರು ಮತ್ತು ಮೈಸೂರು ವಿಭಾಗ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳ 1ರಿಂದ 7 ತರಗತಿ ಗಂಡು ಮಕ್ಕಳು ಹಾಗೂ 1–5ನೇ ತರಗತಿ ಹೆಣ್ಣು ಮಕ್ಕಳಿಗೆ ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆ ಸರಬರಾಜು ಮಾಡುವುದರಿಂದ ಸದರಿ ಸ್ಯಾಂಪಲ್‌ಗಳನ್ನು ಪ್ರತ್ಯೇಕವಾಗಿ ಹಾಗೂ ಚೂಡಿದಾರ್ ಮತ್ತು ಎರಡನೇ ಸಮವಸ್ತ್ರಗಳನ್ನು ಮಹಾರಾಷ್ಟ್ರದ ಅರವಿಂದ ಕಾಟನ್ ಈಚಲ ಕಾರಂಜಿ, ರಾಜಸ್ತಾನದ ಸಂಗಂ ಇಂಡಿಯಾ, ಭಿಲ್ವಾರ ಸಂಸ್ಥೆಗಳಿಂದ ಸರಬರಾಜು ಮಾಡುವ ಸ್ಯಾಂಪಲ್‌ಗಳನ್ನ ಪ್ರತ್ಯೇಕವಾಗಿ ವಿತರಿಸಲು ತಿಳಿಸಿದೆ.



ಸಾಂದರ್ಭಿಕ ಚಿತ್ರ

ಕಲಬುರಗಿ ಮತ್ತು ಬೆಳಗಾವಿ ವಿಭಾಗದ ಎಲ್ಲಾ ಜಿಲ್ಲೆಗಳಿಗೆ ಮಹಾರಾಷ್ಟ್ರದ ಪದಮಚಂದ್ ಮಿಲಾಪ್ ಚಂದ್ ಜೈನ್ ಈಚಲ ಕಾರಂಜಿ ಸಂಸ್ಥೆಗಳಿಂದ ಪೂರೈಕೆ ಆಗುವ ಸಮವಸ್ತ್ರ ಬಟ್ಟೆಗಳನ್ನು ಪೂರೈಕೆ ಮಾಡುವಂತೆ ಸೂಚಿಸಿದ್ದಾರೆ. ಇದಕ್ಕೂ ಮುನ್ನ ಕ್ವಾಲಿಟಿ ಚೆಕ್ ಮಾಡುವುದು ಕಡ್ಡಾಯ ಎಂದಿದೆ

ಸಮವಸ್ತ್ರ ಪೂರೈಕೆಯಲ್ಲಿ ಯಾವುದೇ ಲೋಪವಾಗಿರುವುದು ಗಮನಕ್ಕೆ ಬಂದಲ್ಲಿ ಅಥವಾ ದೂರುಗಳು ಬಂದಲ್ಲಿ ಸಂಬಂಧಿಸಿದ ಆಯಾಯ ಜಿಲ್ಲೆ ಮತ್ತು ತಾಲೂಕಿನ ಡಿಡಿಪಿಐ, ಬಿಇಓ, ಜಿಲ್ಲಾ ಮತ್ತು ತಾಲೂಕು ನೋಡಲ್ ಅಧಿಕಾರಿಗಳನ್ನೇ ನೇರ ಹೊಣೆ ಮಾಡಲಾಗುವುದು.

ರಾಜ್ಯದ ವಿವಿಧತಾಲೂಕಿನ ವ್ಯಾಪ್ತಿಗೆ ಬರುವ ಪ್ರತಿ ಶಾಲೆಗೂ ಸಮವಸ್ತ್ರಗಳನ್ನು ಸರಬರಾಜು ಜವಾಬ್ದಾರಿ ಆಯಾಯ ಬಿಇಓಗಳಿದ್ದು, ಯಾವುದೇ ಕಾರಣಕ್ಕೂ ಶಾಲಾ ಮುಖ್ಯ ಶಿಕ್ಷಕರು, ಪ್ರತಿನಿಧಿಗಳ ಮೂಲಕ ಸಮವಸ್ತ್ರ ಸರಬರಾಜು ಕಾರ್ಯ ಕೈಗೊಳ್ಳತಕ್ಕದಲ್ಲ. ಈ ಬಗ್ಗೆ ಶಿಕ್ಷಕರಿಂದ ದೂರುಗಳು ಬಂದಲ್ಲಿ ಸಂಬಂಧಿಸಿದವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು.


ಸಮವಸ್ತ್ರ ದಾಸ್ತಾನು ಸುತ್ತಮುತ್ತ ಸಿಸಿಟಿವಿ ಅಳವಡಿಸಿ, ಮಾನಿಟರಿಂಗ್ ಮಾಡಬೇಕು. ನಿತ್ಯದ ವಿವರಗಳನ್ನು ಗೂಗಲ್ ಮೀಟಿಂಗ್‌ನಲ್ಲಿ ಮಾಹಿತಿ ನೀಡಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಮಂಗಳವಾರ ಆದೇಶಿಸಿದ್ದಾರೆ.

> ರಾಜ್ಯಾದ್ಯಂತ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶೂನ್ಯ ದಾಖಲಾತಿ, ಮುಚ್ಚಿದ ಶಾಲೆ, ಅನಧಿಕೃತ ಶಾಲೆಗಳು ಸಮ ವಸ್ತ್ರಗಳ ಬೇಡಿಕೆ ಸಲ್ಲಿಸಿದ್ದರೂ ಅಂತಹ ಶಾಲೆಗಳಿಗೆ ಸಮವಸ್ತ್ರಗಳನ್ನು ವಿತರಿಸ ಬಾರದು.
>
> – ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ

ಮೈಸೂರಿನಲ್ಲಿ ಕೇಂದ್ರ ಸರ್ಕಾರದ ಸ್ವಚ್ಛ ಸರ್ವೇಕ್ಷಣೆ ಸಮೀಕ್ಷೆ ಮುಕ್ತಾಯ

20 ದಿನ ಸಮೀಕ್ಷೆ ನಡೆಸಿದ ಭಾರತೀಯ ಗುಣಮಟ್ಟ ಮಂಡಳಿಯ ಅಧಿಕಾರಿಗಳ ತಂಡ

- ಬೆಳಗ್ಗೆ 7 ರಿಂದ ರಾತ್ರಿ 7 ಗಂಟೆತನಕ ಸಮೀಕ್ಷೆ
- ರಸ್ತೆ, ಪಾರ್ಕ್, ಕಸ ವಿಂಗಡಣೆ ಸ್ಥಳ ವೀಕ್ಷಣೆ
- ಆ್ಯಪ್‌ನಲ್ಲಿ ಫೋಟೋ, ವಿಡಿಯೋ ಅಪ್‌ಲೋಡ್
- ಜೂನ್ ತಿಂಗಳಾಂತ್ಯದಲ್ಲಿ ಫಲಿತಾಂಶ ಪ್ರಕಟ ಸಾಧ್ಯತೆ



● ಬಾಪುಲಿಂಗರಾಜ್ ಅರಸ್



ಮೈಸೂರು, ಮೇ 21– ಸ್ವಚ್ಛ ಸರ್ವೇಕ್ಷಣೆಯಲ್ಲಿ ಇಡೀ ದೇಶದಲ್ಲೇ ಮೊದಲ ಸ್ಥಾನ ಪಡೆದ ಸಾಂಸ್ಕೃತಿಕ ನಗರಿ ಮೈಸೂರು ಈ ಬಾರಿ ಮಧ್ಯ ಪ್ರದೇಶದ ಇಂದೋರ್ ನಗರವನ್ನು ಹಿಂದಿಕ್ಕಿ ಪ್ರಥಮ ಸ್ಥಾನ ಮುಡಿಗೇರಿಸಿಕೊಳ್ಳುವ ತವಕದಲ್ಲಿದೆ. ಭಾರತದ 10 ಲಕ್ಷಕ್ಕೂ ಹೆಚ್ಚು ಜನಸಂಖ್ಯೆವುಳ್ಳ ನಗರಗಳ ಪಟ್ಟಿಯಲ್ಲಿ ಮೈಸೂರು ಸೇರಿದೆ.

ಸ್ವಚ್ಛ ಸರ್ವೇಕ್ಷಣೆಯಲ್ಲಿ ನಗರಗಳಿಗೆ ರ‍್ಯಾಂಕಿಂಗ್ ನೀಡಲು ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಭಾರತೀಯ ಗುಣಮಟ್ಟ ಮಂಡಳಿ ದೇಶದ ಎಲ್ಲಾ ನಗರಗಳಲ್ಲಿ ಸಮೀಕ್ಷೆ ನಡೆಸುತ್ತಿದೆ. ಅದರಂತೆ ಮೈಸೂರಿನಲ್ಲಿ ಅಧಿಕಾರಿಗಳ ತಂಡ ಹಲವು ಆಯಾಮಗಳಲ್ಲಿ ಸಮೀಕ್ಷೆ ನಡೆಸಿದೆ.

ಭಾರತೀಯ ಗುಣಮಟ್ಟ ಮಂಡಳಿಯ ಆರು ಅಧಿಕಾರಿಗಳ ಒಂದು ತಂಡ ಹಾಗೂ 10 ಅಧಿಕಾರಿಗಳ ಎರಡನೇ ತಂಡ ಮೈಸೂರು ನಗರದಲ್ಲಿ 20 ದಿನಗಳ ಕಾಲ ವಾಸ್ತವ್ಯ ಹೂಡಿ ಬೆಳಗ್ಗೆಯಿಂದ ರಾತ್ರಿಯ ತನಕ ಹಲವು ಸ್ಥಳಗಳಿಗೆ ದಿಢೀರ್ ಭೇಟಿ ನೀಡಿ, ಅಲ್ಲಿನ ಸ್ವಚ್ಛತೆ, ವಾತಾವರಣ ಪರಾಮರ್ಶೆ ನಡೆಸಿದೆ.

20 ದಿನಗಳ ಅವಧಿಯಲ್ಲಿ ಮೈಸೂರಿನ 65 ವಾರ್ಡ್‌ನ ಪ್ರತಿಂದೊಂದು ಬಡಾವಣೆಗೆ, ರಸ್ತೆಗೆ, ಉದ್ಯಾನವನಗಳು, ಗ್ರಂಥಾಲಯಗಳು, ವೃತ್ತಗಳಿಗೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದೆ.

ನಗರದ ಸುತ್ತಮುತ್ತಲಿನ ಕೆರೆ, ಸಾರ್ವಜನಿಕ ಶೌಚಾಲಯ, ಹಸಿ ಕಸ– ಒಣ ಕಸ ಸಂಗ್ರಹಣೆ ಮತ್ತು ವಿಂಗಡಣೆ, ಶೂನ್ಯ ತ್ಯಾಜ್ಯ ನಿರ್ವಹಣೆ, ಎಸ್‌ಟಿಪಿ (ಒಳಚರಂಡಿ ಸಂಸ್ಕರಣಾ ಘಟಕ), ನೀರಿನ ಮಾದರಿ ಪರೀಕ್ಷೆ, ಶಾಲೆಗಳು, ಕಸ ಮುಕ್ತ ವಲಯ ಸೇರಿದಂತೆ ಹಲವು ಸ್ಥಳಗಳಿಗೆ ಭೇಟಿ ನೀಡಿ ಮಾಹಿತಿ ಪಡೆದಿದೆ. ಜೊತೆಗೆ ಆ ಸ್ಥಳಗಳ ಫೋಟೋ ಮತ್ತು ವಿಡಿಯೋವನ್ನು ಸ್ವಚ್ಛ ಸರ್ವೇಕ್ಷಣೆಗಾಗಿ ವ್ಯವಸ್ಥೆ ಮಾಡಿರುವ ಪ್ರತ್ಯೇಕ ಆ್ಯಪ್‌ನಲ್ಲಿ ಸ್ಥಳದಲ್ಲೇ ಅಪ್‌ಲೋಡ್ ಮಾಡಿದ್ದಾರೆ.

ಮೈಸೂರಿನ ಬಹಳಷ್ಟು ರಸ್ತೆಗಳಲ್ಲಿ ಈ ಮೊದಲು ಕಸ ಎಸೆಯುತ್ತಿದ್ದರು. ಹೀಗೆ ರಾಶಿ ರಾಶಿ ಬಿದ್ದ ಕಸದಿಂದ ದುರ್ವಾಸನೆ ಬರುತ್ತಿತ್ತು. ಈ ಹಿನ್ನೆಲೆಯಲ್ಲಿ ಕಸ ಸೇರುವ ಸ್ಥಳದ ಗೋಡೆಯಲ್ಲಿ ವಾಲ್‌ಪೈಂಟ್ ಬಿಡಿಸಲಾಗಿದೆ, ರಂಗೋಲಿ ಹಾಕಲಾಗಿದೆ. ಜೊತೆಗೆ ಜನರು ಕೂರಲು ಕಲ್ಲಿನ ಹಾಸುಗಳನ್ನು ಹಾಕಲಾಗಿದೆ. ಈ ಮೂಲಕ ಕಸ ಹಾಕುವುದರಿಂದ ಮುಕ್ತ ಮಾಡಲಾಗಿದೆ. ಈ ಸ್ಥಳಗಳಿಗೂ ಕೂಡ ಸ್ವಚ್ಛ ಸರ್ವೇಕ್ಷಣೆಯ ಅಧಿಕಾರಿಗಳು ಭೇಟಿ ನೀಡಿದ್ದರು.

ಮೋರಿ ಅಥವಾ ಚರಂಡಿ ಇರುವ ಸ್ಥಳಗಳಲ್ಲಿ ಕಸ ಎಸೆಯಲಾಗುತ್ತಿತ್ತು. ಆದರೆ ಈಗ ಅಂತಹ ಕಡೆ ಕೆಲವು ಅಲಂಕಾರಿಕ ಗಿಡಗಳನ್ನು ಬೆಳೆಸಲಾಗಿದೆ. ಇದರಿಂದ ಮೋರಿ ಇಲ್ಲವೇ ಚರಂಡಿಗಳಿಗೆ ಕಸ ಎಸೆಯುವುದನ್ನು ತಪ್ಪಿಸಲಾಗಿದೆ. ಸ್ವಚ್ಛ ಸರ್ವೇಕ್ಷಣೆಯ ಅಧಿಕಾರಿಗಳನ್ನು ಆ ಸ್ಥಳಗಳಿಗೂ ಕರೆದೊಯ್ದು ವಿವರಣೆ ನೀಡಿದರು.

ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ತಪ್ಪಿಸಲು ಪ್ರತಿದಿನ ಬೆಳಿಗ್ಗೆ ಮನೆ ಮನೆಗೆ ಪೌರಕಾರ್ಮಿಕರು ಆಟೋಗಳಲ್ಲಿ ಹೋಗಿ ಕಸ ಸಂಗ್ರಹಿಸುತ್ತಿದ್ದಾರೆ. ಇದರಿಂದ ಜನರು ಕಸ ಎಸೆಯಲು ಹೊರಹೋಗುವುದು ತಪ್ಪುತ್ತಿದೆ. ಜೊತೆಗೆ ತಮ್ಮ ಸುತ್ತಮುತ್ತಲಿನ ವಾತಾವರಣ ಉತ್ತಮವಾಗಿರುತ್ತದೆ ಎಂಬ ಜಾಗೃತಿ ವಿವರವನ್ನು ಕೂಡ ನೀಡಲಾಯಿತು.

ಸ್ವಚ್ಛ ಸರ್ವೇಕ್ಷಣೆಯ ಭಾರತೀಯ ಗುಣಮಟ್ಟದ ಮಂಡಳಿಯವರು ಭೇಟಿ ನೀಡುವಾಗ ಆರೋಗ್ಯಾಧಿಕಾರಿಗಳು, ಆಯಾ ವಾರ್ಡ್‌ನ ಆಹಾರ ನಿರೀಕ್ಷಕರು, ಪೌರಕಾರ್ಮಿಕ ಸೂಪರ್‌ವೈಸರ್‌ಗಳು ಜೊತೆಗಿದ್ದು ಕೆಲವು ಮಾಹಿತಿ ನೀಡಿದ್ದಾರೆ.

ಉದ್ಯಾನವನಗಳ ಹಸಿರು, ಕಾರಂಜಿ, ರಸ್ತೆಗಳ ಮಧ್ಯೆ ನಿರ್ಮಾಣ ಮಾಡಿರುವ ವೃತ್ತ ಸೇರಿದಂತೆ ಹಲವು ಸ್ಥಳಗಳಿಗೆ ಅಧಿಕಾರಿಗಳು ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದಾರೆ. ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 7 ಗಂಟೆ ತನಕ ನಿರಂತರ ಕಾರ್ಯಾಚರಣೆ ನಡೆಸಿದ್ದಾರೆ. ಸ್ವಚ್ಛ ಸರ್ವೇಕ್ಷಣೆಗಾಗಿ ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಸಿದ್ಧಪಡಿಸಿರುವ 50ಕ್ಕೂ ಹೆಚ್ಚು ಪ್ರಶ್ನಾವಳಿಗಳಿಗೆ ಮಾಹಿತಿ ಕಲೆ ಹಾಕಿ ದೆಹಲಿಯಲ್ಲಿರುವ ಕಂಟ್ರೋಲ್ ರೂಂಗೆ ಅಲ್ಲಲ್ಲೇ ಅಪ್‌ಲೋಡ್ ಮಾಡಿದ್ದಾರೆ.

ಸ್ವಚ್ಛತೆಯಲ್ಲಿ ಇಂದೋರ್‌ಗೆ ಮೊದಲ ಸ್ಥಾನ ಬರಲು ಕಾರಣವೇನು

ಭಾರತದಲ್ಲಿ 2016ರಿಂದ ಕೇಂದ್ರ ಸರ್ಕಾರ ಸ್ವಚ್ಛ ಸರ್ವೇಕ್ಷಣೆ ಆರಂಭಿಸಿತು. ಸತತ 7 ಬಾರಿಯಿಂದ ಮಧ್ಯ ಪ್ರದೇಶದ ಇಂದೋರ್ ಅಗ್ರಸ್ಥಾನ ಪಡೆಯುತ್ತಾ ಬಂದಿದೆ. ಕೈಗಾರಿಕೆಗಳ ರಾಜಧಾನಿ ಎಂದೇ ಕರೆಯುವ ಇಂದೋರ್‌ನಲ್ಲಿ ವ್ಯವಸ್ಥಿತವಾಗಿ ಕಸ ಸಂಗ್ರಹಣೆ, ವಿಂಗಡಣೆ, ಸ್ವಚ್ಛತೆ ಕಾಪಾಡಿಕೊಳ್ಳಲಾಗುತ್ತಿದೆ.

ಇಂದೋರ್‌ನಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ ಅನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ತ್ಯಾಜ್ಯ ಪ್ರಮಾಣ ಅಲ್ಲಿ ಗಣನೀಯವಾಗಿ ಇಳಿಕೆಯಾಗಲು ಇದು ಮೂಲ ಕಾರಣವಾಗಿದೆ.

ಇಂದೋರ್ ನಗರದಲ್ಲಿ 4.65 ಲಕ್ಷ ಕುಟುಂಬಗಳಿದ್ದು, 70.543 ವಾಣಿಜ್ಯ ಸಂಸ್ಥೆಗಳು ಕಸ ತ್ಯಾಜ್ಯವನ್ನು ವ್ಯವಸ್ಥಿತವಾಗಿ ಪ್ರತ್ಯೇಕಿಸುತ್ತವೆ. ಹೀಗೆ ಸಂಗ್ರಹಗೊಂಡ ಕಸವನ್ನು ವಿವಿಧ ಘಟಕಗಳಲ್ಲಿ ಸಂಸ್ಕರಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿದೆ. ಅಲ್ಲಿ ಪ್ರತಿದಿನ ಸುಮಾರು 692 ಟನ್ ಹಸಿ ಹಾಗೂ 693 ಟನ್ ಒಣ ತ್ಯಾಜ್ಯ, 179 ಟನ್ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹವಾಗುತ್ತಿದೆ. ಬಯಲು ಮುಕ್ತ ಶೌಚಾಲಯ ವ್ಯವಸ್ಥೆ ಕಡ್ಡಾಯವಾಗಿದ್ದು, ಒಂದು ರಸ್ತೆಯಲ್ಲೂ ಕಸ ಕಂಡು ಬರುವುದಿಲ್ಲ ಸ್ವಚ್ಛತೆಗೆ ಇಂದೋರ್ ಜನರು ಅಷ್ಟು ಪ್ರಾಮುಖ್ಯತೆ ನೀಡಿದ್ದಾರೆ. ಈ ಕಾರಣದಿಂದ ಇಂದೋರ್ ನಗರಕ್ಕೆ ಸತತ 7 ಬಾರಿ ಸ್ವಚ್ಛ ಸರ್ವೇಕ್ಷಣೆಯಲ್ಲಿ ಅಗ್ರಸ್ಥಾನ ಬರುತ್ತಿದೆ.

ಕಸಮುಕ್ತ ನಗರದಲ್ಲಿ ಮೈಸೂರಿಗೆ 1 ಅಥವಾ 3ನೇ ಸ್ಟಾರ್ ರೇಟಿಂಗ್ ಬರುವುದು ಖಚಿತ!

ಸ್ವಚ್ಛ ಸರ್ವೇಕ್ಷಣೆಗಾಗಿ ಭಾರತೀಯ ಗುಣಮಟ್ಟ ಮಂಡಳಿಯ ಅಧಿಕಾರಿಗಳು ಮೈಸೂರಿನಲ್ಲಿ 20 ದಿನ ವಾಸ್ತವ್ಯ ಹೂಡಿ ಮಾಹಿತಿ ಕಲೆಹಾಕಿದ್ದಾರೆ. ಪ್ರಾಯಶಃ ಜೂನ್ ತಿಂಗಳಾಂತ್ಯದಲ್ಲಿ ಫಲಿತಾಂಶ ಪ್ರಕಟವಾಗುವ ಸಾಧ್ಯತೆ ಇದೆ ಎಂದು ಮೈಸೂರು ನಗರಪಾಲಿಕೆ ಆರೋಗ್ಯಾಧಿಕಾರಿ ಡಾ. ವೆಂಕಟೇಶ್ ತಿಳಿಸಿದ್ದಾರೆ.

ಸ್ವಚ್ಛ ಸರ್ವೇಕ್ಷಣೆಯಲ್ಲಿ ಆರಂಭದಲ್ಲಿ ಮೈಸೂರು ಅಗ್ರಸ್ಥಾನ ಪಡೆದಿತ್ತು. ತರುವಾಯ 8ನೇ ಸ್ಥಾನಕ್ಕೆ ತೃಪ್ತಿ ಪಟ್ಟುಕೊಳ್ಳಬೇಕಾಯಿತು. ಆದರೆ ಈ ಬಾರಿ ನಮಗೆ ಮೊದಲ ಸ್ಥಾನ ಬಂದೇ ಬರುತ್ತದೆ ಎಂಬ ವಿಶ್ವಾಸವಿದೆ.

ಕಸ ಮುಕ್ತ ನಗರದಲ್ಲಿ 1, 3, 5, 8 ಮತ್ತು 12 ನೇ ಸ್ಥಾನದವರೆಗೆ ಸ್ಟಾರ್ ರೇಟಿಂಗ್ ನೀಡಲಾಗುತ್ತದೆ. ಕಳೆದ ಬಾರಿ ಮೈಸೂರು 5 ನೇ ಸ್ಟಾರ್ ರೇಟಿಂಗ್ ಪಡೆದಿತ್ತು. ಆದರೆ ಈ ಬಾರಿ ಮೈಸೂರು ನಗರಪಾಲಿಕೆಯ ಪೌರಕಾರ್ಮಿಕರು ಕಸ ಮುಕ್ತ ಮಾಡುವಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದು, 1 ಅಥವಾ 3 ನೇ ಸ್ಟಾರ್ ರೇಟಿಂಗ್ ಬರುವ ನಿರೀಕ್ಷೆ ಹೊಂದಿದ್ದೇವೆ.

ಸ್ವಚ್ಛ ಸರ್ವೇಕ್ಷಣೆಯಲ್ಲಿ ಮಧ್ಯಪ್ರದೇಶದ ಇಂದೋರ್‌ಗೆ ಮೊದಲ ಸ್ಥಾನ ಬರಲು ಹಲವು ಕಾರಣಗಳಿವೆ. ಸ್ವಚ್ಛತೆಗಾಗಿ ಅಲ್ಲಿನ ನಗರ ಪಾಲಿಕೆ ಹೆಚ್ಚಿನ ಹಣ ಮೀಸಲಿಟ್ಟಿದೆ. ಕಸ ಸಂಗ್ರಹಕ್ಕಾಗಿ ಹೆಚ್ಚಿನ ವಾಹನಗಳಿವೆ.

ರಸ್ತೆ ಬದಿ ಕಸ ಸಂಗ್ರಹಿಸುವ ಸ್ವೀಪಿಂಗ್ ಮಿಷನ್ ಮೈಸೂರಿನಲ್ಲಿ 4 ಇದ್ದರೆ, ಇಂದೋರ್ ನಗರದಲ್ಲಿ 10 ಸ್ವೀಪಿಂಗ್ ಮೆಷಿನ್ ಇದೆ. ನಮಗಿಂತ 5 ಲಕ್ಷ ಹೆಚ್ಚಿನ ಜನಸಂಖ್ಯೆ ಅಲ್ಲಿದೆ. ಸ್ವಚ್ಛತೆಗಾಗಿ ಪೌರಕಾರ್ಮಿಕರ ಸಂಖ್ಯೆ ಕೂಡ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಬೆಳಿಗ್ಗೆ, ಮಧ್ಯಾಹ್ನ ಹಾಗೂ ರಾತ್ರಿ ಮೂರು ಬಾರಿ ಪೌರಕಾರ್ಮಿಕರು ಸ್ವಚ್ಛತಾ ಕಾರ್ಯ ಕೈಗೊಳ್ಳುತ್ತಾರೆ. ಈಗಿರುವಾಗ ಖಂಡಿತವಾಗಿ ಸ್ವಚ್ಛತೆ ಕಾಪಾಡಬಹುದು.

ನಮ್ಮ ನಗರವನ್ನು ಸ್ವಚ್ಛವಾಗಿಡಬೇಕು, ನಮ್ಮ ನಗರಕ್ಕೆ ಭೇಟಿ ನೀಡುವವರಿಗೆ ಸುಂದರವಾಗಿ ಕಾಣಬೇಕು ಎಂಬ ಮನೋಭಾವ ಇಂದೋರ್ ಜನರಲ್ಲಿದೆ. ಅದೇ ರೀತಿಯ ಜಾಗೃತಿ ಮೈಸೂರಿನ ಜನರಲ್ಲಿ ಇದ್ದರೆ ನಾವೂ ಸ್ವಚ್ಛತೆ ಕಾಪಾಡಬಹುದು. ಆದರೆ, ಈಗ ಮೈಸೂರಿನ ಜನರಲ್ಲಿ ಹೆಚ್ಚಿನ ಅರಿವು ಇದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾಮನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಿಷನ್ ಇಂಪಾಸಿಬಲ್ (ಇಂ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹಿಟ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೀ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಡೆವಿಲ್ಸ್ ಡಬಲ್ ನೆಕ್ಸ್ಟ್ ಲೆವಲ್ (ತ)	4 ಪ್ರದರ್ಶನಗಳು
ಸಂಗಂ	
ರೆಟ್ರೋ (ತ)	4 ಪ್ರದರ್ಶನಗಳು
ಲಿಡೋ	
ಯುದ್ಧಕಾಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ರೆಟ್ರೋ (ತ):** ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, **ಥಂಡರ್‌ಬೋಲ್ಟ್ಸ್ (3ಡಿ)(ಇಂ):** ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	**ಥಂಡರ್‌ಬೋಲ್ಟ್ಸ್ (3ಡಿ)(ಇಂ):** ಬೆ.10.25ಕ್ಕೆ, **ಯುದ್ಧಕಾಂಡ 2 (ಕ):** ಮ.1.05ಕ್ಕೆ, ಸಂ.4.05ಕ್ಕೆ, **ತುಡಾರಂ (ಮ):** ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	**ಹಿಟ್ ದಿ ಥರ್ಡ್ ಕೇಸ್ (ತೆ):** ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, **ಟೂರಿಸ್ಟ್ ಫ್ಯಾಮಿಲಿ (ತ):** ಮ.1.10ಕ್ಕೆ.
ಸ್ಕ್ರೀನ್ 4	**ಪಪ್ಪಿ (ಕ):** ಬೆ.10.30ಕ್ಕೆ, **ರೈಡ್ 2 (ಹಿಂ):** ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, **ರೆಟ್ರೋ (ತ):** ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ಬ್ಯಾಡ್ ನ್ಯೂಸ್ (ಹಿಂ):** ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	**ಕಲ್ಕಿ 2898 ಎಡಿ (ಕ):** ಬೆ.11.40ಕ್ಕೆ, ಸಂ.6.05ಕ್ಕೆ, **ಟ್ವಿಸ್ಟರ್ಸ್ (ಇಂ):** ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	**ಇಂಡಿಯನ್ 2 (ತ):** ಬೆ.9.40ಕ್ಕೆ, ಸಂ.4.05ಕ್ಕೆ, **ಟ್ವಿಸ್ಟರ್ಸ್ (ಇಂ):** ಮ.1.20ಕ್ಕೆ, ರಾ.7.45ಕ್ಕೆ, **ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ):** ರಾ.10.30ಕ್ಕೆ.
ಸ್ಕ್ರೀನ್ 4	**ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ):** ಬೆ.11.30ಕ್ಕೆ, **ಕಲ್ಕಿ 2898 ಎಡಿ (3ಡಿ)(ತೆ):** ಮ.2.50ಕ್ಕೆ, **ಹಿರಣ್ಯ (ಕ):** ಸಂ.6.30ಕ್ಕೆ, **ಕಲ್ಕಿ 2898 ಎಡಿ (ಹಿಂ):** ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಪ್ರೀತಿಯ ಹುಚ್ಚ (ಕ):** ಬೆ.11ಕ್ಕೆ, **ರಿಕ್ಷಾ ಚಾಲಕ (ಕ):** ಮ.1.35ಕ್ಕೆ, **ಕೋರ (ಕ):** ಸಂ.6.35ಕ್ಕೆ, **ಖದೀಮ (ಕ):** ಸಂ.6.35ಕ್ಕೆ, **ಟೆನ್ ಅವರ್ಸ್ (ತ):** ರಾ.9.15ಕ್ಕೆ.
ಸ್ಕ್ರೀನ್ 2	**ಯುದ್ಧಕಾಂಡ 2 (ಕ):** ಮ.1ಕ್ಕೆ, ಸಂ.6.35ಕ್ಕೆ, **ಒಡೆಲ್ಲಾ (ತೆ):** ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	**ವೀರ ಚಂದ್ರಹಾಸ (ಕ):** ಮ.1ಕ್ಕೆ, ಮ.3.55ಕ್ಕೆ, **ಗುಡ್ ಬ್ಯಾಡ್ ಅಗ್ಲಿ (ತ):** ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	**ಯುದ್ಧಕಾಂಡ 2 (ಕ):** ಬೆ.10.50ಕ್ಕೆ, **ವಾಮನ (ಕ):** ಮ.1.35ಕ್ಕೆ, ಸಂ.4.10ಕ್ಕೆ, **ಅರ್ಜುನ್ s/o ವೈಜಯಂತಿ (ತೆ):** ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, **ಶ್ರೀಕಾಂತ್ (ಹಿಂ):** ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, **ಸ್ಟಾರ್ (ತ):** ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, **ಅರಮನೈ 4 (ತ):** ಮ.12.30ಕ್ಕೆ, **ಪ್ರತಿನಿಧಿ 2 (ತೆ):** ಮ.12.55ಕ್ಕೆ, ರಾ.9.15ಕ್ಕೆ, **ರಾಮನ ಅವತಾರ (ಕ):** ಮ.3.40ಕ್ಕೆ, **ಅಂಜನೀಪುತ್ರ (ಕ):** ಸಂ.4ಕ್ಕೆ, **ಗ್ರೇ ಗೇಮ್ಸ್ (ಕ):** ಸಂ.6.35ಕ್ಕೆ, **ಕೃಷ್ಣಮ್ಮ (ತೆ):** ರಾ.7.25ಕ್ಕೆ, **ಮಾರಿವಿಲ್ಲಿನ್ ಗೋಪುರಂಗಲ್ (ಮ):** ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೆ.ಆರ್.ರಕ್ಷಿತ್ ಎಂಡಿಎ ಆಯುಕ್ತರು?

ಮೈಸೂರು, ಮೇ 21(ಆರ್‌ಕೆ)– ಮೈಸೂರು ಉಪ ವಿಭಾಗದ ಅಸಿಸ್ಟೆಂಟ್ ಕಮಿಷ್ನರ್ ಕೆ.ಆರ್.ರಕ್ಷಿತ್ ಅವರನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ಕಮಿಷ್ನರ್ ಆಗಿ ನಿಯೋಜಿಸಲಾಗುತ್ತಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.



ಹಾಲಿ ಆಯುಕ್ತ ಎ.ಎನ್.ರಘುನಂದನ್, ಸ್ವಯಂ ವರ್ಗಾವಣೆ ಕೋರಿದ್ದು, ಅವರ ಸ್ಥಾನಕ್ಕೆ ಕೆ.ಆರ್.ರಕ್ಷಿತ್ ಅವರನ್ನು ವರ್ಗಾಯಿಸುವ ಪ್ರಕ್ರಿಯೆಗೆ ಮುಖ್ಯಮಂತ್ರಿಗಳು ಅನುಮೋದನೆ ನೀಡಿದ್ದು, ಕಡತವು ನಗರಾಭಿವೃದ್ಧಿ ಸಚಿವರ ಮೂಲಕ ಇಲಾಖಾ ಕಾರ್ಯದರ್ಶಿಗಳಲ್ಲಿದೆ. ನಾಳೆ (ಮೇ 22) ವರ್ಗಾವಣೆ ಅಧಿಕೃತ ಆದೇಶ ಹೊರ ಬೀಳಲಿದೆ ಎಂದು ಸರ್ಕಾರದ ನಂಬಲರ್ಹ ಮೂಲಗಳು ತಿಳಿಸಿವೆ.

2014ರ ತಂಡದ ಕೆಎಎಸ್ ಅಧಿಕಾರಿಯಾದ ರಕ್ಷಿತ್ ಅವರು ಮೈಸೂರು ತಾಲೂಕು ತಹಶೀಲ್ದಾರ್ ಆಗಿ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (MMC&RI) ಮುಖ್ಯ ಆಡಳಿತಾಧಿಕಾರಿ (CAO) ಯಾಗಿ ಸೇವೆ ಸಲ್ಲಿಸಿದ ಬಳಿಕ ಪ್ರಸ್ತುತ ಉಪವಿಭಾಗಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಎ.ಎನ್.ರಘುನಂದನ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ ಈವರೆಗೆ ಯಾವುದೇ ಗೊಂದಲ, ಕಪ್ಪು ಚುಕ್ಕೆ ಇಲ್ಲದಂತೆ ಕೆಲಸ ಮಾಡಿದ್ದೇನೆ. ಬೆಂಗಳೂರಿನಲ್ಲಿ ಯಾವುದಾದರೊಂದು ಹುದ್ದೆ ನಿರ್ವಹಿಸಬೇಕೆಂಬ ಉದ್ದೇಶದಿಂದ ವರ್ಗಾವಣೆ ಕೋರಿದ್ದೇನೆ, ಅದಕ್ಕೆ ಸರ್ಕಾರ ಸ್ಪಂದಿಸಿದೆ ಎಂದರು.

ಬಸ್ ತಂಗುದಾಣದಲ್ಲಿ ಭಿಕ್ಷುಕಿ ಸಾವು

ಮೈಸೂರು,ಮೇ 21(ಪಿಎಂ)– ನಗರದ ಬೆಂಗಳೂರು ರಸ್ತೆಯಲ್ಲಿ ಸಿದ್ದಿಖ್‌ನಗರದ ದ್ವಾರದ ಎದುರಿರುವ ಪ್ರಯಾಣಿಕರ ಬಸ್ ತಂಗುದಾಣದಲ್ಲಿ ಭಿಕ್ಷುಕಿ ಮೃತಪಟ್ಟಿರುವ ಘಟನೆ ಬುಧವಾರ ನಡೆದಿದೆ.

ಭಿಕ್ಷುಕಿಯ ಮೃತದೇಹದಲ್ಲಿ ಯಾವುದೇ ಗಾಯಗಳು ಕಂಡು ಬಾರದ ಹಿನ್ನೆಲೆಯಲ್ಲಿ ಹೃದಯಾಘಾತದಿಂದ ಈಕೆ ಮೃತಪಟ್ಟಿರುವ ಶಂಕೆ ವ್ಯಕ್ತಪಡಿಸಿರುವ ಎನ್‌ಆರ್ ಠಾಣೆ ಪೊಲೀಸರು, ಮೈಸೂರು ವೈದ್ಯಕೀಯ ಕಾಲೇಜಿನ ಶವಾಗಾರದಲ್ಲಿ ಮೃತದೇಹವನ್ನು ಇರಿಸಿದ್ದಾರೆ.

ಸುಮಾರು 40ರಿಂದ 45 ವರ್ಷ ವಯೋಮಾನದ ಈಕೆ ಸಿದ್ದಿಖ್‌ನಗರದ ಸುತ್ತಮುತ್ತಲ ಪ್ರದೇಶದಲ್ಲಿ ಭಿಕ್ಷೆ ಮಾಡಿಕೊಂಡಿದ್ದಳು ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ. ತಂಗುದಾಣದಲ್ಲಿ ಈಕೆ ಬಹಳ ಸಮಯದಿಂದ ಮಲಗಿರುವುದನ್ನು ಕಂಡ ಸ್ಥಳೀಯರು ಮೃತಪಟ್ಟಿರುವ ಶಂಕೆಯಿಂದ ಮಾಹಿತಿ ನೀಡಿದರು. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿ ಆಕೆ ಸಾವನ್ನಪ್ಪಿರುವುದು ಖಾತ್ರಿಯಾಯಿತು ಎಂದು ಪೊಲೀಸರು ತಿಳಿಸಿದರು.

ಆಕೆಯ ಬಗ್ಗೆ ಹೆಸರು ಸೇರಿದಂತೆ ಯಾವುದೇ ಮಾಹಿತಿ ತಿಳಿದುಬಂದಿಲ್ಲ. ಮೈಸೂರು ವೈದ್ಯಕೀಯ ಕಾಲೇಜಿನ ಶವಾಗಾರದ ಕೋಲ್ಡ್ ಸ್ಟೋರೇಜ್‌ನಲ್ಲಿ ಮೃತದೇಹ ಇರಿಸಲಾಗಿದೆ. ಎರಡು ದಿನಗಳು ಮೃತದೇಹವನ್ನು ಅಲ್ಲಿಯೇ ಇರಿಸಿ, ವಾರಸುದಾರರು ಬಂದಿಲ್ಲವೆಂದರೆ ಮರಣೋತ್ತರ ಪರೀಕ್ಷೆ ನಡೆಸಿ ಅಂತ್ಯಕ್ರಿಯೆಗೆ ಕ್ರಮ ವಹಿಸಲಾಗುವುದು ಎಂದು ಪೊಲೀಸರು ಮಾಹಿತಿ ನೀಡಿದರು. ಎನ್‌ಆರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.







CHANGE OF NAME

I, **GANESH SHETTY**, R/at No. 2606/1, 2nd Cross, Kalidasa Road, V V Mohalla, Mysuru - 570002, do hereby solemnly affirm & state on oath that, I have changed my name from **GANESHA SHETTY** to **GANESH SHETTY** on my own free will vide affidavit sworn in before **Notary Vasudeva on 22/03/2025.** In future in all my documents, deeds dealings and all transactions whatsoever, I will sign & identified as **GANESH SHETTY**

Sd/- GANESH SHETTY

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು





ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಮೈಸೂರು ಜೆ.ಎಲ್.ಬಿ.ರಸ್ತೆ, ಮೈಸೂರು

ಸಂಖ್ಯೆ:ಮೈನಪ್ರಾ/ವಿ.ತ–5ಬಿ/2025–26 ದಿನಾಂಕ :20.05.2025

ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ನಗರಾಭಿವೃದ್ಧಿ ವಿಶ್ವಸ್ಥ ಮಂಡಳ ವತಿಯಿಂದ ಶ್ರೀ.ಎಸ್.ರಾಮಚಂದ್ರ ರಾವ್ ರವರಿಗೆ ದಿ:15.04.1986 ರಂದು ಕೆಸರೆ 3ನೇ ಹಂತ ಬಡಾವಣೆಯ ನಿವೇಶನ ಸಂಖ್ಯೆ: 1233 ಮಂಜೂರಾಗಿದ್ದು, ದಿನಾಂಕ: 26.12.1992 ರಂದು ಸ್ವಾಧೀನ ಪತ್ರ ನೀಡಲಾಗಿರುತ್ತದೆ.

ಶ್ರೀ.ಎಸ್.ರಾಮಚಂದ್ರ ರಾವ್ ರವರು ದಿ:03.03.1993ರಂದು ಶ್ರೀ.ರಾಮಯ್ಯ ಬಿನ್ ಲೇ||ತಿಮ್ಮಯ್ಯ ರವರಿಗೆ ನೋಂದಾಯಿತವಲ್ಲದ ವಿಲ್ ನೀಡಿರುತ್ತಾರೆ.

ನಂತರ ಶ್ರೀ.ಎಸ್.ರಾಮಚಂದ್ರ ರಾವ್ ರವರು 4ನೇ ಪುಸ್ತಕದ 3ನೇ ಸಂಪುಟದಲ್ಲಿ 360ನೇ ಪುಟದಲ್ಲಿ 1044ನೇ ನಂಬರಾಗಿ, ದಿನಾಂಕ: 03.03.1993ರಂದು ಶ್ರೀ.ರಾಮಯ್ಯ ಬಿನ್ ಲೇ||ತಿಮ್ಮಯ್ಯ ರವರಿಗೆ ನೋಂದಾಯಿತ ಜಿಪಿಎ ನೀಡಿರುತ್ತಾರೆ.

ನಂತರ ಶ್ರೀ.ಎಸ್.ರಾಮಚಂದ್ರ ರಾವ್ ರವರು 1ನೇ ಪುಸ್ತಕದ 1534ನೇ ಸಂಪುಟದಲ್ಲಿ 204–207ನೇ ಪುಟದಲ್ಲಿ 4609ನೇ ನಂಬರಾಗಿ, ದಿನಾಂಕ: 06.02.1997ರಂದು ಶ್ರೀ.ಎಸ್.ರಾಮಣ್ಣ ಬಿನ್ ಶ್ರೀ.ಸಿದ್ದಯ್ಯ ರವರಿಗೆ ನೋಂದಾಯಿತ ಶುದ್ಧ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ.

ಅದರಂತೆ ಶ್ರೀ.ಎಸ್.ರಾಮಣ್ಣ ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಸದರಿ ನಿವೇಶನಕ್ಕೆ ಕ್ರಯವರ್ಗಾವಣೆ ಹಾಗೂ ಕ್ರಯಪತ್ರ ನೀಡಬೇಕೆಂದು ಕೋರಿರುತ್ತಾರೆ. ಮೇಲ್ಕಂಡ ನಿವೇಶನಕ್ಕೆ ಕ್ರಯಪತ್ರ ನೀಡುವ ಕುರಿತು ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ ಸಲ್ಲಿಸಬಹುದು. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

(ಸ್ಥಳೀಯ ಪತ್ರಿಕೆ ಹಾಗೂ ರಾಜ್ಯ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಲು ಸೂಚಿಸಿದೆ)

ಸಹಿ/–ವಿಶೇಷ ತಹಸೀಲ್ದಾರ್ ವಲಯ ಕಛೇರಿ–5ಬಿ
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು



